ಸಂಪುಟ : 13 Volume | ಸಂಚಿಕೆ : 234 Issue | ಪುಟಗಳು : 08 Pages | ಸೋಮವಾರ 03 ನವೆಂಬರ 2025 | ₹2 | PRGINO.120927(RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಬಳ್ಳಾರಿ | ವಿಜಯನಗರ | ಕೊಪ್ಪಳ & ಬಾಗಲಕೋಟೆ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

'ತಿರಸ್ಕಾರಕ್ಕೆ ತಿರಸ್ಕಾರವೇ ಮದ್ದಲ್ಲ ಪ್ರೀತಿಯೇ ದಿವ್ಯಾಷಧ'.
ಗೌತಮ ಬುದ್ಧ


4 ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ಶಿಣ್ಣೂರ ಆಯ್ಕೆ
2 ಕನ್ನಡ ಭಾಷೆ ಸುಸಂಸ್ಕೃತಿ, ಸಮನ್ವಯದ ಭಾಷೆ
8 ವಿಶ್ವಭಾವೈಕ್ಯತೆ ಭಾಷೆ ಕನ್ನಡ ಕಾಯಕದ ಭೂಮಿ ಕರ್ನಾಟಕ

# ಉಪಗ್ರಹ ಬಾಹುಬಲಿ ಯಶಸ್ವಿ

## 4.4 ಟನ್ ಸಿಎಂಎಸ್03 ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದ ಭಾರತ ಇಸ್ರೋ ಸಾಧನೆ ಮತ್ತೊಂದು ಗರಿ

ನವದೆಹಲಿ: ಇಸ್ರೋ ತನ್ನ ಅತಿದೊಡ್ಡ ಎಲ್‌ವಿಎಂ3-ಎಂ5 ರಾಕೆಟ್ ಮೂಲಕ 4.4 ಟನ್ ತೂಕದ ಸಂವಹನ ಉಪಗ್ರಹ ಅಒ-03 ಅನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. 15 ವರ್ಷಗಳ ಜೀವಿತಾವಧಿ ಹೊಂದಿರುವ ಈ ಉಪಗ್ರಹವು ಭಾರತೀಯ ಭೂಪ್ರದೇಶ ಮತ್ತು ವಿಶಾಲ ಸಾಗರ ಪ್ರದೇಶದಲ್ಲಿ ಸಂವಹನ ಸೇವೆಗಳನ್ನು ಒದಗಿಸಲಿದೆ. ಈ ಮೂಲಕ ಇಸ್ರೋ ಭಾರತೀಯ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದೆ. ಈ ಉಪ್ರಗ್ರಹ ಸಂವಹನ ಕ್ಷೇತ್ರದಲ್ಲಿ ಹಾಗೂ ನೌಕಾಪಡೆಗಳ ಕಾರ್ಯಾಚರಣೆಗೆ ಪೂರಕ ನೆರವು ನೀಡಲಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತೊಂದು ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಭಾನುವಾರದಂದು, ಇಸ್ರೋ ತನ್ನ ಅತಿದೊಡ್ಡ ಭಾರ ಎತ್ತುವ ರಾಕೆಟ್ ಆದ ಎಲ್‌ವಿಎಂ3-ಎಂ5 ಮೂಲಕ ಭಾರತದಿಂದ ಉಡಾಯಿಸಲಾದ ಅತಿ ಹೆಚ್ಚು ತೂಕದ (4.4 ಟನ್) ಸಂವಹನ ಉಪಗ್ರಹ ಅಒ-03 ಅನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. ಬಾಹುಬಲಿ ಎಂದೇ ಖ್ಯಾತಿ ಪಡೆದಿರುವ ಈ ಉಪಗ್ರಹದ ಉಡಾವಣೆಯನ್ನು ಶ್ರೀಹರಿಕೋಟಾದ




ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡಾವಾಣಾನೆಲೆಯಿಂದ ಕೈಗೊಳ್ಳಲಾಗಿದೆ.

ಉಡಾವಣೆಯಾದ ಸುಮಾರು 16 ನಿಮಿಷಗಳ ನಂತರ, ಒಟ್ಟು 642 ಟನ್ ತೂಕದ ಮತ್ತು 43.5 ಮೀಟರ್ ಎತ್ತರದ ರಾಕೆಟ್, 4410 ಕೆಜಿ ತೂಕದ ಸಿಎ???ಸ್-03 ಉಪಗ್ರಹವನ್ನು ಜಿಯೋ-ಸಿಂಕ್ರೊನಸ್ ಟ್ರಾನ್ಸ್ ಫರ್ ಆರ್ಬಿಟ್‌ಗೆ ಇರಿಸಿತು. ಉಡಾವಣೆಯ ಸಮಯದಲ್ಲಿ ಎಸ್ 200 ಬೂಸ್ಟರ್‌ಗಳು ಜ್ವಲಿಸಿ, 131.14 ಸೆಕೆಂಡುಗಳ ನಂತರ ಸುಮಾರು 62.3 ಕಿ.ಮೀ. ಎತ್ತರದಲ್ಲಿ ಬೇರ್ಪಟ್ಟವು. 106.94 ಸೆಕೆಂಡುಗಳಲ್ಲಿ ಎಲ್110 ಹಂತವು ಜ್ವಲಿಸಿ,

2ನೇ ಪುಟನೋಡಿ

## ಸಿ.ಎಂ ಖುರ್ಚಿ ಖಾಲಿ ಇಲ್ಲ ಗೊಂದಲ ಸೃಷ್ಟಿಸಬೇಡಿ. ಸಚಿವ ರಾಮಲಿಂಗಾರಡ್ಡಿ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಸಧೃಡವಾಗಿ ಕಾರ್ಯನಿರ್ವಹಿಸುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಿ.ಎಂ ರಾಮಲಿಂಗಾರಡ್ಡಿ ಎಂದು ಪೋಸ್ಟ್ ಮಾಡುತ್ತಿದ್ದಾರೆ. ಇದು ಸರಿಯಾದ ಕ್ರಮವಲ್ಲ, ರಾಜ್ಯದಲ್ಲಿ ಸಿ.ಎಂ ಖುರ್ಚಿ ಖಾಲಿ ಇಲ್ಲ. ನನ್ನ ಮೇಲೆ ಹಾಗೂ ಪಕ್ಷದ ಮೇಲೆ ಗೌರವವಿದ್ದರೆ ಆ ತರಹದ ಮೆಸೆಜ್ ಹಾಕಬಾರದು ಎಂದು ಸಾರಿಗೆ ಹಾಗೂ ಮುಜರಾಯಿ ಸಚಿವ ರಾಮಲಿಂಗಾರಡ್ಡಿ ರವರು ಸ್ಪಷ್ಟಪಡಿಸಿದ್ದಾರೆ.

ಪಕ್ಷದ ಸಂಘಟನೆಗೆ ಒತ್ತು ನೀಡಬೇಕು. ಸರ್ಕಾರ ಸಧೃಡವಾಗಿ ಮುನ್ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ.

## ಸಸೂತ್ರವಾಗಿ ನಡೆದ ಕೆ-ಸೆಟ್ ಪರೀಕ್ಷೆ




ಬೆಂಗಳೂರು, ನ.2- ಪದವಿ ಕಾಲೇಜುಗಳ ಉಪನ್ಯಾಸಕರ ಅರ್ಹತಾ ಪರೀಕ್ಷೆಯಾದ ಕೆ-ಸೆಟ್ ಪರೀಕ್ಷೆಯು ಕ್ಯಾಮೆರಾ ಕಣ್ಗಾವಲಿನಲ್ಲಿ ಇಂದು ನಡೆಯಿತು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಕಟ್ಟುನಿಟ್ಟಿನ ಬಿಗಿಕ್ರಮಗಳನ್ನು ಕೈಗೊಂಡು, ಈ ಬಾರಿಯೂ ಮುಖಚಹರೆ ಪತ್ತೆ ತಂತ್ರಜ್ಞಾನದ ಮೂಲಕ ಅಭ್ಯರ್ಥಿಗಳನ್ನು ತಪಾಸಣೆ ಮಾಡಿಯೇ ಪರೀಕ್ಷಾ ಕೇಂದ್ರಕ್ಕೆ ಬಿಡಲಾಗಿತ್ತು.

ಒಟ್ಟು 33 ವಿಷಯಗಳಿಗೆ ನಡೆದ ಕೆ-ಸೆಟ್ ಪರೀಕ್ಷೆಯನ್ನು 1.36 ಲಕ್ಷ ಮಂದಿ ತೆಗೆದುಕೊಂಡಿದ್ದರು. ಬೆಂಗಳೂರು ಸೇರಿದಂತೆ 11 ಜಿಲ್ಲೆಗಳ 316 ಕೇಂದ್ರಗಳಲ್ಲಿ ಪರೀಕ್ಷೆಯನ್ನು ಪ್ರಾಧಿಕಾರ ನಡೆಸಿದೆ.

ಬೆಂಗಳೂರಿನಲ್ಲಿ ಎಲ್ಲ 33 ವಿಷಯಗಳ ಪರೀಕ್ಷೆ ನಡೆಯಿತು, ಉಳಿದ ಜಿಲ್ಲೆಗಳಲ್ಲಿ 11 ವಿಷಯಗಳ ಪರೀಕ್ಷೆ ಗಳು ಮಾತ್ರ ನಡೆದಿವೆ.

## ಬಿಜೆಪಿ ಪ್ರತಿಭಟನೆಗೆ ಡಿಕೆಶಿ ತಿರುಗೇಟು

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು, ನ.2 -ನಗರದ ಸಂಚಾರದಟ್ಟಣೆಯ ಸಮಸ್ಯೆ ನಿವಾರಣೆಗೆ ನಮ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಸುರಂಗ ರಸ್ತೆ, ಸ್ಟಿ?ಲ್ ಬ್ರಿಡ್ಜ್ ನಂತಹ ಯೋಜನೆಗಳು ಬೇಡ ಎಂದು ವಿರೋಧಿಸುವ ಬಿಜೆಪಿ ಅಥವಾ ಯಾವುದೇ ಸಂಘಟನೆಗಳಾದರೂ ಸಮಸ್ಯೆಗೆ ಪರಿಹಾರ ಏನೆಂದು ಸೂಚಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸವಾಲು ಹಾಕಿದ್ದಾರೆ. ಸುರಂಗ ರಸ್ತೆ ವಿರೋಧಿಸಿ ಬಿಜೆಪಿ ವತಿಯಿಂದ ನಡೆಯುತ್ತಿರುವ ಸಹಿ ಸಂಗ್ರಹ ಅಭಿಯಾನಕ್ಕೆ ತಿರುಗೇಟು ನೀಡಿದ ಅವರು, ಯೋಜನೆ ಬಗ್ಗೆ ಜಾಗೃತಿ ಅವರು ಮೂಡಿಸುವುದು ಒಳ್ಳೆಯದು ಎಂದಿದ್ದಾರೆ.

ಯೋಜನೆಯ ಬಗ್ಗೆ ಅಧ್ಯಯನ ನಡೆಸಲು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅಧ್ಯಕ್ಷತೆಯಲ್ಲೇ ಸಮಿತಿ ರಚಿಸುತ್ತೆ?ನೆ. ಅವರು ಸೂಚಿಸುವ ತಂತ್ರಜ್ಞರನ್ನೆ? ಸದಸ್ಯರನ್ನಾಗಿ ನೇಮಿಸಲು ನಮ ಸರ್ಕಾರ ಸಿದ್ಧವಿದೆ. ರಾಜಕಾರಣ ಬೇಡ, ಅವರೇ ಅಧ್ಯಯನ ಮಾಡಿ ಪರಿಹಾರದ ಬಗ್ಗೆ ವರದಿ ನೀಡಲಿ ಎಂದು ಅವರು ಹೇಳಿದರು.

ಲಾಲ್‌ಬಾಗ್ ಯಾರ ಆಸ್ತಿಯೂ ಅಲ್ಲ. ಲಾಲ್‌ಬಾಗ್ ಹಾಳು ಮಾಡುವಷ್ಟು ಮೂರ್ಖ ನಾನಲ್ಲ. ಅದರ ಇತಿಹಾಸ ಗೊತ್ತಿದೆ. ಎಷ್ಟು ಜಾಗ ಬಳಕೆಯಾಗುತ್ತಿದೆ ಎಂಬುದು ಗೊತ್ತಿದೆ. ಮೆಟ್ರೊ? ಯೋಜನೆ ಬೆಂಗಳೂರಿನಲ್ಲಿ ಸುರಂಗ ಮಾರ್ಗದಲ್ಲಿ ಹೋಗಿಲ್ಲವೇ? ಎಸ್?.ಎಂ. ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ನಗರಾಭಿವೃದ್ಧಿ ಸಚಿವರಾಗಿದ್ದ ತಾವು 10 ದೇಶಗಳಿಗೆ ಭೇಟಿ ನೀಡಿ ಅಧ್ಯಯನ ನಡೆಸಿ ವರದಿ ನೀಡಿದ್ದೆ.

2ನೇ ಪುಟನೋಡಿ

## ಮಹಿಳೆಕೊಲೆ: ವ್ಯಕ್ತಿಯ ಬಂಧನ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ, ನ.2 -ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ನರಸಲಗಿ ಗ್ರಾಮದ ಮಹಿಳೆಯೋರ್ವಳನ್ನು ಕಾಲುವೆಯ ನೀರಲ್ಲಿ ಮುಳುಗಿಸಿ ಕೊಲೆ ಮಾಡಿದ್ದ ವ್ಯಕ್ತಿಯನ್ನು ಬಾಗಲಕೋಟೆ ಗ್ರಾಮೀಣ ಠಾಣೆ ಪೋಲಿಸರು ಪತ್ತೆ ಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನರಸಲಗಿ ಗ್ರಾಮದ ಬಸಮ್ಮ ಈರಯ್ಯ ಮಠ(40) ಎಂಬ ಮಹಿಳೆಯನ್ನು ಅದೇ ಗ್ರಾಮದ ಬಸನಗೌಡ ಚನ್ನಪ್ಪಗೌಡ ಕೊಳಗೇರಿ(32) ಎಂಬಾತ ಅಕ್ಟೋಬರ್ 18 ರಂದು ಕಾರಿನಲ್ಲಿ ಕರೆದುಕೊಂಡು ಬಂದು ಬಾಗಲಕೋಟೆ ತಾಲ್ಲೂಕಿನ ನಾಗರಾಳ ಬಳಿಯ ಆಲಮಟ್ಟಿ ಬಲದಂಡೆ ಕಾಲುವೆಯ ನೀರಲ್ಲಿ ಮುಳುಗಿಸಿ ಸಾಯಿಸಿದ್ದಾನೆ.

ಪೋಲಿಸರು ಸ್ಥಳಕ್ಕೆ ತೆರಳಿ ಅನಾಮದೇಯ ಮಹಿಳೆಯ ಶವ ಸಿಕ್ಕಿರುವ ಬಗ್ಗೆ ಜಾಹೀರ ಹೊರಡಿಸಿದ್ದರು. ಮನೆಗೆ ಬಾರದ ಬಸಮ್ಮಳಿಗಾಗಿ ಮನೆಯವರು ಹುಡುಕಾಟ ನಡೆಸುತ್ತಿರಬೇಕಾದರೆ ಅ.21 ರಂದು ಬಾಗಲಕೋಟೆ ಜಿಲ್ಲಾ ಆಸ್ಪತ್ರೆಯಲ್ಲಿ ಅನಾಮಧೇಯ ಶವವಿರುವ

2ನೇ ಪುಟನೋಡಿ

## ತೋಟದಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರು ರೈತರ ಮೇಲೆ ತೋಳ ದಾಳಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್.ನ.02:-ಔರಾದ ತಾಲೂಕಿನ ಮೂರು ಗ್ರಾಮಗಳಲ್ಲಿ ಒಂದೇ ದಿನ ಜಮೀನಿನಲ್ಲಿ ಕೃಷಿ ಕೆಲಸ ಮಾಡುತ್ತಿದ್ದ ನಾಲ್ವರ ಮೇಲೆ ತೋಳ ದಾಳಿ ಮಾಡಿರುವ ಘಟನೆ ಶುಕ್ರವಾರ ನಡೆದಿದ್ದು, ಗಾಯಾಳುಗಳಿಗೆ ಬ್ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಜೀರ್ಗಾ (ಬಿ) ಗ್ರಾಮದ ಮಂಗಲಾ ಶರಣಯ್ಯ ಸ್ವಾಮಿ , ರೇವಪ್ಪ ಪ್ರಭು ಬಂಬುಳಗೆ, ಆಲೂರ (ಬಿ) ಗ್ರಾಮದ ರುಕ್ಮಿಣಿಬಾಯಿ ಮೇತ್ರೆ ಮತ್ತು ಜೋಜನಾ ಗ್ರಾಮದ ಲಾಲಮ್ಮ ಕಾಂಬ್ಳೆ ಗಾಯಗೊಂಡ ರೈತರು. ಹೊಲದಲ್ಲಿ ಕೆಲಸ ಮಾಡುವಾಗ ಏಕಾಏಕಿ ದಾಳಿ ಮಾಡಿ, ತಲೆಗೆ, ಕಿವಿಗೆ, ಬೆನ್ನಿಗೆ, ಸೋಂಟಕ್ಕೆ ದಾಳಿ ಮಾಡಿ ಗಾಯಗೊಳಿಸಿದೆ. ನಾಲ್ಕು ಜನರಿಗೆ ತೀವ್ರ ಗಾಯವಾಗಿದ್ದು ಗಾಯಾಳುಗಳಿಗೆ ಸಂತಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಬ್ರಿಮ್ಸ್ ಆಸ್ಪತ್ರೆ ರವಾನಿಸಲಾಗಿದೆ. ಆರಣ್ಯ ಇಲಾಖೆ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದಾರೆ. ಸಂತಪುರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶಿಲನೆ ನಡೆಸುತ್ತಿದ್ದಾರೆ.

## ಯುವಕರು ದುಶ್ಚಟಗಳಿಗೆ ಬಲಿಯಾಗಬೇಡಿ : ಹಾರಕೂಡ ಶ್ರೀಗಳು



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:-ನ2 ಯುವಕರು ದುಶ್ಚಟಗಳಿಗೆ ಬಲಿಯಾಗಬೇಡಿ ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ತಿಳಿಸಿದರು. ತಾಲೂಕಿನ ಸಿರಗಾಪೂರ ಗ್ರಾಮದ ಶ್ರೀ ಮಹದೇವ ದೇವಸ್ಥಾನದ ಆವರಣದಲ್ಲಿ ಹಾರಕೂಡ ಶ್ರೀಗಳ 63ನೇ ಜನ್ಮ ದಿನೋತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಯುವಕರು ಮೊಬೈಲ್ ಹಾಗೂ ಕುಡಿತದ ಚಟದಿಂದ ದೂರ ಇರಬೇಕು. ಹೆತ್ತ ತಾಯಿಗೆ ಮಾತೃ ಭೂಮಿಗೆ ಮಹತ್ವ ನೀಡಬೇಕು. ಇವರ ರುಣ ತೀರಿಸಲಾಗದು ಗ್ರಾಮದಲ್ಲಿ ಕುಟುಂಬದಲಾಗಲಿ ಕಲಹ ಮಾಡದೆ ಎಲ್ಲರೂ ಒಗ್ಗಟ್ಟಾಗಿ ಇರಬೇಕು ಎಂದರು. ಕಲಬುರ್ಗಿಯ ಮಾಜಿ ಲೋಕಸಭೆ ಸದಸ್ಯರಾದ ಡಾ. ಉಮೇಶ್ ಜಾದವ ಮಾತನಾಡಿ ಮುಂದಿನ ಪೂಜ್ಯರ 64 ನೇಯ ಜನ್ಮ ದಿನಾಚರಣೆಯನ್ನು ದೆಹಲಿಯಲ್ಲಿ ಆಚರಿಸಲಾಗುವುದು. ಇದಕ್ಕೆ ಪೂಜ್ಯರು ಸಮ್ಮತಿ ನೀಡಿದ್ದಾರೆ ಎಂದರು. ಹುಮನಾಬಾದ ಶಾಸಕರಾದ ಡಾ ಸಿದ್ದಲಿಂಗಪ ಪಾಟೀಲ ಮಾತನಾಡಿ ಪೂಜ್ಯರ ಆಶೀರ್ವಾದಿಂದ ಇಂದು ನಾನು ಶಾಸಕನಾಗಿದೇನೆ ಮುಂದೆಯೂ ಸಹ ಪೂಜ್ಯರ ಆಶೀರ್ವಾದ ಇರಲಿ ಎಂದರು. ಶಾಸಕ ಶರಣು ಸಲಗರ ಅಧ್ಯಕ್ಷತೆ ವಹಿಸಿ ಮಾತನಾಡಿ ಮುಂದಿನ ವರ್ಷ ದೆಹಲಿಯಲ್ಲಿ ನಡೆಯಲಿರುವ ಪೂಜ್ಯರ ಜನ್ಮ ದಿನಾಚರಣೆಗೆ ಈ ಗ್ರಾಮದ ಸುಮಾರು 63 ಜನರಿಗೆ ವಿಮಾನದಲ್ಲಿ ಕರೆದು ಕೊಂಡು ಹೋಗುವುದಾಗಿ

2ನೇ ಪುಟನೋಡಿ

## ಅನುಭವ ಮಂಟಪ ಉತ್ಸವ ರಥಯಾತ್ರೆಗೆ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ: 12ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪವು ಸಂಸದೀಯ ಪ್ರಜಾಪ್ರಭುತ್ವಕ್ಕೆ ಅಡಿಪಾಯವಾಗಿದೆ ಎಂದು ಅನುಭವ ಮಂಟಪದ ಸಂಚಾಲಕ ಪೂಜ್ಯ ಶ್ರೀ ಶಿವಾನಂದ ಸ್ವಾಮೀಜಿ ನುಡಿದರು. ಪಟ್ಟಣದ ಗಾಂಧಿವೃತ್ತದಲ್ಲಿ 46ನೇ ಶರಣಕಮ್ಮಟ, ಅನುಭವಮಂಟಪ ಉತ್ಸವಲ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಬಸವಣ್ಣನವರು ವಿಶ್ವದ ತತ್ವಜ್ಞಾನಿ, ಸಮಾಜಸುಧಾರಕ ಮತ್ತು ಸಮಾನತೆಯ ಹರಿಕಾರರು, ಅವರು ಜಾತಿರಹಿತ ಸಮಾಜವನ್ನು ಕಟ್ಟಿದರು. ಅಂದು ಅವರು ಕಟ್ಟಿದ ಅನುಭವಮಂಟಪವು ಸೌಂದರ್ಯತೆ, ಸಹೋದರತ್ವ ಭಾವೈಕ್ಯತೆಯ ಮೌಲ್ಯಾಧಾರಿತ ಸಿದ್ಧಾಂತಗಳ ಸಂದೇಶಗಳನ್ನು ಜಾಗತಿಕ ಪ್ರಪಂಚಕ್ಕೆ ಸಾರಿದೆ. ಈ ನಿಟ್ಟಿನಲ್ಲಿ ಬಸವಾದಿ ಶರಣರ ಉದ್ದೇಶಗಳು ಈಡೇರಿಸುವದಕ್ಕಾಗಿ ನಾವೆಲ್ಲರೂ ಇಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕೆಂದು ತಿಳಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ

2ನೇ ಪುಟನೋಡಿ

## ಚಿತಾಗಾರ ಯಂತ್ರ ಅಳವಡಿಸದೇ ಹಣ ಲಪಟಾಯಿಸಿದವರ ವಿರೂದ್ಧ ಕ್ರಮ ಜರುಗಿಸಿ: ಶಶಿ ಹೊಸಳ್ಳಿ





ಮಲ್ಲಮ್ಮ ನುಡಿ ವಾರ್ತೆ

ಬೀದರ್.02:-ನಗರದ ಬಿ.ವಿ ಭೂಮರಡ್ಡಿ ಮಹಾವಿದ್ಯಾಲಯದ ಎದುರಿರುವ ಹಿಂದು ಧರ್ಮಿಯರ ರುದ್ರ ಭೂಮಿಯಲ್ಲಿ ಚಿತಾಗಾರ ಯಂತ್ರ ಅಳವಡಿಸದೇ 49,97,309 ರೂಪಾಯಿ ಲಪಟಾಯಿಸಿದ ಪೌರಾಡಳಿತ ಸಚಿವ ರಹಿಮ್ ಖಾನ್ ಅವರ ಸಹೋದರ ಸಂಬಂದಿ ನಾಸಿರ್ ಖಾನ್ ಹಾಗೂ ಅವರಿಗೆ ಸಾಥ ನೀಡಿದ ಮಹಾನಗರ ಪಾಲಿಕೆ ಅಧಿಕಾರಿಗಳ ವಿರೂದ್ಧ ಕಠಿಣ ಕ್ರಮ ಜರುಗಿಸಬೇಕೆಂದು ನಗರ ಸಭೆ ಸದಸ್ಯರು ಹಾಗೂ ಬಿಜೆಪಿ ನಗರ ಘಟಕದ ಅಧ್ಯಕ್ಷರಾದ ಶಶಿ ಹೊಸಳ್ಳಿ ತಿಳಿಸಿದರು.

ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, 2021-22ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಎರಡು ಚಿತಾಗಾರ ಯಂತ್ರಗಳು ಮಂಜೂರಿಯಾಗಿದ್ದವು. ನಗರದ ಹೊರವಲಯದಲ್ಲಿರುವ ಶ್ರೀ ನರಸಿಂಹಸ್ವಾಮಿ ದೇವಸ್ಥಾನದ ಎದುರಿರುವ ರುದ್ರ ಭೂಮಿಯಲ್ಲಿ ಹಾಗೂ ಬಿವಿಬಿ ಕಾಲೇಜು ಎದುರಿರುವ ರುದ್ರ ಭೂಮಿಯಲ್ಲಿ ಅಳವಡಿಸಲು ಉದ್ದೇಶಿಸಲಾಗಿತ್ತು. ನರಸಿಂಹಸ್ವಾಮಿ ದೇವಸ್ಥಾನದ ಎದುರಿನ ರುದ್ರಭೂಮಿಯಲ್ಲಿ ಒಂದು ಚಿತಾಗಾರ ಯಂತ್ರ ಅಳವಡಿಸಲಾಗಿದ್ದರೂ ಅದು ಇಂದಿಗೂ ಕಾರ್ಯ ಮಾಡುತ್ತಿಲ್ಲ. ಇನ್ನೊಂದು ಯಂತ್ರ ಖರಿದಿಸದೇ ಫೆಬ್ರವರಿ 22 2024 ರಂದು ಮೇಲೆ ತಿಳಿಸಿದ ಹಣದ ಚೆಕ್ ಡ್ರಾ ಮಾಡಿ ಲಪಟಾಯಿಸಿ ಹೆಣ ಸುಡುವುದರ ಮೇಲೂ ಕಾಂಗ್ರೆಸ್ ನಾಯಕರು ರಾಜಕೀಯ ಮಾಡಿರುತ್ತಾರೆ ಎಂದರು. ಬೀದರ್ ಮಹಾನಗರ ಪಾಲಿಕೆ ಈಗ ಭ್ರಷ್ಟಾಚಾರದ ಗೂಡಾಗಿದೆ. ಇಲ್ಲಿಯ ವರೆಗೆ ಎರಡು ಸಾಮಾನ್ಯ ಸಭೆಗಳು ನಡೆದರೂ ಮಾಧ್ಯಮದವರನ್ನು ದೂರವಿಟ್ಟು ಸಭೆ ಮಾಡಿರುತ್ತಾರೆ. ಮಹಾನಗರ ಪಾಲಿಕೆಗೆ ಬೀದರ್ ಸುತ್ತಮುತ್ತಲಿನ ಹಳ್ಳಿಗಳಾದ ಮರಖಲ, ಗಾದಗಿ, ಹಮಿಲಾಪುರ, ಅಗ್ರಹಾರ, ಚಿಕಪೇಟ್, ಜಮಿಸ್ತಾನಪುರ ಸೇರಿದಂತೆ 12 ಹಳ್ಳಿಗಳನ್ನು ಸೇರಿಸಲಾಗಿದೆ. ಆದರೆ ಈ ಹಳ್ಳಿಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಆಗದೆ ಜನ ಪರಿತಪಿಸುತ್ತಿರುವರು. ಈ 12 ಹಳ್ಳಿಗಳ ಜನರನ್ನು ಸೇರಿಸಿ ಈ ತಿಂಗಳ 7ರಂದು ಮಹಾನಗರ ಪಾಲಿಕೆ ಅವರಣದಲ್ಲಕಿ ಸುಮಾರು 2 ಸಾವಿರ ಜನ ಸೇರಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡು ನಂತರ ಭ್ರಷ್ಟಾಚಾರದಲ್ಲಿ ಶಾಮಿಲಾಗಿರುವವರ ಅಣಕು ಶವಯಾತ್ರ ನಡೆಸಲಾಗುವುದು. ಬಿವಿಬಿ ಕಾಲೇಜಿನ ಎದುರಿನ ರಸ್ತೆಯಲ್ಲಿಯೆ ಅಣಕು ಶವಗಳನ್ನು ಸುಡುವ ಮೂಲಕ ವಿನೂತನ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು. ಭ್ರಷ್ಟಾಚಾರದ ಕತೆ ಇಷ್ಟಕ್ಕೆ ಮುಗಿಯದೇ ನಿತ್ಯ ಅಮರ ಖಂಡ್ರೆ, ಪೆಟ್ರೋಲ್ ಪಂಪ್‌ನಿಂದ ಸುಮಾರು 40 ಸಾವಿರ ಡಿಜೆಲ್ ಹಾಕಿಸಲಾಗುತ್ತಿದೆ. ಪ್ರತಿ ತಿಂಗಳಿಗೆ ಸುಮಾರು 12 ಲಕ್ಷ ಮೊತ್ತದೆ ಡಿಜೆಲ್ ಹಾಕಿಸಿ ಅದರಲ್ಲಿಯೂ ಸಹ ಭ್ರಹ್ಮಾಂಡ ಭ್ರಷ್ಟಾಚಾರ ಎಸಗಲಾಗಿದೆ. ಕೆಲವು ತಿಂಗಳುಗಳ ಹಿಂದೆ ನಿತ್ಯ ಸುಮಾರು 90 ಸಾವಿರ ವರೆಗೆ ಡಿಸೆಲ್ ಬಿಲ್ ಅಳವಡಿಸಲಾಗಿದೆ. ಪ್ರೊಪೆಶನರಿ ಐಎಎಸ್ ಅಧಿಕಾರಿ ರಮ್ಯಾ

2ನೇ ಪುಟನೋಡಿ

## ಓಂ ನಗರ ಬಡಾವಣೆಯ ಮೂಲಭೂತ ಸೌಲಭ್ಯಗಳ ಕೊರತೆ ಬಡಾವಣೆ ನಾಗರೀಕರಿಂದ ಶಾಸಕರಿಗೆ ಮನವಿ ಪತ್ರ ಸಲ್ಲಿಕೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ನಗರದ ವಾರ್ಡ್ ನಂ.31 ರ ಓಂ ನಗರ ಬಡಾವಣೆ ನಿವಾಸಿಗಳು ಅಗತ್ಯ ಮೂಲಭೂತ ಸೌಲಭ್ಯಗಳು ಒದಗಿಸುವಂತೆ ಶಾಸಕಿ ಖನಿಜಾ ಫಾತೀಮಾ ಕಾಂಗ್ರೆಸ್ ಮುಖಂಡರಾದ ಫರಾಜ್ ಉಲ್ ಇಸ್ಲಾಂ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಕಳೆದ ನಾಲ್ಕು ದಶಕಗಳಿಂದ ಬಡಾವಣೆಯಲ್ಲಿ ರಸ್ತೆ ನಿರ್ಮಾಣವಾಗಿಲ್ಲ, ವಾಹನ ಸವಾರರು ಪರದಾಡುವಂತಾಗಿದ್ದು ಕೂಡಲೇ ಸಿಸಿ ರಸ್ತೆ ನಿರ್ಮಾಣ ಮಾಡಲು ಮಂಜೂರಾತಿ ನೀಡಿ ಕಾಮಗಾರಿ ಕೈಗೊಳ್ಳುವಂತೆ ಒತ್ತಾಯಿಸಿದರು.

ಶಾಸಕಿ ಖನಿಜಾ ಫಾತೀಮಾ ಹಾಗೂ ಕಾಂಗ್ರೆಸ್ ಮುಖಂಡರಾದ ಫರಾಜ್ ಉಲ್ ಇಸ್ಲಾಂ ಅವರು ಓಂ ನಗರ ಬಡಾವಣೆಯಲ್ಲಿ ಖುದ್ದಾಗಿ ಭೇಟಿ ನೀಡಿ ಕುಂದುಕೊರತೆಗಳ ಬಗ್ಗೆ ಪರಿಶೀಲನೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅತಿಶೀಘ್ರದಲ್ಲೇ ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಅದರಂತೆ ಬಡಾವಣೆಯಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಇದ್ದು, 24/7 ನೀರಿನ ಸರಬರಾಜು ವ್ಯವಸ್ಥೆ, ಗುರುಕುಲ ಶಾಲೆಯಿಂದ ವಿರೇಂದ್ರ ಪಾಟೀಲ್ ನಿವಾಸದವರೆಗೆ ಒಳಚರಂಡಿ ಮತ್ತು ರಸ್ತೆ ಎರಡೂ ಬದಿಗಳಲ್ಲಿ ನಾಲೆ ನಿರ್ಮಾಣ ಮಾಡುವಂತೆ ಆಗ್ರಹಿಸಿ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಡಾವಣೆಯ ಮುಖಂಡರಾದ ವೀರಕುಮಾರ ಮಾಲಿಪಾಟೀಲ್, ಶಿವಯೋಗಪ್ಪಾ, ನಾಗೇಂದ್ರಪ್ಪ, ಮಲ್ಲಿಕಾರ್ಜುನ, ಜಯಪ್ರಕಾಶ, ಅಂಬಾಜಿ, ವಿಠಲ್ ಪೂಜಾರಿ, ಸುನೀಲಕುಮಾರ, ಶಿವರಾಜ, ಪ್ರಭಾಕರ್ ಸೇರಿದಂತೆ ಇತರರು ಇದ್ದರು.

## ಟೀಂ ಇಂಡಿಯಾ ಅಬ್ಬರಕ್ಕೆ ಸಾಕ್ಷಿಯಾದ ವಾಷಿಂಗ್ಟನ್ ಸುಂದರ್! ಭಾರತದ ಮುಂದೆ ಮಂಡಿಯೂರಿದ ಆಸ್ಟ್ರೇಲಿಯಾ

# ಒಂದನೇ ಪುಟದಿಂದ

## ಹಣ ಲಪಟಾಯಿಸಿದವರ ವಿರೂದ್ಧ ಕ್ರಮ

ಅವರು ಅದನ್ನು ಪರಿಶಿಲಿಸಿದಾಗ ಪೌರಾಡಳಿತ ಸಚಿವರ ಆಪ್ತರು, ಸಂಬಂಧಿಕರ, ಭ್ರಷ್ಟಾಚಾರಕುರಿತಪ್ರಶ್ನೆಮಾಡಿದಆರ್.ಟಿ.ಐಕಾರ್ಯಕರ್ತರ ವಾಹನಗಳಿಗೆ ಡಿಜೆಲ್ ಹಾಕಿಸಿ ಹಿಂದೆ ಪ್ರತಿ ತಿಂಗಳಿಗೆ 28 ಲಕ್ಷದ ವರೆಗೆ ಬಿಲ್ ಅಳವಡಿಸಿ ವ್ಯಾಪಕ ಭ್ರಷ್ಟಾಚಾರ ಎಸಗಿದ್ದಾರೆ. ಈ ಕುರಿತು ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಿ ತಪ್ಪಿತಸ್ತೆ ವಿರೂದ್ಧ ಕಠಿಣ ಕ್ರಮ ಜರುಗಿಸಬೇಕು. ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಿದ ಅಧಿಕಾರಿಗಳನ್ನು ಸೇವೆಯಿಂದಅಮಾನತುಗೊಳಿಸಬೇಕೆಂದುಹೊಸಳ್ಳಿಆಗ್ರಹಿಸಿದರು. ಎಸ್.ಇ.ಪಿ, ಟಿ.ಎಸ್.ಪಿಹಣದಲ್ಲಿಭಾರಿಅವ್ಯವಹಾರ: ಶಿವಕುಮಾರಭಾವಿಕಟ್ಟಿ ಆರೋಪಎಸ್.ಸಿ.ಪಿಹಾಗೂಟಿ.ಎಸ್.ಪಿಹಣದಲ್ಲಿಸುಮಾರು2ಕೋಟಿಗೂ ಅಧಿಕಭಾರಿ ಅವ್ಯವಹಾರನಡೆದಿದೆ ಎಂದು ನಗರಸಭೆ ಇನ್ನೋರ್ವ ಸದಸ್ಯ ಶಿವಕುಮಾರಭಾವಿಕಟ್ಟಿಹೇಳಿದರು. ಪತ್ರಿಕಾಭವನದಲ್ಲಿಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಪರಿಶಿಷ್ಟವಿದ್ಯಾರ್ಥಿಗಳಿಗೆ ಶಿಷ್ಯವೇತನ ಹಾಗೂ ಲ್ಯಾಪಟಾಪ್ ವಿತರಿಸಬೇಕಿದ್ದ ಹಣ ಬೇರೆ ಕಾರ್ಯಗಳಿಗೆ ಬಳಿಸಲಾಗಿದೆ. ಪರಿಶಿಷ್ಟರ ಓಣಿಯಲ್ಲಿ ಅಳವಡಿಸಬೇಕಿದ್ದ ವಿದ್ಯುತ್ ದೀಪಗಳನ್ನು ಎಲ್ಲೋ ಅಳವಡಿಸಿ ಅದರಲ್ಲಿ ಸಹ ಭ್ರಷ್ಟಾಚಾರ ಎಸಗಿದ್ದಾರೆ. ಈ ಕುರಿತು ಎಸ್.ಸಿ, ಎಸ್.ಟಿ ಆಯೋಗಕ್ಕೂ ದೂರು ನೀಡಲಾಗಿದೆ. ಜಿಲ್ಲಾಧಿಕಾರಿಗಳಿಗೂ ಸಹ ಈವಿಚಾರವಾಗಿಮನವಿಸಲ್ಲಿಸಿದರೂಏನುಪ್ರಯೋಜನಆಗಲಿಲ್ಲಎಂದು ಅಸಮಾಧಾನ ಹೊರ ಹಾಕಿದರು.ನಗರ ಸಭೆ ಸದಸ್ಯ ಪ್ರಭುಶೆಟ್ಟಿ ಪ್ರಧಾನ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ ಪಾಟೀಲ, ಜಿಲ್ಲಾ ಕಚೇರಿ ಕಾರ್ಯದರ್ಶಿ ಸುಭಾಷಮಡಿವಾಳ, ಮಂಡಲದಪ್ರಮುಖರಾದಸುನಿಲ ಗೌಳಿ, ರೋಷನ್ ವರ್ಮಾ, ಗಣೇಶ ಭೋಸ್ಲೆ, ನಿತೀನ ನವಲಕಿಲೆ, ನರೇಶ ಗೌಳಿ, ನವೀನ ಚಿಟ್ಟಾ, ವಿರೇಶ ಸ್ವಾಮಿ, ವಿಜಯಕುಮಾರ ಹೆಗ್ಗೆ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

## ಯುವಕರು ದುಶ್ಚಟಗಳಿಗೆ ಬಲಿಯಾಗಬೇಡಿ

ತಿಳಿಸಿದರು. ಖೇಳಗಿಪೂಜ್ಯರಾದಮ.ನಿ.ಪ್ರ ಶಿವಲಿಂಗೇಶ್ವರಮಹಾಸ್ವಾಮಿಜಿ ಮಾತನಾಡಿ ಹಾರಕೂಡ ಶ್ರೀಗಳು ಧಾರ್ಮಿಕ ಸಾಹಿತ್ಯ ಶಿಕ್ಷಣ ದಾಸೋಹ ಈರೀತಿಯಹಲವಾರುಕಾರ್ಯಕ್ರಮಗಳನ್ನುಹಮ್ಮಿಕೊಂಡುಈಭಾಗದ ಪ್ರಭಾವಿ ಪೂಜ್ಯರಾಗಿದ್ದಾರೆ ಎಂದು ತಿಳಿಸಿದರು. ಬೀದರ ಲೋಕಸಭಾ ಸದಸ್ಯರಾದ ಸಾಗರ ಖಂಡ್ರೆ. ಆಳಂದ ಶಾಸಕರಾದ ಬಿ. ಆರ್. ಪಾಟೀಲ್. ಭೀಮರಾಯನಗುಡಿಕಾಡಅಧ್ಯಕ್ಷರಾದಬಾಬುಹೊನ್ನನಾಯಕ. ಮೆಘರಾಜ ನಾಗರಾಳೆಗ್ರಾಮಪಂಚಾಯತಅಧ್ಯಕ್ಷೆಶೋಭಾವತಿ ವೈಜನಾಥಮೂಲಗೆ. ಉಪಾಧ್ಯಕ್ಷರಾದ ಸಾವಿತ್ರಾ, ರಾಜಕುಮಾರ ಯಾಚೆ. ಸಧ್ಯಸರಾದ ವಿಠ್ಠಲ ಜಮಾದರ. ಮಾರುತಿ ಸಜ್ಜನ. ಜಿ. ಪಂ ಮಾಜಿ ಸದಸ್ಯರಾದ ಜಗನ್ನಾಥ ಪಾಟೀಲ ಮಂಠಾಳ. ಸಿ

ದಾಟಿಜಜಿಟಿಜಮ ಗುದಗೆ. ರಾಜಕುಮಾರ ಪಾಟೀಲ ಸಿರಗಾಪುರ. ಪ್ರೊ. ಜಿ. ಎಸ್. ಮಾಲಿಪಾಟೀಲ. ಮಾಯದೇವಿ ಮಾಲಿ ಪಾಟೀಲ. ಶೋಭಾವತಿ ಮಲ್ಲಿಕಾರ್ಜುನ ಎಮ್. ಯಾಚೆ. ದಿ. ಗುರುಲಿಂಗಪ್ಪ ಸಿದ್ದಪ್ಪ ಬಿರಾದಾರ. ದಿ. ತಾರಾಬಾಯಿಗುರುಲಿಂಗಪ್ಪಬಿರಾದಾರಇವರನೆನಪಿಗಾಗಿ ಸಿರಗಾಪೂರದಬಿರಾದಾರಪರಿವಾರದರುದಾಸೋಹಸೇವೆಮಾಡಿದ್ದಾರೆ. ಸುಭಾಷಮುರುಡ. ಗುರುಲಿಂಗಪ್ಪ ಸೈದಾಪೂರೆ. ಮಹಾಂತಪ್ಪ ಶ್ರೀಚದ. ಈಶ್ವರ ಮಠಪತಿ. ಬಿ. ಕೆ. ಹಿರೇಮಠ. ಮಲ್ಲಿನಾಥ ಹಿರೇಮಠ. ಪಂಚಾಕ್ಷರಿ ಹಿರೇಮಠ. ಸದಾನಂದಪಾಟೀಲ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಸ್ವಾಗತ ಸಂತೋಷ ಯಾಚೆ. ಹಾಸ್ಯ ಕಲಾವಿದ ನವಲಿಂಗ ಪಾಟೀಲ ಹಾಗೂ ಶಿವಕುಮಾರ್ ಜಡಗೆ ನಿರೂಪಿಸಿದರು. ರಾಜೇಶ್ವರಿ ದಿಲೀಪ್ ಕುಮಾರ್ ಸ್ವಾಮಿ ಪ್ರಾರ್ಥನೆ ಗೀತೆ ನಡೆಸಿಕೊಟ್ಟರು.

## ರಥಯಾತ್ರೆಗೆ ಚಾಲನೆ

ಗೌರವ ಕಾರ್ಯದರ್ಶಿ ಸಂಗಮೇಶ ಎನ್ ಜವಾದಿ ಕರಪತ್ರ ಬಿಡುಗಡೆ ಹಾಗೂ ರಥಯಾತ್ರೆಕ್ಕೆ ಚಾಲನೆ ನೀಡಿ ಮಾತನಾಡಿದ ಅವರು , ಜಗತ್ತಿಗೆ ವೈಚಾರಿಕ ಕ್ರಾಂತಿಯ ಕೊಡುಗೆ ನೀಡಿದ ಸಮಾನತೆಯ ಹರಿಕಾರ ಬಸವಣ್ಣನವರು ಅನುಭವ ಮಂಟಪದ ಮುಖಾಂತರಕಲ್ಯಾಣರಾಜ್ಯನಿರ್ಮಾಣಮಾಡಿದರು. ಪರಿಣಾಮ ಅವರಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರತಿ ವರ್ಷವೂ ಬಸವಕಲ್ಯಾಣದ ಅನುಭವ ಮಂಟಪದಲ್ಲಿ ಪರಮ ಪೂಜ್ಯ ಡಾ.ಬಸವಲಿಂಗ ಪಟ್ಟದ್ದೇವರ ದಿವ್ಯ ಸಾನಿಧ್ಯದಲ್ಲಿ ಶರಣ ಕಮ್ಮಟ ಅನುಭವ ಮಂಟಪ ಉತ್ಸವವೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಲಿದೆ. ಈದಿಗ 46ನೇ ಶರಣ ಕಮ್ಮಟ, ಅನುಭವ ಮಂಟಪ ಉತ್ಸವಕ್ಕೆ ಸರ್ವ ರೀತಿಯಿಂದ ಸಜ್ಜಾಗಿದೆ. ಇದೆ ತಿಂಗಳ 29,30 ರಂದು ಅನುಭವ ಮಂಟಪ ಆವರಣದಲ್ಲಿ ಅತ್ಯಂತ ವೈಭವದಿಂದ, ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಈ ಉತ್ಸವಕ್ಕೆ ಸರ್ವರಿಗೂ ಆದರದ ಸ್ವಾಗತವಿದೆ ಎಂದರು. ಕಾರ್ಯಕ್ರಮದಲ್ಲಿ ಶರಣ ಸಾಹಿತ್ಯ ಪರಿಷತ್ತಿನ ತಾಲೂಕಾಧ್ಯಕ್ಷೆಶರಣೆಇಂದುಮತಿಗಾರಂಪಳ್ಳಿ, ರಾಷ್ಟ್ರೀಯಬಸವದಳದತಾಲೂಕಾಧ್ಯಕ್ಷ ರಾಜಶೇಖರದೇವಣಿ, ಶರಣಸಾಹಿತ್ಯ ಪರಿಷತ್ತಿನಗೌರವಸಲಹೆಗಾರರಾದಭೀಮಶೆಟ್ಟಿ ವಡ್ಡನಕೇರಾ, ರಾಷ್ಟ್ರೀಯ ಬಸವ ದಳದ ತಾಲೂಕು ಉಪಾಧ್ಯಕ್ಷ ಅನೀಲಕುಮಾರ ಸಿಂದಗಿರಿ, ಗಣ್ಯರಾದ ಸತೀಶ ಮಹೇಂದ್ರಕರ, ಗುರುನಾಥ ಮಾಹಾಜನ, ಚನ್ನವೀರ ಲಾತೂರೆ, ಶೌರ್ಯ ಜವಾದಿ, ಗೋಪಾಲರಡ್ಡಿ, ಮನೋಹರ್ ಮೇಧಾ, ಬಸವರಾಜ ಪಂಗರಗಿ ಸೇರಿದಂತೆ ಶರಣ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಮಹಿಳೆ ಕೊಲೆ :ವ್ಯಕ್ತಿಯ ಬಂಧನ

ಸುದ್ದಿ ತಿಳಿದು ಅಲ್ಲಿಗೆ ತೆರಳಿ ಶವವನ್ನು ನೋಡಿ ಬಸಮ್ಮಳನ್ನು ಗುರುತು ಹಚ್ಚಿದ್ದಾರಲ್ಲದೇ ಆಕೆಯ ಸಾವಿನ ಬಗ್ಗೆ ಶಂಕೆ ವ್ಯಕ್ತಪಡಿಸಿ ಮೃತಳ ಮಗ ಶಶಿಧರಮಠ ಬಾಗಲಕೋಟೆಗ್ರಾಮೀಣಠಾಣೆಯಲ್ಲಿದೂರಸಲ್ಲಿಸಿದ್ದಾರೆ.

ದೂರು ಆಧರಿಸಿ ಗ್ರಾಮೀಣ ಠಾಣೆಯ ಪಿಎಸ್ಐ ಗಿರೀಶ ಎಂ. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಗ್ರಾಮೀಣ ಸಿಪಿಐ ರಾಮಣ್ಣ ಬಿರಾದಾರ ನೇತೃತ್ವದಲ್ಲಿ ತನಿಖೆ ಕೈಗೊಂಡು ಸಂಶಯಾಸ್ಪದ ವ್ಯಕ್ತಿಗಳ ವಿಚಾರಣೆ ಮಾಡಿದ್ದು ಅವರಲ್ಲಿ ಬಸನಗೌಡ ಚನ್ನಪ್ಪಗೌಡ ಕೊಳಗೇರಿ ಮಹಿಳೆಯನ್ನು ಕೊಲೆ ಮಾಡಿರುವುದು ಖಚಿತವಾಗಿದ್ದರಿಂದ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಪ್ರಕರಣಬೇಧಿಸಿಆರೋಪಿಯನ್ನುಪತ್ತೆಹಚ್ಚುವಲ್ಲಿಯಶಸ್ವಿಯಾಗಿರುವ ಗ್ರಾಮೀಣಸಿಪಿಐ, ಪಿಎಸ್ಐಹಾಗೂತನಿಖಾತಂಡದಲ್ಲಿದ್ದಎಲ್ಲಪೋಲಿಸ್ ಸಿಬ್ಬಂದಿಯ ಕಾರ್ಯವನ್ನು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಪ್ರಶಂಸಿಸಿ ತಂಡಕ್ಕೆ ನಗದು ಬಹುಮಾನ ಘೋಷಿಸಿದ್ದಾರೆ.

## ಬಿಜೆಪಿ ಪ್ರತಿಭಟನೆಗೆ ಡಿಕೆಶಿ ತಿರುಗೇಟು

ಅದರ ಪ್ರಕಾರವೇ ಬೆಂಗಳೂರಿನಲ್ಲಿ ಸುರಂಗ ಮಾರ್ಗದಲ್ಲೇ ಮೆಟ್ರೊ? ಸಂಚರಿಸುತ್ತಿದೆ. ಬೇಕಿದ್ದರೆ ಇವರು ದಾಖಲೆ ತೆಗೆದು ನೋಡಲಿ ಎಂದರು.

ಕೆ.ಜೆ .ಜಾರ್ಜ್ ನಗರಾಭಿವೃದ್ಧಿ ಸಚಿವರಾಗಿದ್ದಾಗ ಸ್ಟಿ?ಲ್ ಬ್ರಿಡ್?? ನಿರ್ಮಿಸುವುದಕ್ಕೆಬಿಜೆಪಿಯವರುವಿರೋಧಮಾಡಿದ್ದರು. ಬೆಂಗಳೂರಿನಲ್ಲಿ ಬಿಆರ್‌ಪಿಟಿಎಸ್? ನಿರ್ಮಿಸುವಷ್ಟು ಜಾಗ ಬೆಂಗಳೂರಿನಲ್ಲಿ ಇದೆಯೇ? ಆ ರೀತಿ ಮಾಡಿದರೆ ಬೆಂಗಳೂರಿನಲ್ಲಿ ದಿನಕ್ಕೆ 100 ಜನ ಸಾಯುತ್ತಾರೆ. ಇಂತಹ ಯೋಜನೆಗಳು ಸಾಧುವಲ್ಲ ಎಂದು ಅವರು ಹೇಳಿದರು.ಕೇಂದ್ರ ಸರ್ಕಾರ ಮೆಟ್ರೊ? ರೈಲನ್ನು ಹೆಚ್ಚಿಸಲಿ ಎಂದು ಸವಾಲು ಹಾಕಿದ ಅವರು, ವಿರೋಧ ಪಕ್ಷಗಳದ್ದು ಟೀಕೆ ಮಾಡುವ ಸ್ವಭಾವ. ಅದಕ್ಕೆ ನಮ ಆಕ್ಷೇಪ ಇಲ್ಲ. ಆದರೆ ಪರಿಹಾರ ಏನು ಎಂಬುದನ್ನು ಹೇಳಿ, ಒಳ್ಳೆಯ ಸಲಹೆಗಳನ್ನು ಒಪ್ಪಿಕೊಳ್ಳುತ್ತೆ?ವೆ ಎಂದರು. ಬಿಜೆಪಿ ಸಹಿಸಂಗ್ರಹ ಮಾಡುತ್ತಿದೆ. ನಮ ಕಡೆಯೂ ಸಹಿಸಂಗ್ರಹಕ್ಕೆ ನಾನು ಕರೆ ನೀಡಬಹುದು, ಪರಿಣಾಮ ಏನು ಆಗುತ್ತದೆ ಎಂದು ಗೊತ್ತಿದೆ. ಆರ್‌ಎಸ್?ಎಸ್? ಇಲ್ಲ ಎಂದರೆ ಬಿಜೆಪಿಗೆ ಅಸ್ತಿತ್ವವೇ ಇಲ್ಲ. ಶೇ. 20ರಷ್ಟು ಹೊರತುಪಡಿಸಿದರೆ, ಉಳಿದವರು ವಲಸಿಗರೇ. ಆರ್‌ಎಸ್?ಎಸ್? ಇಲ್ಲದೇ ಹೋದರೆ ಬಿಜೆಪಿ ಶೂನ್ಯವಾಗುತ್ತಿದೆ. ಪರ್ಯಾಯಕ್ರಮಗಳ ಬಗ್ಗೆ ಯಾರೂ ಸಲಹೆ ನೀಡುತ್ತಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದರು. ಸಂಸದ ತೇಜಸ್ವಿ ಸೂರ್ಯ ಅತಿಬುದ್ಧಿವಂತ, ಮೇಧಾವಿ. ವಿಮಾನ ಸಂಚರಿಸುವಾಗ ಬಾಗಿಲು ತೆಗೆದಂತ ಮೇಧಾವಿ, ಅಮೆರಿಕಾದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಲು ಪೂರ್ವಾನುಮತಿ ಇಲ್ಲದೆ, ಅಲ್ಲಿನ ವೈಟ್ ಹೌಸ್?ಗೆ ಹೋಗಿದ್ದವರು. ಮೊದಲು ಕಾರುಬೇಡ ಎನ್ನುತ್ತಿದ್ದ ತೇಜಸ್ವಿ ಸೂರ್ಯ ಮದುವೆಗೆ ಮುನ್ನಾ ಹೊಸ ಕಾರು ಕೊಡಿಸುವಂತೆ ಅರ್ಜಿ ಕೊಟ್ಟಿದ್ದಾರೆ. ಆದರೆ ದಾಖಲೆ ಈಗಲೂ ಇದೆ. ಬೇಕಾದರೆ ಬಿಡುಗಡೆ ಮಾಡುತ್ತೆ? ಎಂದರು.

## ಉಪಗ್ರಹ ಬಾಹುಬಲಿ ಯಶಸ್ವಿ

304.70 ಸೆಕೆಂಡುಗಳಲ್ಲಿ 166.9 ಕಿ.ಮೀ. ಎತ್ತರದಲ್ಲಿ ಬೇರ್ಪಟ್ಟಿತು.

307.10 ಸೆಕೆಂಡುಗಳಲ್ಲಿ ಈ ಹಂತವು ಜ್ವಲಿಸಿ, 950.94 ಸೆಕೆಂಡುಗಳವರೆಗೆ ಮುಂದುವರೆಯಿತು, ಇದು 10.14 ಕಿ.ಮೀ/ಸೆಕೆಂಡಿನ ಜಡ ವೇಗವನ್ನು ಸಾಧಿಸಿತು.

965.94 ಸೆಕೆಂಡುಗಳಲ್ಲಿ (ಸುಮಾರು 179.8 ಕಿ.ಮೀ. ಎತ್ತರದಲ್ಲಿ) ಅಒ–03 ಉಪಗ್ರಹವು ಉಡಾವಣಾ ವಾಹನದಿಂದ ಯಶಸ್ವಿಯಾಗಿ ಬೇರ್ಪಟ್ಟು ಉದ್ದೇಶಿತ ಕಕ್ಷೆಯನ್ನು ತಲುಪಿತು. ಉಪಗ್ರಹಕ್ಕೆ 15 ವರ್ಷಗಳ ಜೀವಿತಾವಧಿಉಡಾವಣೆಯ ಯಶಸ್ಸಿನ ಕುರಿತು ಪ್ರತಿಕ್ರಿಯಿಸಿರುವ ಇಸ್ರೋ ಅಧ್ಯಕ್ಷ ವಿ. ನಾರಾಯಣನ್ ಅವರು, ಐಗಿಒ3–ಒ5 ನಿಖರವಾಗಿ ಅಗತ್ಯವಿರುವ ಕಕ್ಷೆಗೆ ಅಒ–03 ಉಪಗ್ರಹವನ್ನು ಯಶಸ್ವಿಯಾಗಿ ಸೇರಿಸಿದೆ. ಇದು ಐಗಿಒ3ನ 8ನೇ ಸತತ ಯಶಸ್ವಿ ಉಡಾವಣೆಯಾಗಿದೆ ಮತ್ತು ಅಒ–03 ಉಖಿಔ ಕಕ್ಷೆಯಲ್ಲಿ ಇರಿಸಲಾದ ಅತಿ ಹೆಚ್ಚು ತೂಕದ ಉಪಗ್ರಹವಾಗಿದೆ. ವಾಹನದ ಕಾರ್ಯಕ್ಷಮತೆಯನ್ನು ಹೆಚ್ಚಿಸಿ ಅದರ ಪೇಲೋಡ್ ಸಾಮರ್ಥ್ಯವನ್ನು ಶೇ. 10 ರಷ್ಟು ಹೆಚ್ಚಿಸಲಾಗಿದೆ ಎಂದು ಹೇಳಿದರು.

ಈ ಉಪಗ್ರಹವು 15 ವರ್ಷಗಳ ಜೀವಿತಾವಧಿಯನ್ನು ಹೊಂದಿದ್ದು, ಅನೇಕ ಹೊಸ ತಂತ್ರಜ್ಞಾನಗಳನ್ನು ಹೊಂದಿದೆ. ಕಠಿಣ ಹವಾಮಾನ ಪರಿಸ್ಥಿತಿಗಳ ನಡುವೆಯೂ ನಾವು ಈ ಮಿಷನ್ ಅನ್ನು ಪೂರ್ಣಗೊಳಿಸಿದ್ದೇವೆ. ಉಪಗ್ರಹವನ್ನು ಕಕ್ಷೆಗೆ ಸೇರಿಸಿದ ನಂತರ ಮೊದಲ ಬಾರಿಗೆ ಅ20 ಕ್ರಯೋಜೆನಿಕ್ ಎಂಜಿನ್ ಅನ್ನು ಮರು–ಜ್ವಲಿಸಲಾಗಿದೆ. ಇದು ಐಗಿಒ3 ಅನ್ನು ಬಳಸಿಕೊಂಡು ಉಪಗ್ರಹಗಳನ್ನು ಬಹು ಕಕ್ಷೆಗಳಲ್ಲಿ ಇರಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿದರು.

# ಕನ್ನಡ ಭಾಷೆ ಸುಸಂಸ್ಕೃತಿ, ಸಮನ್ವಯದ ಭಾಷೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 01:– ಬೀದರ್ ಜಿಲ್ಲಾ ಸೌಹಾರ್ದ ಒಕ್ಕೂಟದ ಕಚೇರಿಯಲ್ಲಿ ನಾಡಹಬ್ಬ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಜಗನ್ನಾಥ ಕರಂಜೆ ಅವರು, "ಭಾರತದ ಇತಿಹಾಸದಲ್ಲಿ ಅನೇಕ ಭಾಷೆಗಳಿವೆ, ಆದರೆ ಕನ್ನಡ ಭಾಷೆಯು ಅಗ್ರಗಣ್ಯವಾದ ಸಂಸ್ಕೃತಿ ಮತ್ತು ಪರಂಪರೆಯ ಭಾಷೆ. ಕನ್ನಡ ನೆಲದ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆ ದೇಶದಾದ್ಯಂತ ಪ್ರಸಾರಗೊಂಡಿರುವುದು ಹೆಮ್ಮೆಸ್ಪದ" ಎಂದು ಹೇಳಿದರು.

ಅವರು ಮುಂದುವರೆದು, "ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ, ಸೌರಾಷ್ಟ್ರದಿಂದ ನೇಪಾಳದವರೆಗೆ ಕನ್ನಡಿಗರು ಎಲ್ಲೆಲ್ಲೂ ಸಿಕ್ಕುತ್ತಾರೆ. ಜೈನ ಮುನಿಗಳು ಸಂಸ್ಕೃತ ಭಾಷೆಯ ಪಾಠಗಳನ್ನು ಕನ್ನಡಕ್ಕೆ ಅನುವಾದಿಸಿದ ಪರಂಪರೆ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. ಹಕ್ಕ ಬುಕ್ಕರು, ಚೋಳರು, ವಿಜಯನಗರ ಸಾಮ್ರಾಜ್ಯ ಮುಂತಾದ ಅನೇಕರು ಕನ್ನಡಕ್ಕೆ ಮಹತ್ವ ನೀಡಿದರು" ಎಂದರು.

ಕಾರ್ಯಕ್ರಮದ ಅಧ್ಯಕ್ಷ ಗುರುನಾಥ ಜಾಂತಿ–ಕರ ಅವರು ಮಾತನಾಡಿ, "ಕರ್ನಾಟಕ ರಾಜ್ಯದ ವೀರಶೈವ ಲಿಂಗಾಯತ ಮಠಗಳು ಅನ್ನ ಮತ್ತು ಅಕ್ಷರ ಆಶ್ರಯ ನೀಡುವ ಮೂಲಕ ಕನ್ನಡ ಭಾಷೆಯ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿವೆ" ಎಂದು ಹೇಳಿದರು.

ಅವರು ಮುಂದುವರೆದು, "ಮುಂಬೈ ನಗರವು ಬ್ರಿಟಿಷ್ ಆಳ್ವಿಕೆಯಿಂದ ಬಿಡುಗಡೆಯಾಗುವ ವೇಳೆಯಲ್ಲಿ ಹಸ್ತಾಂತರ ಪತ್ರವನ್ನು ಕನ್ನಡ ಭಾಷೆಯಲ್ಲೇ ದಾಖಲಿಸಲಾಗಿದೆ ಎಂಬುದು ಕನ್ನಡಿಗರ ಹೆಮ್ಮೆ" ಎಂದು ಹೇಳಿದರು.

ಕರ್ನಾಟಕದ ಏಕೀಕರಣ ಹೋರಾಟದ ಫಲವಾಗಿ ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರಿನ ನಾಮಕರಣವಾಗಿದ್ದು, ಎಸ್. ನಿಜಲಿಂಗಪ್ಪ ಅವರು ರಾಜ್ಯದ ಪ್ರಥಮ ಮುಖ್ಯಮಂತ್ರಿ ಆಗಿ ರಾಜ್ಯೋತ್ಸವ ದಿನದಂದೇ ಪ್ರಮಾಣವಚನ ಸ್ವೀಕರಿಸಿದ್ದರು ಎಂದು ಅವರು ನೆನಪಿಸಿದರು.

ಕಾರ್ಯಕ್ರಮದಲ್ಲಿ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷ ಸಂಜೀವಕುಮಾರ್ ಪಾಟೀಲ್, ನಿರ್ದೇಶಕರು ಸಂಜಯ ಕ್ಯಾಸ, ಶ್ರೀಕಾಂತ ಸ್ವಾಮಿ ಸೊಲಪೂರ, ವಿಜಯ ಕುಮಾರ್ ಗಜರೆ, ಧರಿನಾಡು ಸೌಹಾರ್ದದ ಮುಖ್ಯಕಾರ್ಯನಿರ್ವಾಹಕ ಅಮೃತ ಹೊಸಮನಿ, ಸಂಯುಕ್ತ ಸಹಕಾರಿಯ ಸಿಬ್ಬಂದಿ ಭವಾನಿ ಹೊಸಮನಿ ಮತ್ತು ಅನೇಕರು ಉಪಸ್ಥಿತರಿದ್ದರು.

# ಕಾಯಕ ಗ್ರಾಮ ಕಾರ್ಯಕ್ರಮಕ್ಕೆ ಜಿಪಂ ಸಿಇಓ ಚಾಲನೆ




ಮಲ್ಲಮ್ಮ ನುಡಿ ವಾರ್ತೆ

ಬೀದರ02:–ಬೀದರ ತಾಲೂಕಿನ ಕಾಡವಾದ ಗ್ರಾಮ ಪಂಚಾಯಿತಿಯಲ್ಲಿ ಇತ್ತೀಚಿಗೆ ಕಾಯಕ ಗ್ರಾಮ ಕಾರ್ಯಕ್ರಮಕ್ಕೆ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ಚಾಲನೆ ನೀಡಿದರು.

ನಂತರ ಮಾತನಾಡಿ, ನಾವು ಎಲ್ಲರೂ ಒಟ್ಟಾಗಿ "ಕಾಯಕ ಗ್ರಾಮ ಕಾರ್ಯಕ್ರಮ" ಎಂಬ ಮಹತ್ವದ ಉದ್ದೇಶಕ್ಕಾಗಿ ಇಲ್ಲಿ ಸೇರಿದ್ದೇವೆ. ನಮ್ಮ ರಾಜ್ಯ ಸರ್ಕಾರವು ಗ್ರಾಮೀಣಾಭಿವೃದ್ಧಿಯನ್ನು ವೇಗಗೊಳಿಸಲು, ಸ್ವಾವಲಂಬಿ ಮತ್ತು ಸಶಕ್ತ ಗ್ರಾಮವನ್ನು ನಿರ್ಮಿಸಲು ಈ ಯೋಜನೆಯನ್ನು ರೂಪಿಸಿದೆ. ಈ ಕಾಯಕ ಗ್ರಾಮ ಕಾರ್ಯಕ್ರಮವು ಗ್ರಾಮದ ಸಂಪೂರ್ಣ ಅಭಿವೃದ್ಧಿ– ಆರ್ಥಿಕ, ಸಾಮಾಜಿಕ, ಪರಿಸರ ಮತ್ತು ಸಾಂಸ್ಕೃತಿಕ ಎಂಬ ಗುರಿಯನ್ನು ಹೊಂದಿದೆ ಎಂದರು.

ಈ ಕಾರ್ಯಕ್ರಮದಡಿಯಲ್ಲಿ ಗ್ರಾಮದಲ್ಲಿ ಮೂಲಸೌಕರ್ಯಗಳ ಸುಧಾರಣೆ, ಶುದ್ಧ ಕುಡಿಯುವ ನೀರು, ಸೌಕರ್ಯಯುತ ರಸ್ತೆ, ಸ್ಯಾನಿಟೇಷನ್, ಹಸಿರುಮಯ ಪರಿಸರ, ಮಹಿಳಾ ಶಕ್ತೀಕರಣ, ಯುವಕರ ಉದ್ಯೋಗಾವಕಾಶಗಳು ಮತ್ತು ಶಿಕ್ಷಣದ ಗುಣಮಟ್ಟದ ಏರಿಕೆ ಇತ್ಯಾದಿ ಅಂಶಗಳಿಗೆ ಆದ್ಯತೆ ನೀಡಲಾಗಿದೆ. "ಕಾಯಕವೇ ಕೈಲಾಸ" ಎಂಬ ನಮ್ಮ ಸನಾತನ ನಂಬಿಕೆಯಂತೆ, ಈ ಯೋಜನೆಯು ಕಾಯಕದ ಮೂಲಕ ಸಮೃದ್ಧಿ ಸಾಧಿಸುವ ದೃಷ್ಟಿಯನ್ನು ಪ್ರತಿ ಬಿಂಬಿಸುತ್ತದೆ. ಗ್ರಾಮದ ಪ್ರತಿಯೊಬ್ಬ ನಾಗರಿಕರ ಸಹಭಾಗಿತ್ವ, ಹೊಣೆಗಾರಿಕೆ ಮತ್ತು ಸೇವಾ ಮನೋಭಾವ

ಈ ಯೋಜನೆಯ ಜೀವಾಳವೆಂದರು.

ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರು, ಸ್ವಸಹಾಯ ಸಂಘದ ಮಹಿಳೆಯರು, ಯುವ ಸಂಘಗಳು, ಹಾಗೂ ಶಾಲಾ ಶಿಕ್ಷಕರು ಎಲ್ಲರೂ ಒಂದಾಗಿ ಈ ಕಾರ್ಯಕ್ಕೆ ಕೈಜೋಡಿಸಿದರೆ ನಮ್ಮ ಗ್ರಾಮವು ಮಾದರಿ "ಕಾಯಕ ಗ್ರಾಮ" ಆಗಿ ಬೆಳೆಯುವುದು ಖಚಿತ. ಈ ಕಾರ್ಯಕ್ರಮದ ಮೂಲಕ ನಾವು ಗ್ರಾಮದ ಅಭಿವೃದ್ಧಿಗೆ ನಾವೇ ಹೊಣೆ, ನಾವೇ ನಾಯಕರು ಎಂಬ ಸಂದೇಶವನ್ನು ಸಾರುತ್ತೇವೆ. ನಮ್ಮ ಗ್ರಾಮದಲ್ಲಿ ಪ್ರತಿಯೊಬ್ಬ ಕುಟುಂಬಕ್ಕೂ ಸಂತೋಷ, ಸುರಕ್ಷತೆ ಮತ್ತು ಗೌರವ 'ಯುತ ಜೀವನ ದೊರಕಲಿ ಎಂಬುದು ಈ ಕಾರ್ಯಕ್ರಮದ ಉದ್ದೇಶ ಎಂದರು.

ಈ ಸಂದರ್ಭದಲ್ಲಿ ಕಾಡವಾದ ಗ್ರಾಪಂ ಅಧ್ಯಕ್ಷೆ ಶಶೀಕಲಾ ಬುಕ್ಕಿಗಾರ, ಉಪಾಧ್ಯಕ್ಷರಾದ ರವಿ ರಾಜಗೀ–ರೆ, ಸಾಹಾಯಕ ನಿರ್ದೇಶಕರು (ಆಡಳಿತ) ಅಧಿಕಾರಿ ಜೈ ಪ್ರಕಾಶ ಚವ್ಹಾಣ, ಗ್ರಾಮ ಪಂಚಾಯತ್ ಸದಸ್ಯರು, ಹನುಮಂತ ಚಿದ್ರಿ, ಭ್ಯಾಗೇಶ ಎಸ್‌ಬಿಎಂ ಪಂಡಿತ ವಾಡೇಕರ, ಲೋಕೇಶ ಮೇತ್ರಿ, ಪಿಡಿಒ ಶಿವಕೂಮಾರ, ಶಾಲಾ ಶಿಕ್ಷಕರು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕನ್ನಡ ಭಾಷೆ ಉಳಿಸಿ ಬೆಳೆಸುವುದು ಎಲ್ಲರ ಕರ್ತವ್ಯ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವುದು ನಾಡಿನ ಎಲ್ಲರ ಕರ್ತವ್ಯವಾಗಿದೆ ಎಂದು ಸಾಹಿತಿ ಶಿವಲಿಂಗ ಹೇಡೆ ಹೇಳಿದರು.

ತಾಲ್ಲೂಕಿನ ಕಡ್ಯಾಳದ ಶ್ರೀಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಚಯದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ಕುವೆಂಪು ಹೇಳಿದಂತೆ ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟವಾಗಿದೆ. ನಮ್ಮ ಮಾತೃಭಾಷೆಯು ಇತರ ಇಂದ್ರಿ?ಯಗಳಂತೆ ನಮ್ಮ ದೇಹದ ಹಾಗೂ ಜೀವನದ ಅವಿಭಾಜ್ಯ ಅಂಗವಾಗಿದೆ.

ಯಾವುದೇ ಒಂದು ಭಾಷೆಯ ಉಳಿವು ಅದರ ಬಳಕೆಯ ಮೇಲೆ ಅವಲಂಬನೆಯಾಗಿದೆ. ಕನ್ನಡ ಭಾಷೆಯು ಇಂದು ಉಳಿದು ಬೆಳೆಯಲು ನಮ್ಮ ನಾಡಿನ ಸಾಮಾನ್ಯ ಜನರು, ಕೃಷಿಕರು, ಗ್ರಾಮೀಣ ಜನರು, ಪತ್ರಕರ್ತರು, ಸಾಹಿತಿಗಳು ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಕನ್ನಡ ಭಾಷೆ ಇತರ ಭಾಷೆಗಳೊಂದಿಗೆ

ಹೊಂದಿಕೊಂಡು ಬೆಳೆದು ಬಂದಿದೆ ಎಂದು ಹೇಳಿದರು. ಆಡಳಿತಾಧಿಕಾರಿ ಮೋಹನರೆಡ್ಡಿ ಮಾತನಾಡಿದರು.

ವಿದ್ಯಾರ್ಥಿನಿ ಸಂಸ್ಕೃತಿ ಶಿವಕಾಂತ ಭಾಷಣ ಮಾಡಿದರು.

ರಾಜ್ಯ ಮಕ್ಕಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ, ಉಪ ಪ್ರಾಚಾರ್ಯ ಸಿದ್ರಾಮ ಗೊಗ್ಗಾ, ಎಸ್ ಎಸ್ ಎಲ್ ಸಿ ಸಂಯೋಜಕ ಪ್ರವೀಣ ಖಂಡಾಳೆ, ಮುಖ್ಯಶಿಕ್ಷಕರಾದ ಮಹೇಶ್ ಮಹಾರಾಜ್, ಮಹೇಶ ಕುಲಕರ್ಣಿ, ರಾಜು ಎನ್. ರಂಗಾರೆಡ್ಡಿ, ಶಶಿಕುಮಾರ,

ಪ್ರಶಾಂತರೆಡ್ಡಿ, ಕಿರಣ ಸಜ್ಜನಶೆಟ್ಟಿ, ಸುಧಾಕರ ಬಿರಾದಾರ, ಪಾಂಡುರಂಗ ಕುಂಬಾರ, ಶ್ರೀದೇವಿ ಕುಲಕರ್ಣಿ ಸೇರಿದಂತೆ ಇತರರು ಇದ್ದರು.

# ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:–ನಗರದ ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆ ಮಾಡಲಾಯಿತು ಈ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು ಮೈಸೂರು ರಾಜ್ಯ ಕರ್ನಾಟಕವಾದ ಇತಿಹಾಸ ನೋಡಿದಾಗ, ಕನ್ನಡ ಚಳುವಳಿಕಾರರ ಅನೇಕ ಮಹನೀಯರ ಹೋರಾಟಗಳು ಚರಿತ್ರೆಯ ಪುಟಗಳಲ್ಲಿ ಇರುವುದನ್ನು ನಾವು ಕಾಣಬಹುದಾಗಿದೆ. ಕನ್ನಡ ಭಾಷಿಕರನ್ನು ಮತ್ತೊಮ್ಮೆ ಭಾವನಾತ್ಮಕವಾಗಿ ಕಟ್ಟಿಕೊಡುವಂತಹ ಕೆಲಸವಾಗಬೇಕಿದೆ. ಕನ್ನಡ ಕೇವಲ ಭಾಷೆಯಲ್ಲ ಅದು ನಮ್ಮ ಬದುಕು ಭವಿಷ್ಯ, ಕನ್ನಡವನ್ನು ಉಳಿಸಿಕೊಳ್ಳಲು ಪ್ರಮಾಣ ಕವಾದ ಪ್ರಯತ್ನ ಮಾಡೋಣ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು. ಲಲಿತಾ ಅನಪುರ, ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ, ಹಿರಿಯ ಮುಖಂಡೆ ನಾಗರತ್ನ ಕುಪ್ಪಿ, ದೇವಿಂದ್ರನಾಥ ನಾದ, ಜಿಲ್ಲಾ ವಕ್ತಾರ ಮತ್ತು ನಗರಸಭೆ ಸದಸ್ಯ ಹಣಮಂತ ಇಟಗಿ, ವೆಂಕಟರಡ್ಡಿ ಅಬ್ಬೆತುಮಕೂರು, ನಗರಸಭೆ ಸದಸ್ಯ ಉಪಾಧ್ಯಕ್ಷೆ ರುಕೀಯ್ ಬೇಗಂ, ನಗರಸಭೆ ಸದಸ್ಯೆ ವಿಜಯಲಕ್ಷ್ಮಿ ನಾಯಕ, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಸುನಿತಾ ಚೌವ್ಹಾಣ್, ಬಸವರಾಜಪ್ಪಗೌಡ ಬಿಳಾರ, ಶಾಂತಗೌಡ ಪಗಲಪುರ, ಸುರೇಶ್ ಆಕಳ, ಮಲ್ಲಿಕಾರ್ಜುನ ಕಟ್ಟಿಮನಿ, ಮರಲಿಂಗಜಿನಿಕೇರಿ, ಶರಣುಗೌಡ ಅಲಿಪುರ, ಸ್ನೇಹರಸಳಕರ್, ಮಹದೇವಪ್ಪ ಗಣಪುರ, ದೇವಿಂದ್ರಪ್ಪ ಯರಗೋಳ, ಚಂದ್ರಕಲಾ ಕಿಲನಕೇರ, ಶಕುಂತಲಾ ಜಿ, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿ ಚನ್ನವೀರಯ್ಯ ಸ್ವಾಮಿ, ಸಾಲು ಯಡಳ್ಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು,

## ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: ಜಿಲ್ಲಾ ಪಂಚಾಯತ ಬೀದರ ಹಾಗೂ ತಾಲೂಕಿನ ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ಕೋಳಿ ಮರಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 2025–26ನೇ ಸಾಲಿನ 5 ವಾರದ ಕೋಳಿ ಮರಿಗಳನ್ನು ಉತ್ಪಾದಿಸಿ ಗ್ರಾಮೀಣ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ರೈತ ಮಹಿಳೆಯರಿಗೆ ಉಚಿತವಾಗಿ ತಲಾ 20 ರಂತೆ ವಿತರಿಸುವ ಕಾರ್ಯಕ್ರಮದಡಿ ಬಸವಕಲ್ಯಾಣ ತಾಲೂಕಿನ ಅರ್ಹ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಪಶು ವೈದ್ಯಾಧಿಕಾರಿಗಳು ತಿಳಿಸಿದ್ದಾರೆ. ಹೀಗಾಗಿ ಆಸಕ್ತರು ಇದೆ ನವೆಂಬರ್ 1 ರಿಂದ 15ರ ಒಳಗಾಗಿ ತಾಲೂಕ ಪಶು ಆಸ್ಪತ್ರೆಯಲ್ಲಿ ನಿಗದಿತ ನಮೂಲನೆಯಲ್ಲಿ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಸಬಹುದು ಎಂದು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಪಶು ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕನ್ನಡ ನಾಡು, ನುಡಿ ಉಳಿಸಿ ಬೆಳೆಸಿ; ರಾಘವೇಂದ್ರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ; ಕನ್ನಡ ನಾಡು, ನುಡಿ, ನೆಲ, ಜಲ ಉಳಿಸಿ ಬೆಳೆಸುವುದು ನಮ್ಮೆಲ್ಲ ಕರ್ತವ್ಯವಾಗಿದೆ ಎಂದು ಜೇಸ್ಕಂ ಕಾರ್ಯ ನಿರ್ವಾಹಕ ಅಭಿಯಂತರ ರಾಘವೇಂದ್ರ ಡಿ ಹೇಳಿದರು.

ನಗರದ ಜೇಸ್ಕಂ ವಿಭಾಗೀಯ ಕಛೇರಿಯಲ್ಲಿ 70ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ನಮ್ಮ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಮತ್ತಷ್ಟು ಶ್ರೀಮಂತಗೊಳಿಸುವ ಅವಶ್ಯಕತೆ ಇದೆ. ಇದಕ್ಕೆ ನಾವೆಲ್ಲರೂ ಕೈ ಜೋಡಿಸೋಣ ಎಂದರು. ಕರ್ನಾಟಕ ಏಕೀಕರಣ ಹೋರಾಟದಲ್ಲಿ ಭಾಗವಹಿಸಿದ ಹಿರಿಯ ರಾಜಕೀಯ ಮುತ್ಸದ್ದಿಗಳು, ಸಾಹಿತಿಗಳು, ಹಿರಿಯ ನಾಗರಿಕರ ತ್ಯಾಗ, ಬಲಿದಾನ ಅವಿಸ್ಮರಣೀಯ ಕೊಂಡಾಡಿದರು. ಈ ಸಂದರ್ಭದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಸಂಜೀವಕುಮಾರ, ಲೆಕ್ಕಾಧಿಕಾರಿ ಬಸವರಾಜ ಸೇರಿದಂತೆ ಜೇಸ್ಕಂ ಸಿಬ್ಬಂದಿಗಳು ಇದ್ದರು.

# ಚಿದಂಬರ ಶಿಕ್ಷಣ ಸಂಸ್ಥೆ: ಸಂಭ್ರಮದ ರಾಜ್ಯೋತ್ಸವ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ್ :– ಇಲ್ಲಿಯ ಗುಂಪಾದ ಶ್ರೀ ಚಿದಂಬರ ಶಿಕ್ಷಣ ಸಂಸ್ಥೆಯಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಶನಿವಾರ ಸಂಭ್ರಮ, ಸಡಗರದಿಂದ ಆಚರಿಸಲಾಯಿತು. ಕನ್ನಡ ಭಾಷೆ ಕನ್ನಡಿಗರ ಪ್ರಥಮ ಆದ್ಯತೆಯಾಗಬೇಕು. ಎಲ್ಲರೂ ಕನ್ನಡದಲ್ಲೇ ವ್ಯವಹರಿಸಬೇಕು ಎಂದು ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಸಂಸ್ಥೆಯ ಕಾರ್ಯದರ್ಶಿ ಬಿ.ಜಿ. ಶೆಟಕಾರ್ ಹೇಳಿದರು. ಕನ್ನಡ ಮಾಧ್ಯಮದಲ್ಲಿ ಓದಿದ ಅನೇಕರು ವಿಶ್ವಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಕನ್ನಡ ಅನ್ನ ಕೊಡುವ ಭಾಷೆಯಾಗಿದೆ ಎಂದು ತಿಳಿಸಿದರು.

ಜಿಲ್ಲಾಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆ ಹಾಗೂ ಸದ್ಗುರು ಸಿದ್ಧಾರೂಢ ಮಹಿಳಾ ಪದವಿ ಕಾಲೇಜು ವಿದ್ಯಾರ್ಥಿನಿಯರಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆದವು. ಸಂಸ್ಥೆಯ ನಿರ್ದೇಶಕ ಸಹಜಾನಂದ ಕಂದಗೂಳೆ, ಆಡಳಿತಾಧಿಕಾರಿ ಡಾ. ಹಾವಗಿರಾವ್ ಮೈಲಾರೆ, ಎನ್. ಕೆ. ಜಾಬಶಟ್ಟಿ ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಪ್ರಾಚಾರ್ಯ ಡಾ. ಚಂದ್ರಕಾಂತ ಹಳ್ಳಿ, ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಪ್ರೊ. ಆರ್.ವಿ. ಗಂಗಶೆಟ್ಟಿ, ಶ್ರೀ ಚಂದ್ರಪ್ಪ ಗೌರಶೆಟ್ಟಿ ಪದವಿಪೂರ್ವ ಕಾಲೇಜು ಪ್ರಾಚಾರ್ಯ ಡಾ. ಚಂದ್ರಪ್ಪ ಭತಮುರ್ಗೆ, ಶ್ರೀ ಶಿವಕುಮಾರೇಶ ಗುರುಕುಲ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯಶಿಕ್ಷಕ ಬಸವರಾಜ ಮ್ಯಾಗೇರಿ, ಸಿದ್ಧಾರೂಢ ಪಬ್ಲಿಕ್ ಶಾಲೆಯ ಮುಖ್ಯಶಿಕ್ಷಕ ಅಂಜು ಪ್ರಾಜೇಶ್ ಮತ್ತಿತರರು ಇದ್ದರು.

ಸದ್ಗುರು ಸಿದ್ಧಾರೂಢ ಮಹಿಳಾ ಪದವಿ ಕಾಲೇಜು ಪ್ರಾಚಾರ್ಯ ನಾಗಪ್ಪ ಜಾನಕನೋರ ಸ್ವಾಗತಿಸಿದರು. ಶಿಕ್ಷಕ ನಾಗನಾಥ ಬಿರಾದಾರ ನಿರೂಪಿಸಿದರು. ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆಯ ಮುಖ್ಯಶಿಕ್ಷಕ ಲಕ್ಷ್ಮಣ ಪೂಜಾರಿ ವಂದಿಸಿದರು.

ಸಂಸ್ಥೆಯ ಸಂಚಾಲಿತ ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆ, ಸದ್ಗುರು ಸಿದ್ಧಾರೂಢ ಮಹಿಳಾ ಪದವಿ ಕಾಲೇಜು ಹಾಗೂ ಸಂಸ್ಥೆಯ ಇತರ ಅಂಗ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

# ಹದಿನೈದು ದಿನದಲ್ಲಿ ಬೆಳೆ ಪರಿಹಾರ ಬಿಡುಗಡೆ: ಪ್ರಿಯಾಂಕ್ ಖರ್ಗೆ



ಕಲಬುರಗಿ,ನ.1(ಕರ್ನಾಟಕ ವಾರ್ತೆ) ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಅತಿವೃಷ್ಟಿ ಮತ್ತು ವ್ಯಾಪಕ ಮಳೆಯಿಂದ ಜಿಲ್ಲೆಯಲ್ಲಿ ಅಪಾರ ಪ್ರಮಾಣದ ಮಳೆಯಿಂದ ಬೆಳೆ ಹಾನಿಯಾಗಿದ್ದು, ಬೆಳೆ ಹಾನಿಗೊಳಗಾದ ರೈತರಿಗೆ ಮುಂದಿನ 10-15 ದಿನದಲ್ಲಿ ರಾಜ್ಯ ಸರ್ಕಾರದಿಂದ ಮೊದಲನೇ ಕಂತಿನ ಪರಿಹಾರ ಬಿಡುಗಡೆ ಮಾಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಎನ್.ಡಿ.ಆರ್.ಎಫ್. ಪರಿಹಾರದ ಜೊತೆಗೆ ಪ್ರತಿ ಹೆಕ್ಟೇರ್‌ಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಎಸ್.ಡಿ.ಆರ್.ಎಫ್ ನಿಧಿಯಡಿ 8,500 ರೂ. ಪರಿಹಾರ ನೀಡಲಾಗುವುದು ಎಂದು ಕಳೆದ ಸೆಪ್ಟೆಂಬರ್ 30 ರಂದು ಇಲ್ಲಿಯೇ ಮುಖ್ಯಮಂತ್ರಿಗಳು ಘೋಷಿಸಿದ್ದು, ಅದರಂತೆ ಹಣ ರೈತರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ ಎಂದರು.

ಪ್ರಾಥಮಿಕ ಅಂದಾಜಿನ ಪ್ರಕಾರ ಕಲಬುರಗಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ 3,24,777 ಹೆಕ್ಟೇರ್ ಬೆಳೆ ಹಾನಿಯಾಗಿದ್ದೆ ಎಂದು ಅಂದಾಜಿಸಲಾಗಿತ್ತಾದರು ಜಂಟಿ ಸಮೀಕ್ಷೆಯಿಂದ 3,07,206 ಹೆಕ್ಟೇರ್ ಹಾನಿಯಾಗಿದ್ದು ಕಂಡುಬಂದಿದೆ. ಬೆಳೆ ಹಾನಿ ಕುರಿತು ಪರಿಹಾರ ಪೋರ್ಟಲ್‌ನಲ್ಲಿ ದಾಖಲಾದ 4,17,596 ರೈತರ ಪೈಕಿ ಶುಕ್ರವಾರದ ವರೆಗೆ 4,15,996 ಅನುಮೋದನೆ ನೀಡಿದೆ. ತಾಂತ್ರಿಕ ಮತ್ತು ನಾನಾ ಕಾರಣದಿಂದ 1,148 ತಿರಸ್ಕೃತಗೊಂಡಿದ್ದು, 1,006 ಅನುಮೋದನೆಗೆ ಬಾಕಿ ಇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬೆಂಗಳೂರುದಾಚೆ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಕೈಗಾರಿಕೆ ಸ್ಥಾಪನೆಗೆ ವಿಶೇಷ ಬಂಡವಾಳ ಹೂಡಿಕೆ ಮಾಡಲು ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ (LocalEconomy AcceleratorProgramme-LEAP) ಜಾರಿಗೆ ತರಲಾಗುತ್ತಿದೆ. ತುಮಕೂರು-ಚಿತ್ರದುರ್ಗ, ಹುಬ್ಬಳ್ಳಿ-ಬೆಳಗಾವಿ-ಧಾರವಾಡ, ಶಿವಮೊಗ್ಗ, ಬಳ್ಳಾರಿ, ಮಂಗಳೂರು, ಮೈಸೂರು, ಕಲಬುರಗಿ ಹೀಗೆ ಆಯಾ ಭಾಗಗಳನ್ನಿ ಕ್ಲಸ್ಟರ್ ಎಂದು ಪರಿಗಣಿಸಿ ಅಲ್ಲಿ ಇನ್ಕ್ಯೂಬೇಷನ್ ಸೆಂಟರ್, ಸೆಂಟರ್ ಆಫ್ ಎಕ್ಸಲೆನ್ಸ್, ಎಸಿಲೇಟರ್ ಕಾರ್ಯಕ್ರಮಗಳು ಜಾರಿಗೆ ತರಲಾಗುತ್ತದೆ. ಉದ್ಯಮಶೀಲತೆ ಹೆಚ್ಚಿಸುವುದಲ್ಲದೆ ಉದ್ಯೋಗ ಸೃಷ್ಟಿ ನಮ್ಮ ಮುಖ್ಯ ಗುರಿಯಾಗಿದೆ. ಕಲಬುರಗಿ ಕ್ಲಸ್ಟರ್ ಘೋಷಣೆ ಮಾಡಿದ ಪರಿಣಾಮ ಇಲ್ಲಿ ಬಹುಕೌಶಲ್ಯ ಅಭಿವೃದ್ಧಿ ಕೇಂದ್ರ, ಸೆಂಟರ್ ಆಫ್ ಎಕ್ಸಲೆನ್ಸ್, ಆವಿಷ್ಕಾರ ಕೇಂದ್ರಗಳು, ಭಾಷಾ ಪ್ರಯೋಗಾಲಯ, ಅಗ್ರಿಟೆಕ್ ಎಸಿಲೇಟರ್ ಬರಲು ಸಾಧ್ಯವಾಗಲಿದೆ ಎಂದರು. ಕಲಬುರಗಿ ಜಿ.ಡಿ.ಪಿ ಹೆಚ್ಚಳಕ್ಕೆ ಪ್ರಯತ್ನ: ರಾಜ್ಯದ ಜಿಡಿಪಿಗೆ ಬೆಂಗಳೂರು ಶೇ.40ರಷ್ಟು ಕೊಡುಗೆ ನೀಡಿದ್ದರೆ, ದಕ್ಷಿಣ ಕನ್ನಡ ಪಾಲು ಶೇ.5.40. ಉಳಿದ ಜಿಲ್ಲೆಗಳ ಪ್ರಮಾಣ ತುಂಬಾನೆ ಕಡಿಮೆ ಇದೆ.

ಬೆಂಗಳೂರು ಗ್ರಾಮೀಣ ಮತ್ತು ಕಲಬುರಗಿ ಕೊಡುಗೆ ಶೇ.1.9 ಇದೆ. ನವೋದ್ಯಮ ಸ್ಥಾಪನೆ, ಕೈಗಾರಿಕೆಗಳ ಅಭಿವೃದ್ಧಿ, ಉದ್ಯೋಗ ಸೃಷ್ಟಿ, ಮಾನವ ಸಂಪನ್ಮೂನ ಬೆಳವಣಿಗೆ, ಕೌಶಲ್ಯ ಅಭಿವೃದ್ಧಿ, ಆವಿಷ್ಕಾರ ಕೇಂದ್ರ, ಕೃಷಿ ವಲಯದ ಸ್ಥಿರತೆ, ಪ್ರವಾಸೋದ್ಯಮದ ಬಲಪಡಿಸುವ ಗುರಿಯೊಂದಿಗೆ ನವ ಕಲಬುರಗಿಯನ್ನು ಅಭಿವೃದ್ಧಿ ಪಡಿಸಲಾಗುವುದು. ಮುಂದಿನ ಒಂದು ವರ್ಷದೊಳಗೆ ಈ ಎಲ್ಲಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡು ಕಲಬುರಗಿಯ ಜಿಡಿಪಿಯನ್ನು 1.9% ರಿಂದ 2.15% ಹೆಚ್ಚಿಸಲು ಪ್ರಯತ್ನಿಸಲಾಗುವುದು ಎಂದರು. ಮಹನೀಯರ ಹುಟ್ಟೂರು ತಲಾ 1 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ನಾಡಿನ ಹಿರಿಮೆ ಮತ್ತು ಗರಿಮೆ ಹೆಚ್ಚಿಸಿದ ಭಾರತ ರತ್ನ ಪುರಸ್ಕೃತ ಸರ್.ಎಂ.ವಿಶ್ವೇರಯ್ಯ, ಡಾ.ಸಿ.ಎನ್.ಆರ್.ರಾವ್, ಪಂಡಿತ್ ಭೀಮಸೇನ್ ಜೋಷಿ ಮತ್ತು ಕನ್ನಡ ನಾಡಿಗೆ, ಭಾಷೆಗೆ ತಮ್ಮದೆಯಾದ ಕೊಡುಗೆ ನೀಡಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಹುಟ್ಟೂರಿನ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ತಲಾ 1 ಕೋಟಿ ರೂ. ಅನುದಾನ ಬಿಡುಗಡೆ ಮಾಡಲಾಗುವುದು. ಗ್ರಾಮಸ್ಥರೊಂದಿಗೆ ಚರ್ಚಿಸಿ ಇದಕ್ಕೆ ಅಂತಿಮ ರೂಪ ನೀಡಲಾಗುವುದು. ಕರ್ನಾಟಕ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಕನ್ನಡಕ್ಕಾಗಿ ಶ್ರಮಿಸಿದ ಈ ಮಹಿನೀಯರ ಹುಟ್ಟೂರಿನ ಅಭಿವೃದ್ಧಿಗೆ ಇಲಾಖೆ ಶ್ರಮಿಸಲಿದೆ ಎಂದು ಘೋಷಿಸಲು ಹರ್ಷವಾಗುತ್ತಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಶಾಸಕರಾದ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಕೆ. ಕೆ.ಆರ್.ಟಿ.ಸಿ. ಅಧ್ಯಕ್ಷ ಅರುಣಕುಮಾರ ಎಮ್.ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆಯ ಆಯುಕ್ತ ಅವಿನಾಶ ಶಿಂಧೆ ಇದ್ದರು.

# ಪ್ರೀತಿಯಿಂದ ಕನ್ನಡ ಭಾಷೆ ಬಳಸಿದರೆ ಭವಿಷ್ಯ ಉಜ್ವಲವಾಗುತ್ತದೆ - ಡಾ. ದೀಪಾ ರಾಗ

ಮಲ್ಲಮ್ಮ ನುಡಿ ವಾರ್ತೆ

ಬೀದರ: 2 ದಿನಾಂಕ:01ನೇ ನ. 2025ರಂದು ನಗರದ ಹೈ. ಕ.ಶಿ. ಸಂಸ್ಥೆಯ ಬಿ.ವಿ.ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ಅವರು ಅಧ್ಯಕ್ಷತೆಯನ್ನು ವಹಿಸಿ ಅವರ ಅಮೃತಹಸ್ತದಿಂದ ಧ್ವಜಾರೋಹಣ ನೇರವೇರಿಸಿ ಮಾತನಾಡುತ್ತಾ ಪ್ರತಿಯೊಬ್ಬ ನಾಗರೀಕ ಕನ್ನಡವನ್ನು ಪ್ರೀತಿಯಿಂದ ಬಳಕೆ ಮಾಡಬೇಕು ಕನ್ನಡ ಉಳಿವು ಕಾನೂನುನಿಂದಷ್ಟೆ ಅಲ್ಲ ಜನಮನದ ನಿಷ್ಠೆಯಿಂದ ಮಾತ್ರ ಸಾಧ್ಯ. ಕನ್ನಡ ಭಾಷೆ ಸ್ಥಿತಿ ಗತಿಗಳು ಸುಧಾರಿಸಬೇಕಾದರೆ, ಮೊಟ್ಟಮೊದಲು ಕನ್ನಡ ಶಾಲೆಗಳು ಉಳಿಯಬೇಕು ಹಾಗೂ ಕನ್ನಡ ಶಾಲೆ ಕಡೆ ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕು ನಿತ್ಯ ಜೀವನದಲ್ಲಿ ಕನ್ನಡ ಬಳಕೆಗೆ ಹೆಚ್ಚು ಮಹತ್ವ ಕೊಡಬೇಕು ಆಗ ಮಾತ್ರ ಹರ್ಡೇಕರ ಮಂಜಪ್ಪ, ಗಂಗಾಧರ

ದೇಶಪಾಂಡೆ, ರಾ.ಹ. ದೇಶಪಾಂಡೆಯವರ ಹೋರಾಟದ ಕೊಡುಗೆ ಅಪಾರವಾಗಿದೆ ಎಂದರು, ಇವರ ಸೇವೆ ನೆನೆಸುತ್ತಾ ನಾವು ಕನ್ನಡಿಗರು ಸದಾ ಕನ್ನಡಕ್ಕಾಗಿ ನಮ್ಮ ಕೈ ಕಲ್ಪವೃಕ್ಷವಾಗಬೇಕೆಂದು ನುಡಿದರು.



ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆಯವರು ಮಾತನಾಡುತ್ತಾ, ಕನ್ನಡವನ್ನು ಕಠಿಣಗೊಳಿಸುವ ಬದಲು ಸರಳ ಕಲಿಕೆಯಿಂದ ಆತ್ಮವಿಶ್ವಾಸ ಹೆಚ್ಚಿಸಬೇಕು ಕನ್ನಡ ಮಾಧ್ಯಮದಲ್ಲಿ ಓದಿದವರು ಹಿಂದುಳಿಯುತ್ತಾರೆ ಎಂಬ ಭೀತಿ ಬಿಡಬೇಕು ಸರ್.ಎಂ. ವಿಶ್ವೇಶ್ವರಯ್ಯ ಹಾಗೂ ಅನೇಕ ಅಭಿಯಂತರರು, ವಿಜ್ಞಾನಿಗಳು ಕನ್ನಡ ಮಾಧ್ಯಮದಲ್ಲಿ ಓದಿ ಮಂಗಳ ಗ್ರಹಕ್ಕೆ ಹಾಗೂ ಚಂದ್ರಲೋಕಕ್ಕೆ ಅಂತರೀಕ್ಷ ನೌಕೆಗಳನ್ನು ಹಾರಿಸಿದ ಕೀರ್ತಿ ಭಾರತೀಯರದಾಗಿದೆ ವಿಶೇಷವಾಗಿ ಕರ್ನಾಟಕದ ಕೊಡುಗೆ ಅಪಾರವಾಗಿದೆ ಕ್ರಿ.ಶ. 1956ರಲ್ಲಿ ಕರ್ನಾಟಕ ಏಕೀಕರಣಗೊಂಡು ಅದ್ಭುತ ಸಾಧನೆಗಳನ್ನು ವಿಶ್ವ-ಕ್ಕೆ ತೋರಿಸಿಕೊಟ್ಟಿದೆ ಎಂದು ಮಾರ್ಮಿಕವಾಗಿ ನುಡಿದರು.

ಈ ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಹಾಗೂ ಅಂತಿಮ ವರ್ಷದ ಪದವಿಯಲ್ಲಿ ಅತೀ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ಹಾಗೂ ಪ್ರಶಸ್ತಿಗಳನ್ನು ನೀಡಲಾಯಿತು.

ಈ ಕಾರ್ಯಕ್ರಮದ ವೇದಿಕೆಯ ಮೇಲೆ ಸೈನಿಕ ಶಾಲೆಯ ಹಾಗೂ ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶ್ರೀಲತಾ ಸ್ವಾಮಿ ಹಾಗೂ ಶ್ರೀ ಶರಣ ಬಸವೇಶ್ವರ ಅಭ್ಯಾಸಾರ್ಥ ಪ್ರೌಢ ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಶೀಲಾ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ಶಿವಲೀಲಾ ವೀರಯ್ಯಾ ನಡೆಸಿಕೊಟ್ಟರೆ, ವಂದನಾರ್ಪಣೆಯನ್ನು ಹಿಂದಿ ವಿಭಾಗದ ಮುಖ್ಯಸ್ಥರಾದ ಶ್ರೀ ಮಾರುತಿ ಭೀಮಣ್ಣಾ ನೇರವೇರಿಸಿದರು.

ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಎನ್.ಸಿ.ಸಿ., ಎನ್.ಎಸ್.ಎಸ್. ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಎ.ಎಸ್.ಎನ್ ಕಾನೂನು ಮಾಹಾವಿದ್ಯಾಲಯದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಆಚರಣೆ.



ಮಲ್ಲಮ್ಮ ನುಡಿ ವಾರ್ತೆ

ನಾಲತವಾಡ : ನವೆಂಬರ್ 1ರಂದು ಎ.ಎಸ್.ಎನ್. ಕಾನೂನು ಮಾಹಾವಿದ್ಯಾಲಯ ನಾಲತವಾಡದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಯಿತು.

ನಾವೆಲ್ಲರೂ ಇಂದು 70ನೇ ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದೇವೆ. ಪ್ರತಿ ವರ್ಷವೂ ನವೆಂಬರ್ 1ರಂದು ರಾಜ್ಯದ ಎಲ್ಲೆಡೆ ಜಾತಿ-ಧರ್ಮದ ಭೇದವಿಲ್ಲದೇ ಕನ್ನಡದ ಕಂಪನ್ನು ಪಸರಿಸಲಾಗುತ್ತದೆ. ಈಗ ಕರ್ನಾಟಕ ಎಂದು ನಾವೆಲ್ಲರೂ ಖುಷಿಯಿಂದ ಕರೆಯುವ ನಮ್ಮ ರಾಜ್ಯದ ಹೆಸರು ಮೊದಲು ಮೈಸೂರು ರಾಜ್ಯವಾಗಿತ್ತು. 1956ರ ನವೆಂಬರ್ 1ರಂದು ಮೈಸೂರು ರಾಜ್ಯ ನಿರ್ಮಾಣವಾಯಿತು. ಇದರ ನೆನಪಿಗಾಗಿ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತಿದೆ.

ಮೈಸೂರು ಸಂಸ್ಥಾನ, ಮುಂಬೈ ಕರ್ನಾಟಕ, ಹೈದರಾಬಾದ್ ಕರ್ನಾಟಕ ಹಾಗೂ ಮದ್ರಾಸ್ ಕರ್ನಾಟಕ ಎಂದು ನಾಲ್ಕು ಭಾಗಗಳಾಗಿದ್ದ ಕನ್ನಡ ನಾಡು ಈ ದಿನ ರಾಜಕೀಯವಾಗಿ ಒಂದಾಯಿತು.

ದಕ್ಷಿಣ ಭಾರತದಲ್ಲಿ ಕನ್ನಡ ಭಾಷೆ ಮಾತನಾಡುವ ಎಲ್ಲ ಪ್ರದೇಶಗಳನ್ನು ವಿಲೀನಗೊಲೀಸಿ ಒಂದು ರಾಜ್ಯವಾಗಿ ಘೋಷಣೆ ಮಾಡಿದ ಈ ದಿನವನ್ನು ಕನ್ನಡ ರಾಜ್ಯೊ?ತ್ಸವವಾಗಿ ಆಚರಿಸಲಾಗುತ್ತದೆ ಎಂದು ಶ್ರೀಮತಿ ರಶ್ಮಿ ಕುಲಕರಣಿ ಮಾತನಾಡಿದರು

ಇದೆ ಸಂಧರ್ಭದಲ್ಲಿ ಶ್ರೀಮತಿ ರಶ್ಮಿ ಕುಲಕರಣಿ ಎ.ಎಸ್.ಎನ್. ಕಾನೂನು ಮಾಹಾವಿದ್ಯಾಲಯ ನಾಲತವಾಡ, ಪಿ.ಬಿ. ಚೌಡಿ-ಕೇರಿ, ಮನೋಹರ .ಬಿ. ಪಾಟೀಲ್, ರವಿ ನಾಲತವಾಡ, ಬಸವರಾಜ, ಹೆಚ್. ಎಲ್. ಸರೂರ, ವಿರೇಶ್ ಕತ್ತಿ, ಭಾಗ್ಯಶ್ರೀ, ನಿರೂಪಣೆ ರೇಖಾ. ಸಿ. ಕಡೂರ್, ಸ್ವಾಗತ ಶೀಲಾ ನಾಯಕ್, ವಂದನಾರ್ಪಣೆ ಅನ್ನಪೂರ್ಣ ಕಡೂರ್, ಪ್ರಾರ್ಥನ ಗೀತೆ ಹಾಡಿದವರು ಅಂಬಿಕಾ ಹಾಗೂ ಅನ್ನಪೂರ್ಣ , ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ಉಪಸ್ಥಿತರಿದ್ದರು.

# ಕೆ.ಕೆ.ಆರ್.ಟಿ.ಸಿ. ಕೇಂದ್ರ ಕಚೇರಿಯಲ್ಲಿ ಧ್ವಜಾರೋಹಣ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: 70ನೇ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೇಂದ್ರ ಕಚೇರಿಯಲ್ಲಿ ನಿಗಮದ ಅಧ್ಯಕ್ಷರಾದ ಅರುಣಕುಮಾರ. ಎಂ.ವೈ. ಪಾಟೀಲ ಅವರು ಶನಿವಾರ ಕನ್ನಡ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ರಾಷ್ಟ್ರ ಧ್ವಜಾರೋಹಣಾ ನೆರವೇರಿಸಿದರು.

ನಂತರ ಅವರು ಮಾತನಾಡಿ, ಕನ್ನಡ ಭಾಷೆ ಅತ್ಯಂತ ಸರಳ ಮತ್ತು ಸುಲಭವಾಗಿದ್ದು, ಆಡಳಿತದ ಎಲ್ಲಾ ಹಂತದಲ್ಲಿ ಕನ್ನಡವನ್ನು ಬಳಸಬೇಕು. ಆಂಗ್ಲ ಭಾಷೆ ಕೆಲವು ಸಂದರ್ಭಗಳಲ್ಲಿ ಅನಿವಾರ್ಯವಾಗಿದ್ದರೂ ಸಹ, ಕನ್ನಡ ಭಾಷೆಯನ್ನು ಆಡಳಿತದಲ್ಲಿ ಹೆಚ್ಚು ಹೆಚ್ಚು ಬಳಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಿಗಮದ ಅಧ್ಯಕ್ಷನಾಗಿ ಇತ್ತೀಚೆಗೆ ಅಧಿಕಾರವಹಿಸಿಕೊಂಡಿದ್ದು, ನಿಗಮದ ಏಳಿಗಾಗಿ ತಾವು ಶ್ರಮಿಸುವುದಾಗಿ ತಿಳಿಸಿದರು. ನಿಗಮದ ಪ್ರಗತಿ ಮತ್ತು ಅಭಿವೃದ್ದಿಗೆ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳ ಅಗತ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕರಾದ ಡಾ. ಬಿ. ಸುಶೀಲಾ ಅವರು ಮಾತನಾಢಿ, ಕನ್ನಡ ಮಾತೃ ಭಾಷೆಯನ್ನು ಆಡಳಿತದಲ್ಲಿ ಬಳಸುವ ಜೊತೆಗೆ ಕನ್ನಡ ಭಾಷೆಯ ಏಳಿಗೆಗೆ ಶ್ರಮಿಸಬೇಕು. ಸಾರಿಗೆ ನಿಗಮವು ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಬಸ್ ನಿಲ್ದಾಣಗಳಲ್ಲಿ ಕನ್ನಡ ಜ್ಞಾನ ಪೀಠ ಪುರಸ್ಕೃತರ ಭಾವ ಚಿತ್ರಗಳನ್ನು ಅಳವಡಿಸಿ, ಕನ್ನಡದ ಕಂಪನ್ನು ಎಲ್ಲಾ ಕಡೆ ಹರಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿಗಳು ಸೇರಿದಂತೆ ನಿಗಮದ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ತರಬೇತಿಗಾಗಿ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಕಲಬುರಗಿ ಮಹಾನಗರಪಾಲಿಕೆ 2024-25ನೇ ಸಾಲಿಗಾಗಿ ಶೇ. 24.10 ಯೋಜನೆ 2019-20ನೇ ಸಾಲಿನ ಪಾಲಿಕೆ ನಿಧಿ ಪರಿಷ್ಕೃತ ಕ್ರೀಯಾ ಯೋಜನೆ ಅನುದಾನದಡಿಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಪಂಗಡದ ಜನರಿಗೆ ಲಘು ವಾಹನ ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಿ ಅರ್ಹ ಮತ್ತು ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿಯನ್ನು ಕಲಬುರಗಿ ಪಾಲಿಕೆಯ ನೋಟೀಸ್ ಬೋರ್ಡ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಉಪ ಆಯುಕ್ತರು (ಆಡಳಿತ) ಅವರು ತಿಳಿಸಿದ್ದಾರೆ.

ಈ ಲಘು ವಾಹನ ತರಬೇತಿಗಾಗಿ ದಿನಾಂಕ: 25-07-2025 ರಿಂದ 21-08-2025ರ ವರೆಗೆ ಪರಿಶಿಷ್ಟ ಜಾತಿಯ ಒಟ್ಟು 02 ಮತ್ತು ಪರಿಶಿಷ್ಟ ಪಂಗಡದ 04 ಹೀಗೆ ಒಟ್ಟು 06 ಅರ್ಜಿಗಳ ಸ್ವೀಕರಿಸಲಾಗಿದೆ. ಈ ಅರ್ಹ ಮತ್ತು ಅನರ್ಹ ಪಟ್ಟಿಗೆ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಕಲಬುರಗಿ ಮಹಾನಗರ ಪಾಲಿಕೆಯ ಕಚೇರಿಯಲ್ಲಿ 2025ರ ನವೆಂಬರ್ 3 ರಿಂದ 11 ರವರೆಗೆ ಕಚೇರಿಯ ಸಮಯದಲ್ಲಿ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆಯನ್ನು ಸಲ್ಲಿಸಬೇಕು. ತದನಂತರ ಬಂದ ಆಕ್ಷೇಪಣೆಗಳು ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

# ಕಲ್ಬುರ್ಗಿ ಮಣ್ಣಿನ ಮಕ್ಕಳಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿರಿ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಕನ್ನಡ ನಾಡು, ನುಡಿ, ನೆಲ, ಜಲ, ಭಾಷೆಗಳ ಸೇವೆ ಸಲ್ಲಿಸಿದವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡುವಾಗ ಕಲ್ಬುರ್ಗಿ ನೆಲದಲ್ಲಿ ಹುಟ್ಟಿ ಬೆಳೆದ ಮಣ್ಣಿನ ಮಕ್ಕಳಿಗೆ ಪ್ರಶಸ್ತಿ ನೀಡಬೇಕು. ಕಲಬುರಗಿ ಕೋಟಾದಲ್ಲಿ ನೀಡುವ ಪ್ರಶಸ್ತಿ ಬೇರೆಯವರಿಗೆ ನೀಡುತ್ತಿರುವುದು ಸರಿಯಾದ ಕ್ರಮವಲ್ಲ. ಈ ಮುಂಚೆ ಬೆಳಗಾವಿಯ ರಾಮಕೃಷ್ಣ ಮರಾಠೆ ಎಂಬುವವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಕಲಬುರ್ಗಿ ಜಿಲ್ಲೆಯ ಕೋಟದಲ್ಲಿ ನೀಡಲಾಯಿತು. ಈ ಬಾರಿ ಬೆಳಗಾವಿ ಜಿಲ್ಲೆಯ ಕೌಜಲಗಿ ಗ್ರಾಮ ನಿವಾಸಿ ಹೊಸಮನೆಯವರಿಗೆ ಕಲ್ಬುರ್ಗಿ ಕೋಟಾದಲ್ಲಿ ಪ್ರಶಸ್ತಿ ನೀಡಲಾಗಿದೆ. ಇದು ಸರಿಯಾದ ಕ್ರಮವಲ್ಲ.! ಇಲ್ಲಿನ ಸಾಹಿತಿ, ಕವಿ, ಕಲಾವಿದರು,

ಪ್ರಕಾಶಕರಿಗೆ ಈ ಬಾರಿ ಕಲ್ಯಾಣ ಕರ್ನಾಟಕದ ಸಾಹಿತಿಗಳನ್ನು ಹಾಗೂ ಸಾಹಿತ್ಯ ಕ್ಷೇತ್ರವನ್ನು ಕಡೆಗಣಿಸಿರುವುದು ಸಾಹಿತಿಗಳಿಗೆ ಮಾಡಿದ ಅವಮಾನವಾಗಿದೆ. ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಯಾವೊಬ್ಬ ಸಾಹಿತಿಯನ್ನು ಗುರುತಿಸದಿರುವುದು ವಿಷಾದನೀಯ!. ಕವಿಗಳಿಗೆ ರಾಜಮಾರ್ಗ ತೋರಿಸಿದ ಹಳಗನ್ನಡ, ನಡುಗನ್ನಡ, ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ವಪದ, ಸೂಫಿ ಅನುಭಾವಿ ಸಾಹಿತ್ಯ ಸೃಷ್ಟಿಸಿದ ಮತ್ತು ಆಧುನಿಕ ಅನೇಕ ಹೊಸ ಕಾವ್ಯ ರೂಪಗಳನ್ನು ಕನ್ನಡ ನಾಡಿಗೆ ನೀಡಿದ ಈ ನೆಲದ ಮಕ್ಕಳಿಗೆ ಪ್ರಶಸ್ತಿ ದೊರೆಯದಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ.ರಾಜ್ಯ ಸರ್ಕಾರ ಕಲ್ಯಾಣ ಕರ್ನಾಟಕಕ್ಕೆ ಆದ್ಯತೆ ನೀಡುವದಾಗಿ ಹೇಳುತ್ತದೆ.371(ಜೆ) ಕಲಂ

ಪ್ರಕಾರ ಕೊಡಬೇಕಾದ ಸಾಮಾಜಿಕ, ಪ್ರತಿಭಾನ್ವೇಷಣೆ, ನ್ಯಾಯದ ಪ್ರಕಾರ ಅವಕಾಶಗಳನ್ನು ನೀಡುವಾಗ

ಅದನ್ನು ಮರೆತು ಬಿಡುತ್ತದೆ.ಈ ನೆಲದ ಪ್ರತಿಭೆಗಳಿಗೆ ಕಡೆಗಣಿಸುವುದು ಪ್ರಶಸ್ತಿ ನೀಡದಿರುವುದು ಹೊಸದೇನಲ್ಲ ಇದೇ ರೀತಿ ಮುಂದುವರಿಸಿದಲ್ಲಿ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಈ ಮೂಲಕ ಎಚ್ಚರಿಸುತ್ತೇವೆ.

ಕಲ್ಯಾಣ ಕರ್ನಾಟಕ ಪ್ರದೇಶದ ಜನಪ್ರತಿನಿಧಿಗಳು, ಸಚಿವರು, ಶಾಸಕರು, ಏನು ಮಾಡುತ್ತಾರೆ? ಸಾಹಿತ್ಯ ಸಂಸ್ಕೃತಿ ಬಗ್ಗೆ ಒಲವು ಹೊಂದಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ತಮ್ಮ ಕ್ಷೇತ್ರಕ್ಕೆ ಮೂರು ಪ್ರಶಸ್ತಿಗಳನ್ನು ನೀಡಿದ್ದಾರೆ ಇದು ಸ್ವಜನ ಪಕ್ಷಪಾತಕ್ಕೆ ಸಾಕ್ಷಿಯಾಗಿದೆ. ಕಲ್ಬುರ್ಗಿ ಜಿಲ್ಲೆಗೆ ಒಂದು ಪ್ರಶಸ್ತಿ ನೀಡಿ ಅದೇ ಸಣ್ಣ ಸಣ್ಣ ಜಿಲ್ಲೆಗೆ ಎರಡು, ಮೂರು ನೀಡಿ ಮಲತಾಯಿ ಧೋರಣೆ ತೋರಿದ್ದಾರೆ. ಇದು ಸಾಹಿತಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಒಂದು ಬಾರಿ ಆತ್ಮವಲೋಕನ ಮಾಡಿಕೊಳ್ಳಬೇಕೆಂದು ಈ ಮೂಲಕ ವಿನಮ್ರವಾಗಿ ಎಚ್ಚರಿಸುತ್ತೇವೆ. ಸಿರಿಗನ್ನಡ ವೇದಿಕೆ ಜಿಲ್ಲಾಧ್ಯಕ್ಷ ಡಾ.ಗವಿಸಿದ್ಧಪ್ಪ ಪಾಟೀಲ, ಸಾಹಿತಿಗಳಾದ ಪ್ರೊ.ಶಿವರಾಜ ಪಾಟೀಲ, ಡಾ.ಚಿ.ಸಿ.ನಿಂಗಣ್ಣ, ಡಾ.ರಾಜಕುಮಾರ ಮಾಳಗೆ, ಡಾ.ಶೀಲಾದೇವಿ ಬಿರಾದಾರ, ಮತ್ತಿತರರು.

# ಸಂಭ್ರಮದ ರಾಜ್ಯೋತ್ಸವ ದಿನಾಚರಣೆ

## ನವ ಕಲಬುರಗಿ ನಿರ್ಮಾಣಕ್ಕೆ ಸಂಕಲ್ಪ 15 ದಿನದಲ್ಲಿ ನೀಲಿ ನಕ್ಷೆ: ಪ್ರಿಯಾಂಕ್ ಖರ್ಗೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಬಂಡವಾಳ ಹೂಡಿಕೆಯೊಂದಿಗೆ ಜಿಲ್ಲೆಯಲ್ಲಿ ನವೋದ್ಯಮಕ್ಕೆ ಉತ್ತೇಜನ, ಪ್ರವಾಸೋದ್ಯಮ ಅಭಿವೃದ್ದಿ, ಯುವ ಸಬಲೀಕರಣ, ಶೈಕ್ಷಣಿಕ ಹಾಗೂ ಆರ್ಥಿಕ ಸಬಲತೆ ಹೊಂದುವ ಸಮಗ್ರ ಅಭಿವೃದ್ಧಿಗಾಗಿ ನವ ಕಲಬುರಗಿ ನಿರ್ಮಾಣದ ಸಂಕಲ್ಪ ಹೊಂದಿದ್ದು, ಮುಂದಿನ 15 ದಿನದಲ್ಲಿ ಇದರ ನೀಲಿನಕ್ಷೆ ಸಾರ್ವಜನಿಕರ ಮುಂದೆ ಇಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ-ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶನಿವಾರ ಕಲಬುರಗಿಯ ನೆಹರು ಗಂಜ್ ಪ್ರದೇಶದ ಶ್ರೀ ನಗರೇಶ್ವರ ಪ್ರೌಢಶಾಲೆಯ ಆವರಣದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ 70ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ನಾಡದೇವತೆ ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿ ರಾಷ್ಟ್ರಧ್ವಜಾರೋಹಣ ಮಾಡಿದ ನಂತರ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು.

ನವ ಕಲಬುರಗಿಯ ನೀಲಿನಕ್ಷೆ ಸಿದ್ದಪಡಿಸಿದ ನಂತರ ಸಾರ್ವಜನಿಕರ ಸಲಹೆ ಪಡೆದು ಇದಕ್ಕೆ ಅಂತಿಮ ರೂಪ ನೀಡಿ ಮುಂದಿನ ಒಂದೂವರೆ ವರ್ಷದಲ್ಲಿ ಸುಸ್ಥಿರ ಕಲಬುರಗಿ ಮಾಡಲು ವಿನೂತನ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು. ಸಿ.ಎಸ್.ಆರ್. ನೆರವಿನಿಂದ ಕಲಬುರಗಿಯನ್ನು ಸ್ಮಾರ್ಟ್ ಸಿಟಿ ಮಾಡಲು ಸಹ ಕಳೆದ ಒಂದು ವರ್ಷದಿಂದ ನಿರಂತರವಾಗಿ ಸ್ಥಳೀಯ ಶಾಸಕರು, ಅಧಿಕಾರಿಗಳು, ವಿವಿಧ ಸಹಭಾಗಿತ್ವದಾರರೊಂದಿಗೆ ಸಭೆ ನಡೆಸಿ ಸಲಹೆ ಪಡೆದು ಕ್ರಿಯಾ ಯೋಜನೆ ರೂಪಿಸಲಾಗಿದ್ದು, ಭವಿಷ್ಯದಲ್ಲಿ ಕಲಬುರಗಿಯನ್ನು ಸುಸ್ಥಿರ ಅಭಿವೃದ್ಧಿ ಹೊಂದಿದ ನಗರವನ್ನಾಗಿ ಮಾಡಲು ಪಣ ತೊಡಲಾಗಿದೆ ಎಂದರು. ಜಿಲ್ಲೆಯ ನಾಗಾವಿ, ಮಳಖೇಡ್ ಕೋಟೆ, ಕನಕಗನಹಳ್ಳಿ, ಕಾಳಗಿಯ ಸೂರ್ಯನಾರಾಯಣ ದೇವಾಲಯ ಹಾಗೂ ಇತರೆ ಪಾರಂಪರಿಕ ಮತ್ತು ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸ್ಥಳೀಯವಾಗಿ ಅರ್ಥಿಕ ವಹಿವಾಟಿಗೆ ವೇಗ ನೀಡಲಾಗುವುದು. ದೇವಲ ಗಾಣಗಾಪುರ ಸಮಗ್ರ ಅಭಿವೃದ್ಧಿಗೆ "ಪ್ರಸಾದ" ಯೋಜನೆಯಡಿ ಸೇರ್ಪಡೆಗೆ ಈಗಾಗಲೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿ 500 ಕೋಟಿ ರೂ. ಹಣ ವಿನಿಯೋಗಿಸುವ ಯೋಜನೆ ರೂಪಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಯುವ ಸಬಲೀಕರಣ ನಿಟ್ಟಿನಲ್ಲಿ ಕಲಬುರಗಿಯನ್ನು ಕ್ರೀಡಾ ನಗರಿಯನ್ನಾಗಿ ಮಾಡಲಾಗುವುದು. 2-3 ತಿಂಗಳಲ್ಲಿ ಕ್ರೀಡಾ ಚಟುವಟಿಕೆಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ಹಾಕಲಾಗುವುದು.

ಕರ್ನಾಟಕದ ಮಾನವ ಸಂಪನ್ಮೂಲದ ಬಗ್ಗೆ ವಿಶ್ವದಲ್ಲೇ ಹೆಚ್ಚಿನ ಗೌರವವಿದೆ ಎಂದು ಹೇಳಿದ ಸಚಿವರು, ಜರ್ಮನ್ ಮೂಲದ ಮರ್ಸಿಡೀಸ್ ಬೆಂಜ್ ಕಂಪನಿಯ ಅಧ್ಯಕ್ಷರು ತಾವು ಕರ್ನಾಟಕಕ್ಕೆ ಹೋಗಿಬಂದ ಮೇಲೆ



ಹೊಸ ಚೈತನ್ಯ ಮೂಡುತ್ತದೆ. ಬೆಂಗಳೂರಿನ ತಮ್ಮ ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿದಾಗ ಅಲ್ಲಿ ಕೆಲಸ ಮಾಡುವವರು ಜರ್ಮನಿಯನ್ನು ಸುಲಲಿತವಾಗಿ ಮಾತನಾಡುತ್ತಾ ಕೆಲಸ ಮಾಡುತ್ತಿದ್ದರು ಅದನ್ನು ನೋಡಿ ಖುಷಿಯಾಯಿತು ಎಂದು ಕನ್ನಡಿಗರ ಬಗ್ಗೆ ಮಾಧ್ಯಮಗಳ ಸಂದರ್ಶನವೊಂದರಲ್ಲಿ ಪ್ರಶಂಸೆ ವ್ಯಕ್ತಪಡಿಸಿದ್ದರು ಎಂದು ಸಚಿವರು ಘಟನೆಯನ್ನು ಮೆಲುಕು ಹಾಕಿದರು. ಕರ್ನಾಟಕ ಏಕೀಕರಣದ ಕನಸು ಕಂಡ ಡೆಪ್ಯೂಟಿ ಚೆನ್ನಬಸಪ್ಪ ಆದಿಯಾಗಿ ಅನೇಕ ಕನ್ನಡ ಮನಸುಗಳ ನಿರಂತರ ಫಲವಾಗಿ 1956ರಲ್ಲಿ ಕನ್ನಡಿಗರೆಲ್ಲರು ಕನ್ನಡ ತಾಯಿಯ ಮಡಿಲಿಗೆ ಸೇರುವಂತಾಯಿತು ಎಂದು ಉಜ್ವಲ ಭವಿಷ್ಯ ನಿಮ್ಮದಾಗಲಿದೆ. ನಮ್ಮಲ್ಲಿ ಪ್ರತಿಭೆಗೆ ಕೊರತೆ ಇಲ್ಲ. ದೇಶ ವಿದೇಶಕ್ಕೆ ಮಾನವ ಸಂಪನ್ಮೂಲ ರಫ್ತು ಮಾಡುವ ಸಾಮರ್ಥ್ಯ ಕರ್ನಾಟಕಕ್ಕಿದೆ ಎಂದರು.

75 ಕೋಟಿ ರೂ. ಮೊತ್ತದಲ್ಲಿ ಕಲಬುರಗಿ ಲೀಪ್ ಯೋಜನೆ: ಬೆಂಗಳೂರುದಾಚೆ ಎರಡು ಮತ್ತು ಮೂರನೇ ಹಂತದ ನಗರಗಳ ಬೆಳವಣಿಗೆಗೆ ಸರ್ಕಾರ 1,000 ಕೋಟಿ ರೂ. ಹೂಡಿಕೆಯ ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ ( ಐಂಛಿಚಿಟ ಇಛಿಂಟಿಂಟಥಿ ಂಛಿಛಿಜಟಜಡಿಚಿಣಂಡಿ ಕಡಿಂರಡಿಚಿಟಟಜ- ಐಇಂಕ) ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ. ಇದರ ಅಡಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ, ಕೃಷಿ, ಕೈಗಾರಿಕೆ, ತಂತ್ರಜ್ಞಾನ, ನವೋದ್ಯಮ, ಎಲೆಕ್ಟ್ರಾನಿಕ್, ಉದ್ಯಮಶೀಲತೆ ಕ್ಷೇತ್ರಗಳ ಅಭಿವೃದ್ದಿ ಪಡಿಸಲಾಗುವುದು. ಇದಕ್ಕೆ ಪೂರಕವಾಗಿ ನವೆಂಬರ್ 18 ರಂದು ನಡೆಯುವ ಬೆಂಗಳೂರು ಟೆಕ್ ಸಮ್ಮಿಟ್ ನಲ್ಲಿ ಜಿಲ್ಲೆಯ 75 ಕೋಟಿ ರೂ. ಮೊತ್ತದ ಕ ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳಲಾಗುವುದು ಎಂದ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಸ್ಥಬ್ದ ಚಿತ್ರ ಮೆರವಣಿಗೆಗೆ ಚಾಲನೆ: ರಾಜ್ಯೋತ್ಸವ ಅಂಗವಾಗಿ ನಗರೇಶ್ವರ ಶಾಲೆಯಿಂದ ಆರಂಭವಾದ ತಾಯಿ ಭುವನೇಶ್ವರಿ ಭಾವಚಿತ್ರದ ಜೊತೆಗೆ ವಿವಿಧ ಇಲಾಖೆಯ ಜನಪರ ಯೋಜನೆಗಳನ್ನು ಪ್ರತಿಬಿಂಬಿಸುವ ಸ್ಥಬ್ದ ಚಿತ್ರಗಳ ಮೆರವಣಿಗೆಗೆ ಸಚಿವ ಪ್ರಿಯಾಂಕ್ ಖರ್ಗೆ ಅವರು ಡೊಳ್ಳು ಬಾರಿಸುವ ಮೂಲಕ ಚಾಲನೆ ನೀಡಿದರು. ಕೃಷಿ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯಣ ಕೆ.ಕೆ.ಆರ್.ಟಿ.ಸಿ. ಸೇರಿದಂತೆ ವಿವಿಧ ಇಲಾಖೆಯ ಸ್ಥಬ್ದ ಚಿತ್ರಗಳು ಭಾಗವಹಿಸಿದ್ದವು.5 ಜನರಿಗೆ ಸಾಂಕೇತಿಕ ಹಕ್ಕು ಪತ್ರ ವಿತರಣೆ: ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ವಾಸವಾಗಿರುವ ನಿವಾಸಿಗಳಿಗೆ

ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ 94ಸಿ ರಡಿ ಸಕ್ರಮಗೊಳಿಸಿ ಕಲಬುರಗಿ ತಾಲೂಕಿನ ಬೋಳೆವಾಡ, ಕೇರೂರ, ಹಾಳ ಸುಲ್ತಾನಪೂರ, ಇಟಗಾ ಅಹ್ಮದಾಬಾದ ಗ್ರಾಮದ 184 ಜನರಿಗೆ ಹಕ್ಕು ಪತ್ರ ಮಂಜೂರಾಗಿದ್ದು, ಈ ಪೈಕಿ ಇಂದಿಲ್ಲಿ ಬೋಳೆವಾಡ ಗ್ರಾಮದ ಜಯಶ್ರೀ ಗಂಡ ಬಾಬುರಾವ, ಬಸಮ್ಮ ಗಂಡ ಬೀರಪ್ಪ, ರಿಜ್ವಾನಾ ಗಂಡ ಮಹಮ್ಮದ್ ಪಾಶಾ, ಗುಂಡಪ್ಪ ತಂದೇ ಬೀರಪ್ಪ ಹಾಗೂ ನಸೀರುದ್ದಿನ್ ತಂದೆ ಬಾಬುಲಾಲ ಅವರಿಗೆ ಸಾಂಕೇತಿಕವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಕ್ಕು ಪತ್ರ ವಿತರಣೆ ಮಾಡಿದರು. ತಹಶಿಲ್ದಾರ ಕೆ. ಆನಂದಶೀಲ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಶಾಸಕರಾದ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಮ್. ವೈ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್ ಹಾಗೂ ಮಹಾನಗರ ಪಾಲಿಕೆ ಮಹಾಪೌರರಾದ ವರ್ಷಾ ರಾಜೀವ ಜಾನೆ, ಉಪ ಮಹಾಪೌರರಾದ ತೃಪ್ತಿ ಲಾಖೆ, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಕಾರ್ಯದರ್ಶಿ ನಲಿನ್ ಅತುಲ್, ಕೆ.ಕೆ.ಆರ್.ಟಿ.ಸಿ. ವ್ಯವಸ್ಥಾಪಕ ನಿರ್ದೇಶಕಿ ಡಾ. ಬಿ. ಸುಶೀಲಾ, ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತ ಪಾಂಡ್ವೆ ರಾಹುಲ್ ತುಕಾರಾಮ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಡಿ.ಸಿ.ಪಿ ಕನಿಕಾ ಸಿಕ್ರಿವಾಲ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಾನಗರ ಪಾಲಿಕೆಯ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು, ಕನ್ನಡಪರ ಸಂಘಟನೆಗಳು, ಶಾಲಾ ಮಕ್ಕಳು, ಕಲಾವಿದರು ಭಾಗವಹಿಸಿದ್ದರು.

# ಅನ್ಯ ಭಾಷೆಗಳನ್ನು ಕಲಿಕೆಗೆ ಬಳಸೋಣ ಮಾತೃಭಾಷೆ ಗೌರವಿಸೋಣ: ನಾಯ್ಕಲ್



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು ಎನ್ನುವ ವೇದವಾಕ್ಯದೊಂದಿಗೆ ಕನ್ನಡದ ಕಲೆ ಸಂಸ್ಕೃತಿ ಸಾಹಿತ್ಯ ಅದ್ಭುತವಾಗಿದೆ ಕನ್ನಡ ಭಾಷೆ ಇದಾಗಿದ್ದು.

ಎಲ್ಲಾ ಭಾಷೆಗಳಲ್ಲಿ ಅತ್ಯಂತ ಶ್ರೇಷ್ಠವಾದ ಸಂಪತ್ ಬರಿತವಾದ ಬಾಷೆ ಎಂದರೆ ಅದು ಕನ್ನಡ ಭಾಷೆಯು ಕರ್ನಾಟಕದಲ್ಲಿ ನಲೆಸಿರುವ ಕನ್ನಡಿಗರ ಬದುಕು ಮತ್ತು ಅಸ್ತಿತ್ವವನ್ನು ಕಟ್ಟಿಕೊಟ್ಟಿದೆ ನಮ್ಮ ನೆಲ ಹಾಗೂ ಭಾಷಾಭಿಮಾನ ಪ್ರತಿಯೊಬ್ಬ ಕನ್ನಡಿಗರ ಹೃದಯದಲ್ಲಿ ಮೂಡಲಿ ಎಂದು ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲರಾದ ಶರಣು ನಾಯ್ಕಲ್ ನುಡಿದರು. ನಗರದ ಹೃದಯ ಭಾಗದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ದೊರಿಗುಡ್ಡ ಉಕ್ಕಿನಾಳ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡಿ ಕನ್ನಡ ಭಾಷೆಗೆ ಪ್ರಾಚೀನ ಇತಿಹಾಸವಿದೆ ಕನ್ನಡ ಭಾಷೆಗೆ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಯನ್ನು ಲಭಿಸಿವೆ. ಕನ್ನಡದ ರತ್ನತ್ರಯರು ,ವಚನಕಾರರು, ದಾಸರು, ಸಂತರು, ಸೂಫಿಗಳು,ಅನೇಕ ಸಾಧಕರು ನೆಲೆಸಿದ ಹೆಮ್ಮೆಯ ಬೀಡು ಈ ಕರುನಾಡು ಕನ್ನಡಿಗರ ಪಾಲಿಗೆ ಅತ್ಯಂತ ಸಂಭ್ರಮದ ದಿನ. ಏಕೆ–ಂದರೆ ಇದು ನಾಡ ಹಬ್ಬ ಕನ್ನಡದ ಹಬ್ಬ ರಾಜ್ಯೋತ್ಸವದ ದಿನ ಸುದಿನ. ಇದ್ದರು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು.

ಶಾಲೆಯ ಶಿಕ್ಷಕರಾದ

ಸುಭಾಷ್ ನಾಯಕ್. ಚಂದ್ರು ರಾಥೋಡ್.ಮಡಿವಾಳಪ್ಪ ಹೆಗ್ಗಣದೊಡ್ಡಿ. ದತ್ತಪ್ಪ ಸರ್. ರಾಜಕುಮಾರ್ ಬಡಿಗೇರ್. ಸಂತೋಷ್ ಜೋಗುರ್. ಬಸವರಾಜ್ ನಾಯಕ್. ಭಾಗಮ್ಮ ಪಿ ಪಾಟೀಲ್. ದೀಪಾ ದೊಡ್ಡಮನಿ. ಸೌಮ್ಯ ಕುಲಕರ್ಣಿ. ಶಕುಂತಲಾ ಶರ್ಪುರ್ಕರ್. ಶಾಲೆಯ ಮುದ್ದು ಮಕ್ಕಳು ಉಪಸ್ಥಿತರಿದ್ದರು.

# ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿಗೆ ಶಿಣ್ಣೂರ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ಶಹಪುರ: ಯಾದಗಿರಿ ಜಿಲ್ಲಾ ಆಡಳಿತ ವತಿಯಿಂದ ಕೊಡ ಮಾಡುವ 2025–26 ನೇ ಸಾಲಿನ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಸಾಹಿತಿ,ಪತ್ರಕರ್ತ, ಸಂಘಟಕ ಬಸವರಾಜ ಶಿಣ್ಣೂರ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಕನ್ನಡ ರಾಜೋತ್ಸವ ಆಯ್ಕೆ ಸಮಿತಿ ಪ್ರಕಟಣೆಗೆ ತಿಳಿಸಿದೆ.

ಶಹಪುರ ತಾಲೂಕಿನ ಸಗರ ಗ್ರಾಮದ ನಿವಾಸಿಯಾದ ಇವರು, ಕಲಾನಿಕೇತನ ಟ್ರಸ್ಟ್ ಕಟ್ಟಿಕೊಂಡು ಕಲೆ,ಸಾಹಿತ್ಯ,ಸಂಗೀತ,ಮತ್ತು ಸಂಸ್ಕೃತಿ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವುದರ ಜೊತೆಗೆ,ಸಾಹಿತಿಗಳಾಗಿ ಪತ್ರಕರ್ತರಾಗಿ,ಸಂಘಟಕರಾಗಿ, ಜಿಲ್ಲೆಯಾದ್ಯಂತ ಕಳೆದ 15 ವರ್ಷಗಳಿಂದ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸುತ್ತ ಕನ್ನಡ ನಾಡು ನುಡಿ ನೆಲ ಜಲಕ್ಕಾಗಿ ಶ್ರಮಿಸುತ್ತಿದ್ದಾರೆ,

ಇವರ ಅನುಪಮ ಸೇವೆಯನ್ನು ಪರಿಗಣಿಸಿ ನವೆಂಬರ್ 1 ರಂದು ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ ಅದ್ದೂರಿ ಕನ್ನಡ ರಾಜ್ಯೋತ್ಸವ ಸಂಭ್ರಮದಲ್ಲಿ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಿದೆ.

# ಕರ್ನಾಟಕ ರಾಜ್ಯೋತ್ಸವ: ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಕರ್ನಾಟಕ ರಾಜ್ಯೋತ್ಸವ ಹಾಗೂ ಜಯ ಕರ್ನಾಟಕ ಜನಪರ ವೇದಿಕೆ ಸಂಘಟನೆಯ 5ನೇ ವರ್ಷದ ವಾರ್ಷಿಕೋತ್ಸವನ್ನು ಶಹಾಪುರದಲ್ಲಿ ಆಚರಿಸುವ ಕುರಿತು ಶಹಾಪುರ ತಾಲೂಕಾ ಅಧ್ಯಕ್ಷ ಸೋಪಣ್ಣ ಹಳಿಸಗರ ಅವರ ನೇತೃತ್ವದಲ್ಲಿ ಶಹಾಪುರ ನಗರದ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಯಿತು..

ಈ ಸಂದರ್ಭದಲ್ಲಿ. ರಾಜ್ಯ ಸಂಘಟನಾ ಕಾರ್ಯದರ್ಶಿ ವೆಂಕಟೇಶ ರೆಡ್ಡಿ ತುಳೇರ. ಜಿಲ್ಲಾ ಕಾರ್ಯಾಧ್ಯಕ್ಷ. ರವಿಕುಮಾರ ನಾಯಕ ಭೈರಿಮಡ್ಡಿ. ಸುರಪುರ ತಾಲೂಕಾ ಅಧ್ಯಕ್ಷ ಗೋಪಾಲ ನಾಯಕ ಸತ್ಯಂಪೇಟ್. ಹುಣಸಗಿ ತಾಲೂಕಾ ಅಧ್ಯಕ್ಷ ಪ್ರಭುಗೌಡ ಪೋತರಡ್ಡಿ. ಜಿಲ್ಲಾ ಉಪಾಧ್ಯಕ್ಷ ಬಸ್ಸು ರತ್ತಾಳ. ಜಿಲ್ಲಾ ಸಂಚಾಲಕ ನಾಗರಾಜ ಪೂಜಾರಿ ಖಾನಾಪುರ. ಗೌರವಾಧ್ಯಕ್ಷ ಭೀಮು ನಾಯಕ ಬಿದರಾಣಿ.

ತಾ.ಉಪಾಧ್ಯಕ್ಷ ಅಲೀಂ ಜಮಾದಾರ. ಮಹಿಳಾ ತಾಲೂಕಾ ಅಧ್ಯಕ್ಷೆ ಶ್ರೀಮತಿ ರೇಣುಕಾ ಎಚ್ ತಳವಾರ. ಸೋಮು ಗೌಡ. ನಿಂಗಣ್ಣ ಹವಾಲ್ದಾರ್

ವಂಡಬೂಳ..ಶ್ರೀಮತಿ ಬಸ್ಸಮ್ಮ ಮಡಿವಾಳಕರ್.ಶ್ರೀಮತಿ ಜ್ಯೋತಿ.ಭೀಮರಾಯ ಕೋಲಕಾರ. ಶಿವಮೂರ್ತಿ ದಿವಳಗುಡ್ಡ. ಎಮ್.ಡಿ.ಗೌಶ್. ಪರಶುರಾಮ ವಠಾರ ಸಗರ.

ರಾಮುಲು ನಾಯಕ ಹುಣಸಗಿ ತಾಂಡಾ. ಶಿವರಾಜ್ ಕುಂಬಾರ ಹುಣಸಗಿ.ಅಶೋಕ ಬಾಣಂತಿಹಾಳ.ಸಿದ್ದು ಬಾಣಂತಿಹಾಳ.ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಉಸ್ತುವಾರಿ ಸಚಿವ ದರ್ಶನಾಪುರರಿಂದ ಉದ್ಘಾಟನೆ

## ರಾಜ್ಯಮಟ್ಟದ ಚೆಸ್ ಪಂದ್ಯಾವಳಿಗೆ ಸಕಲಸಿದ್ಧತೆ: ಡಿಡಿಪಿಐ ಮುಧೋಳ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: 2025–26ನೇ ಸಾಲಿನ 17 ವರ್ಷದೊಳಗಿನ ವಯೋಮಾನದ ಬಾಲಕ ಮತ್ತು ಬಾಲಕಿಯರ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ ನವೆಂಬರ್ 3 ರಿಂದ 5 ರವರೆಗೆ ಸರಕಾರಿ ಮಾದರಿ ಪದವಿ ಕಾಲೇಜು (ರೂಸಾ), ದಿಗ್ಗಿ ರೋಡ್ ಶಹಾಪುರದಲ್ಲಿ ಆಯೋಜಿಸಲಾಗಿದ್ದು, ಕಾರ್ಯಕ್ರಮಕ್ಕೆಯಾವುದೇ ರೀತಿಯ ಲೋಪವಾಗದ ರೀತಿಯಲ್ಲಿ ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕ ಚನ್ನಬಸಪ್ಪ ಮುಧೋಳ ತಿಳಿಸಿದರು.

ನಗರದ ಕ್ಷೇತ್ರಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಪಂದ್ಯಾವಳಿಯ ವ್ಯವಸ್ಥೆ ಕುರಿತು ಮಾತನಾಡಿದ ಅವರು, 17 ವರ್ಷದ ಒಳಗಿನ ವಯೋಮಾನದ ಬಾಲಕ ಮತ್ತು ಬಾಲಕಿಯರ ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ 175 ಬಾಲಕರು ಹಾಗೂ 175 ಬಾಲಕಿಯರು ಭಾಗವಹಿಸುತ್ತಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಗೂ ಉದ್ಘಾಟನೆಯನ್ನು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ನೆರವೇರಿಸಲಿದ್ದಾರೆ. ವಿಶೇಷವಾಗಿ ಸಂಸದರು, ಜಿಲ್ಲೆಯ ಶಾಸಕರು, ವಿವಿಧ ಅಭಿವೃದ್ಧಿ ನಿಗಮ ಮಂಡಳಿಗಳ ಅಧ್ಯಕ್ಷರು, ವಿರೋಧಪಕ್ಷದ ನಾಯಕರು, ನಗರಸಭೆ ಅಧ್ಯಕ್ಷರು, ಸೇರಿದಂತೆ ಪ್ರಮುಖ ಮುಖಂಡರು, ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿರುವರು. ಪಂದ್ಯಾವಳಿಯಲ್ಲಿ ಭಾಗವಹಿಸಲು ಆಗಮಿಸುವ ಬಾಲಕರ ವಸತಿ ವ್ಯವಸ್ಥೆ ಮತ್ತು ನೋಂದಣಿ ಸರಕಾರಿ ಮಾದರಿ ಪದವಿ ಕಾಲೇಜು (ರೂಸಾ), ದಿಗ್ಗಿ ರೋಡ್, ಶಹಾಪುರದಲ್ಲಿ ಮತ್ತು ಬಾಲಕಿಯರ ವಸತಿ ವ್ಯವಸ್ಥೆ ಮತ್ತು ನೋಂದಣಿ ಡಿ.ದೇವರಾಜ ಅರಸ್ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ, ಕನ್ಯಾಕೋಳೂರು ರಸ್ತೆಯಲ್ಲಿ ವ್ಯವಸ್ಥೆ

ಮಾಡಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವ ಮಕ್ಕಳ ಸೌಲಭ್ಯಕ್ಕಾಗಿ ಹಾಗೂ ಸುರಕ್ಷತೆಯ ಹಿತದೃಷ್ಟಿಯಿಂದ ಸ್ವಾಗತ ಸಮಿತಿ, ಪ್ರಚಾರ ಸಮಿತಿ, ವಸತಿ ಸಮಿತಿ, ಸಾರಿಗೆ ಸಮಿತಿ, ಆರೋಗ್ಯ ಸಮಿತಿ,

ಊಟ/ಉಪಹಾರ ಸಮಿತಿ,ನ್ಯಾಯನಿರ್ಣಯ ಸಮಿತಿ, ನೋಂದಣಿ ಸಮಿತಿ ಹಾಗೂ ದಾಖಲೆ ನಿರ್ವಹಣೆ ಸಮಿತಿ, ಶಿಸ್ತು ಮತ್ತು ರಕ್ಷಣಾ ಸಮಿತಿ, ವೇದಿಕೆ ಸಮಿತಿಗಳನ್ನು ರಚಿಸಿ ಜವಬ್ದಾರಿ ಹಂಚಿಕೆಮಾಡಲಾಗಿದೆ, ಕಲ್ಬುರ್ಗಿ ಚೆಸ್

ಫೆಡರೇಶನ್‌ದವರಿಗೆ ಚೆಸ್ ಪಂದ್ಯಾವಳಿ ಕುರಿತು ಸೂಕ್ತ ನೀರ್ವಹಣೆಗೆ ಮನವಿಮಾಡಲಾಗಿದೆ. ರಾಜ್ಯಮಟ್ಟದ ಪಂದ್ಯಾಟವಿರುವದಿಂದ ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲು ಸರ್ವರ ಸಹಕಾರದಿಂದ ಸಕಲಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ವಿಶ್ರಾಂತ ಉಪನಿರ್ದೇಶಕರು ಶಾಲಾ ಸುಧರಣಾ ಸಮಿತಿಯ ಅಧ್ಯಕ್ಷರು ಶಾಂತಗೌಡ ಪಾಟೀಲ, ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಎಸ್.ಹರಗಿ, ಡಯಟ್ ಉಪನ್ಯಾಸಕ ನಿಂಗಣ್ಣ ಸಿಂಪಿ, ಟಿಪಿಓ ಶರಣಪ್ಪ ಪಾಟೀಲ್, ಇಸಿಓ ಸಿದ್ದರಾಮಪ್ಪ, ಪ್ರಾಚಾರ್ಯ ಹಣಮಂತ್ರಾಯ ಸೋಮಾಪೂರ, ನಿ.ದೈ.ಶಿ ಸುಧಾಕರ ಗುಡಿ, ದೈ.ಶಿ ಬಸವರಾಜ ಗೋಗಿ, ಸೇರಿದಂತೆ ಶಿಕ್ಷಣ ಇಲಾಖೆಯ ಇತರರು ಇದ್ದರು.

# ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

ಮಲ್ಲಮ್ಮ ನುಡಿ ವಾರ್ತೆ

ಬೀದರ ನ.01 :– ಇಂದು ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ 70ನೇ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಯಿತು.ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಸೋಮನಾಥ ಪಾಟೀಲ ಅವರು ತಾಯಿ ಕನ್ನಡಾಂಬೆ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಬುಡಾ ಮಾಜಿ ಅಧ್ಯಕ್ಷರಾದ ಬಾಬುವಾಲಿ, ಜಿಲ್ಲಾ ಪಮಚಾಯತ ಮಾಜಿ ಅಧ್ಯಕ್ಷ ಬಾಬುರಾವ ಕಾರುಬಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪೀರಪ್ಪ ಔರಾದೆ, ಜಿಲ್ಲಾ ಕಾರ್ಯದರ್ಶಿ ರಾಜಕುಮಾರ ಪಾಟೀಲ ನೆಮತಬಾದ, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ಉಲ್ಲಾಸಿನಿ ಮುದಾಳೆ, ನಗರ ಘಟಕದ ಅಧ್ಯಕ್ಷ ಶೇಶಿ ಹೊಸಳ್ಳಿ,



ಸುಭಾಷ ಮಡಿವಾಳ, ಗಣೇಶ ಭೋಸ್ಲೆ, ರಾಜೇಂದ್ರ ಪೂಜಾರಿ, ನೀತಿನ ನೌಲಕೇಲೆ, ನರೇಶ ಗೌಳಿ, ವೀರು ದಿಗ್ವಾಲ್, ಗೋಪಾಲ ಕಕಡಾಲ್, ಜಿಲ್ಲಾ ಮಾಧ್ಯಮ ಸಂಚಾಲಕರಾದ ಶ್ರೀನಿವಾಸ ಚೌದರಿ ಸೇರಿದಂತೆ ಹಲವಾರು ಬಿಜೆಪಿ ನಾಯಕರು ಉಪಸ್ಥಿತರಿದ್ದರು.

## ನಗರದಲ್ಲಿ ಸಂಭ್ರಮದಿಂದ ಕರ್ನಾಟಕ ರಾಜ್ಯೋತ್ಸವ ಆಚರಣೆ

# ನೆಲ,ಜಲ,ಭಾಷೆ,ಸಂಸ್ಕೃತಿ ರಕ್ಷಣೆಗೆ ಸರ್ಕಾರ ಬದ್ಧ: ದರ್ಶನಾಪುರ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಕರ್ನಾಟಕದ ನೆಲ,ಜಲ, ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ರಕ್ಷಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪ ದರ್ಶನಾಪುರ ಅವರು ಹೇಳಿದರು.

ಯಾದಗಿರಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ವಿವಿಧ ಕವಾಯತು ಪಡೆಗಳಿಂದ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಕರ್ನಾಟಕ ಸರ್ಕಾರವು ನಮ್ಮನಾಡು–ನುಡಿಯ ರಕ್ಷಣೆಗೆ ಹಾಗೂ ಕಲೆ, ಸಾಹಿತ್ಯ, ಸಂಸ್ಕೃತಿ ಉಳಿಸಿ ಬೆಳೆಸಲು ಕಾರ್ಯಪ್ರವೃತ್ತವಾಗಿದೆ. ಕನ್ನಡಿಗರ ಏಳ್ಗೆಗಾಗಿ ಹಲವು ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದರು.

ಇಂದು ನಾವೆಲ್ಲ ಸಂಭ್ರಮದಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ನಮಗೆಲ್ಲ ತಿಳಿದಿರುವಂತೆ ಭಾರತ ಸ್ವತಂತ್ರಗೊಂಡು ಗಣರಾಜ್ಯ ಉದಯವಾದ ಸಂದರ್ಭದಲ್ಲಿ ಈಗಿನ ಕರ್ನಾಟಕವು ವಿವಿಧ ಪ್ರಾಂತ್ಯಗಳಲ್ಲಿ ಹರಿದು ಹಂಚಿ ಹೋಗಿತ್ತು. ಅದರಂತೆ ದೇಶದ ನಾನಾ ಭಾಗಗಳ ಪರಿಸ್ಥಿತಿಯು ಇದೆ ಆಗಿತ್ತು. ಆಗ ಭಾಷಾವಾರು ಪ್ರಾಂತ್ಯಗಳ ರಚನೆಯ ಕೂಗು ಎಲ್ಲೆಡೆ ಭುಗಿಲೆದ್ದಿತು.

ಯಾವಾಗ ಆಂಧ್ರ ರಾಜ್ಯ ರಚನೆ ಆಯ್ತೋ ಅದೇ ರೀತಿಯಾಗಿ ಭಾಷೆ ಆಧಾರದ ಮೇಲೆ ನಮಗೂ ಒಂದೊಂದು ರಾಜ್ಯ ನಿರ್ಮಾಣವಾಗಬೇಕೆನ್ನುವ ಹೋರಾಟ ದೇಶದ ನಾನಾ ಭಾಗಗಳಲ್ಲಿ ತೀವ್ರಗೊಂಡಿತು. "ಕನ್ನಡದ ಕುಲ ಪುರೋಹಿತ" ಎಂದೆ ಹೆಸರಾದ ಆಲೂರು ವೆಂಕಟರಾಯರು 1905 ರಷ್ಟು ಹಿಂದೆಯೇ ಕರ್ನಾಟಕ ಏಕೀಕರಣ ಚಳುವಳಿಯನ್ನು ಪ್ರಾರಂಭಿಸಿದ್ದನ್ನು ಸಹ ನಾವು ಸ್ಮರಿಸಬಹುದಾಗಿದೆ. 1953ರಲ್ಲಿ ನ್ಯಾಯಮೂರ್ತಿ ಫಜಲ್ ಅಲಿ ಅವರ ನೇತೃತ್ವದಲ್ಲಿ ರಾಜ್ಯ ಪುನರ್ ವಿಂಗಡಣೆ ಆಯೋಗವನ್ನು ನೆಹರುಜೀ ಯವರು ನೇಮಿಸಿ 1956 ರಲ್ಲಿ ರಾಜ್ಯಗಳ ಪುನರ್ ವಿಂಗಡನಾ ಕಾಯ್ದೆಯನ್ನು ಜಾರಿಗೊಳಿಸಿದರು. ಆಗ ನವೆಂಬರ್ 1, 1956 ರಂದು ಮದ್ರಾಸ್– ಬಾಂಬೆ – ಹೈದರಾಬಾದ್ ಪ್ರಾಂತ್ಯದಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದುಗೂಡಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು.

ಅದಾದ 17 ವರ್ಷಗಳ ನಂತರ ಅಂ–ದರೆ 1973 ನವೆಂಬರ್ 1 ರಂದು ಮಾಜಿ ಮುಖ್ಯಮಂತ್ರಿ ದಿ. ದೇವರಾಜ್ ಅರಸುರವರು ಕರ್ನಾಟಕ ಎಂದು ನಾಮಕರಣ ಮಾಡಿದರು. ದೇಶದ ಭಾಷೆ ಮತ್ತು ಸಾಹಿತ್ಯ ಪರಂಪರೆಯಲ್ಲಿ ಕನ್ನಡ ನಾಡು ಮತ್ತು ನುಡಿಗೆ ಉನ್ನತವಾದ ಸ್ಥಾನವಿದೆ ಮತ್ತು 2000 ವರ್ಷಗಳಿಗೂ ಮೀರಿದ ಇತಿಹಾಸವಿದೆ "ಕಾವೇರಿಯಿಂದ ಗೋದಾವರಿವರೆಗೆ ಕನ್ನಡ ನಾಡು ಹಬ್ಬಿದೆ" ಎಂದು ಕನ್ನಡದ ಮೊದಲ ಕೃತಿ "ಕವಿರಾಜಮಾರ್ಗ"ದಲ್ಲಿ ಉಲ್ಲೇಖಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ. ಕನ್ನಡ ನಾಡನ್ನು ಆಳಿದ ಅನೇಕ ರಾಜ ಮನೆತನಗಳಾದ ಕದಂಬರು, ರಾಷ್ಟ್ರಕೂಟರು, ವಿಜಯನಗರ ರಾಜರು, ಚಾಲುಕ್ಯರು, ಗಂಗರು, ಟಿಪ್ಪು, ಮೈಸೂರ ಒಡೆಯರ್‌ರು, ಈ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ .

ಕರ್ನಾಟಕ ಮತ್ತು ಕನ್ನಡವು ಹಲವಾರು ಕಲಾವಿದರು ಕವಿಗಳು, ರಸ ಋಷಿಗಳಿಗೆ, ವೀರಶೂರರಿಗೆ ಜನ್ಮ ನೀಡಿದ ನಾಡಾಗಿದೆ. ಕನ್ನಡ ಭಾಷೆಯಂತೂ ಸವಿಗನ್ನಡ ಎಂದೇ ಹೆಸರಾಗಿದೆ. ಮಾತನಾಡುವುದನ್ನೇ ಬರೆಯುವ ಬರೆಯುದನ್ನೇ ಓದುವ ವಿಶಿಷ್ಟ ಭಾಷೆ ಕನ್ನಡವಾಗಿದೆ. ಕನ್ನಡ ರಾಜ್ಯೋತ್ಸವ ದಿನದಂದು ಮಾತ್ರ ನಾವು ಕನ್ನಡ ಪ್ರೀತಿಯನ್ನು ತೋರಿಸಿದರೆ ಸಾಲದು. ವರ್ಷಪೂರ್ತಿ ಕನ್ನಡದ ಮೇಲೆ ಪ್ರೀತಿ ಮತ್ತು ಅಭಿಮಾನವನ್ನು ತೋರಿಸಬೇಕಾದದ್ದು ಕನ್ನಡಿಗರಾದ ನಮ್ಮೆಲ್ಲರ ಕರ್ತವ್ಯವಾಗಿದೆ.

ತಾಯಿನೆಲ ಮತ್ತು ತಾಯಿನುಡಿಯನ್ನು ಯಾರು ಸಹ ಮರೆಯಬಾರದು. ಕುವೆಂಪು ರವರು "ಈ ನಾಡು ನನ್ನದು ನನ್ನದು ನಾಡು ಎನ್ನದ ಮಾನವನ ಎದೆ ಸುಡುಗಾಡು" ಎಂದಿದ್ದಾರೆ ಆದ್ದರಿಂದ ನಾಡು ನುಡಿಗಾಗಿ ನಾವು ಎಂತಹ ತ್ಯಾಗಕ್ಕೂ ಸಿದ್ಧರಾಗಿರಬೇಕು. ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ, ಜನಪದ ಸಾಹಿತ್ಯ, ಹಂತಿ ಪದಗಳು, ಡೊಳ್ಳಿನ ಪದಗಳು, ಬಯಲಾಟ, ಯಕ್ಷಗಾನ, ದಾಸರ ಪದಗಳು ಸಮೃದ್ಧವಾಗಿದ್ದು ನಮ್ಮ ನಾಡಿನ ಮತ್ತು ನಮ್ಮ ನುಡಿಯ ಹೆಮ್ಮೆಯಾಗಿದೆ. ನಾವು ಉದ್ಯೋಗಕ್ಕಾಗಿ ಇತರ ರಾಜ್ಯ ಮತ್ತು ದೇಶಗಳಿಗೆ ಹೋದರು ಸಹ ಕನ್ನಡ ಭಾಷೆಯನ್ನು ಮರೆಯಬಾರದು ನಮ್ಮ ಹಿರಿಯರು ಹೇಳಿದಂತೆ "ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" "ಕನ್ನಡವೇ ಸತ್ಯ ಕನ್ನಡವೇ ನಿತ್ಯ" "ಶ್ರೀಗನ್ನಡಂ ಗೆಲ್ಗೆ ಶ್ರೀಗನ್ನಡಂ ಬಾಳ್ಗೆ" ಎಂದು ಸಚಿವರು ನುಡಿದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ವಿಶೇಷ ಅನುದಾನ: ರಾಜ್ಯ ಸರ್ಕಾರವು ಎಲ್ಲ ಕ್ಷೇತ್ರಗಳಲ್ಲಿ ಪ್ರಗತಿಗೆ ಒತ್ತು ನೀಡುತ್ತಿದೆ. ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮೂಲಕ ಬೆಂಗಳೂರನ್ನು ರಾಷ್ಟ್ರದ ಮಾದರಿ ನಗರವನ್ನಾಗಿಸಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ನಂಜುಂಡಪ್ಪ ವರದಿ ಅನ್ವಯ ಹೆಚ್ಚಿನ ಅನುದಾನ ಒದಗಿಸುತ್ತಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಂವಿಧಾನ ತಿದ್ದುಪಡಿ ಕಲಂ 371 (ಜೆ) ಜಾರಿಗೊಳಿಸಿ ಯುವಜನಾಂಗದ ಅನುಕೂಲಕ್ಕಾಗಿ ಶೈಕ್ಷಣಿಕ ಹಾಗೂ ಉದ್ಯೋಗಕ್ಕೆ ಹೆಚ್ಚಿನ ಗಮನ ನೀಡಿ ಬಲ ತುಂಬುವ ಕೆಲಸ ಮಾಡಿದೆ. ಪ್ರತಿ ವರ್ಷ 5000 ಕೋ.ರೂ.ಗಳನ್ನೂ ಒದಗಿಸಿ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದೆ. ಪ್ರತಿ ಸಮಾಜದ ಬಡ ಕುಟುಂಬಗಳ ನೆರವಿಗೆ ಹಲವು ಕ್ರಮಗಳನ್ನು ಕೈಗೊಂಡಿದ್ದು, ಎಲ್ಲರೂ ಜಾತಿ, ಮತ, ಪಂಥ, ಭೇದಭಾವ ಮರೆತು ಈ ರಾಜ್ಯದ ಏಳ್ಗೆಗಾಗಿ ಶ್ರಮಿಸೋಣ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಮಾಜಿ ಸಚಿವರು ಹಾಗೂ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಾಬುರಾವ್ ಚಿಂಚನಸೂರ್, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದ್‌ಪುರ್, ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ, ನಗರಸಭೆ ಅಧ್ಯಕ್ಷ ಲಲಿತಾ ಅನಪುರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ್ ಕಾಡ್ಲೂರ್, ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಅಪರ ಜಿಲ್ಲಾಧಿಕಾರಿ ರಮೇಶ ಕೋಲಾರ, ಸಹಾಯಕ ಆಯುಕ್ತ ಶ್ರೀಧರ್ ಗೋಟುರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ಗಣ್ಯರು ಉಪಸ್ಥಿತರಿದ್ದರು.

ಸಮಾಜ ಸೇವೆ, ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸತ್ಕರಿಸಲಾಯಿತು. ಕರ್ನಾಟಕ, ನೆಲ, ಜಲ, ಭಾಷೆ, ಇತಿಹಾಸ ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಸಾಧನೆ ಕುರಿತ ಸ್ತಬ್ಧ ಚಿತ್ರಗಳು, ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು.

# ಕನ್ನಡ ಭಾಷೆ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಕನ್ನಡ ಭಾಷೆ ಜೀವಂತ ಭಾಸಷೆಯಾಗಿದ್ದು ಇದಕ್ಕೆ ಎರಡು ಸಾವಿರ ಐನೂರ ವರ್ಷಗಳ ಇತಿಹಾಸವಿದೆ. ಜಗತ್ತಿನ ಪುರಾತನ 10 ಭಾಷೆಗಳಲ್ಲಿ ಕನ್ನಡ ಭಾಷೆಯೂ ಕೂಡ ಒಂದು, ಇಂಥಹ ಶ್ರೀಮಂತ ಭಾಷೆಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಹಶೀಲ್ದಾರ್ ಡಾ.ವಿನಯಾ ಹೂಗಾರ ಹೇಳಿದರು. ಶನಿವಾರ ಪಟ್ಟಣದ ಸರಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಆವರಣದಲ್ಲಿ ತಾಲೂಕ ಆಡಳಿತದ ವತಿಯಿಂದ ಹಮ್ಮಿಕೊಂಡ 70ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಕರ್ನಾಟಕ ಏಕೀಕರಣಕ್ಕೆ ಉತ್ತರ ಕರ್ನಾಟಕದ ಕೊಡುಗೆ ಅಪಾರವಾಗಿದ್ದು ಅದು ಏಕೀಕರಣದ ಹೃದಯ ಭಾಗವಾಗಿದೆ ಎಂದು ಹೇಳಿದ ಅವರು 1956 ನವೆಂಬರ್ 1ರಂದು ಮೈಸೂರು ರಾಜ್ಯ ಎಂದು ಘೋಷಿಸಲಾಗಿತ್ತು ಮುಂದೆ 1973 ನವಂಬರ್ 1ರಂದು ಇದನ್ನು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು. ದೇಶದ ಪ್ರಗತಿಯಲ್ಲಿ ಕರ್ನಾಟಕ ಯಾವಾಗಲೂ ತನ್ನ ಮಹತ್ವದ ಪಾತ್ರ ನಿರ್ವಹಿಸಿದೆ ಎಂದರು. ಪ್ರಾಚಾರ್ಯ ಡಾ.ಅನೀಲಕುಮಾರ ಇರಾಜ್ ವಿಶೇಷ ಉಪನ್ಯಾಸ ನೀಡಿ ಕನ್ನಡ ರಾಜ್ಯೋತ್ಸವ ಕನ್ನಡಾಂಬೆಗೆ ಗೌರವ ಸಲ್ಲಿಸುವ ಹಾಗೂ ಕನ್ನಡ ಭಾಷಾಭಿಮಾನಮೆರೆಯುವದಿನವಾಗಿದೆ ಎಂದರು.ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿಧನರಾದ ನಾಡಿನ ಶ್ರೇಷ್ಠ ರಂಗ ಕಲಾವಿದ ರಾಜು ತಾಳಿಕೋಟಿ ಇವರಿಗೆ ತಾಲೂಕ ಆಡಳಿತ ಹಾಗೂ ಕನ್ನಡಪರ ಸಂಘಟನೆಗಳ ವತಿಯಿಂದ ನುಡಿ ನಮನ ಸಲ್ಲಿಸಲಾಯಿತು. ಕನ್ನಡ ನಾಡು ನುಡಿ ಭಾಷೆಗಾಗಿ ವಿಶೇಷ ಸೇವೆ ಸಲ್ಲಿಸಿದ ಮಹನೀಯರಿಗೆ, 2024– 25 ನೇ ಸಾಲಿನ ಎಸ್ ಎಸ್ ಎಲ್ ಸಿ ಕನ್ನಡ ಭಾಷಾ ಪರೀಕ್ಷೆಯಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಕುಮಾರಿ ಅಂಜಲಿ ವಿಜಯಸಿಂಗ್ ಹಜೇರಿ ಹಾಗೂ ಸಂಘಡಿಗರು ಪ್ರದರ್ಶಿಸಿದ ಭರತನಾಟ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ವಿವಿಧ ಶಾಲಾ ಮಕ್ಕಳಿಂದ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ಪುರಸಭೆ ಅಧ್ಯಕ್ಷೆ ಜುಬೇದಾ ಹುಸೇನಬಾಷಾ ಜಮಾದಾರ, ಉಪಾಧ್ಯಕ್ಷೆ ಗೌರಮ್ಮ ಕುಂಬಾರ, ತಾಪಂ ಇಓ ಅನುಸೂಯಾ ಚಲವಾದಿ, ಕ್ಷೇತ್ರಸಮನ್ವಯಾಧಿಕಾರಿ ಆರ್.ಬಿ.ದಮ್ಮೂರಮಠ, ಕಸಾಪ ಜಿಲ್ಲಾಧ್ಯಕ್ಷ ಆರ್.ಎಲ್.ಕೊಪ್ಪದ, ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕ ಅಧ್ಯಕ್ಷ ಸಂಗಮೇಶ ದೇಸಾಯಿ, ಪುರಸಭೆ ಮುಖ್ಯಾಧಿಕಾರಿ ವಸಂತ ಪವಾರ, ಪಿಎ ಜ್ಯೋತಿ ಖೋತ್, ಸಿಆರ್‌ಸಿ ರಾಜು ವಿಜಾಪುರ, ಕರವೇ ಜಿಲ್ಲಾ ಉಪಾಧ್ಯಕ್ಷ ಜೈಭೀಮ ಮುತ್ತಗಿ, ಪುರಸಭೆ ಸದಸ್ಯರು, ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ರಾಜಕೀಯ ದುರೀಣರು, ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು, ತಾಲೂಕ ಮಟ್ಟದ ಅಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಕನ್ನಡಾಭಿಮಾನಿಗಳು ಇದ್ದರು.

# ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸಿ



ಮಲ್ಲಮ್ಮ ನುಡಿ ವಾರ್ತೆ

ಬೀದರ್. ನ. 01 :– ರಾಜ್ಯದ ಸರ್ಕಾರಿ ಪಾಲಿಟೆಕ್ನಿ???ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪಾಲಿಟೆಕ್ನಿಕ್ ಅರೆಕಾಲಿಕ ಉಪನ್ಯಾಸಕರ ಸಂಘ ಆಗ್ರಹಿಸಿದೆ.

ಸಂಘದ ಪದಾಧಿಕಾರಿಗಳು ನಗರದಲ್ಲಿ ಶುಕ್ರವಾರ ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ರಾಜ್ಯದ 102 ಸರ್ಕಾರಿ ಪಾಲಿಟೆಕ್ನಿ???ಗಳಲ್ಲಿ 1,600 ಅತಿಥಿ ಉಪನ್ಯಾಸಕರು ಇದ್ದಾರೆ. ಹಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಅನೇಕರು ವಯೋಮಿತಿ ಮೀರುವ ಹಂತದಲ್ಲಿದ್ದಾರೆ. ಅದಾಗಿಯೂ ಅವರಿಗೆ ಸೇವಾ ಭದ್ರತೆ ಕಲ್ಪಿಸಿಲ್ಲ ಎಂದು ಸಂಘದ ರಾಜ್ಯ ಅಧ್ಯಕ್ಷ ಪ್ರವೀಣಕುಮಾರ ಮೀರಾಗಂಜಕರ್ ಗಮನ ಸೆಳೆದರು. ಬೇರೆ ಬೇರೆ ಇಲಾಖೆಗಳಲ್ಲಿ ಗುತ್ತಿಗೆ ನೌಕರರಿಗೆ 12 ತಿಂಗಳಲ್ಲಿ ಒಂದು ದಿನದ ಸಂಬಳ ಕಡಿತಗೊಳಿಸಿ, ಸಂಬಳ ಕೊಡಲಾಗುತ್ತಿದೆ. ಆದರೆ, ಪಾಲಿಟೆಕ್ನಿಕ್ ಅತಿಥಿ ಉಪನ್ಯಾಸಕರಿಗೆ 10 ತಿಂಗಳ ವೇತನ ಮಾತ್ರ ನೀಡಲಾಗುತ್ತಿದೆ ಎಂದು ಅಳಲು ತೋಡಿಕೊಂಡರು. ಪಾಲಿಟೆಕ್ನಿ???ಗಳಲ್ಲಿ ಹೊಸ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳದೆ, ಈಗಿರುವ ಅತಿಥಿ ಉಪನ್ಯಾಸಕರನ್ನೇ ಕಾಯಂಗೊಳಿಸಬೇಕು ಎಂದು ಒತ್ತಾಯಿಸಿದರು. ಗುಜರಾತ್, ಹರಿಯಾಣ ಮಾದರಿಯಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕು. ಪ್ರಶ್ನೆ ಪತ್ರಿಕೆ ಮೌಲ್ಯಮಾಪನ, ತರಬೇತಿಗೆ ಅವಕಾಶ ನೀಡಬೇಕು. ಮಹಿಳಾ ಅತಿಥಿ ಉಪನ್ಯಾಸಕರಿಗೆ ಹೆರಿಗೆ ರಜೆ ಕೊಡಬೇಕು. ಪ್ರತಿ ತಿಂಗಳು ವೇತನ ಬಿಡುಗಡೆ ಮಾಡಬೇಕು ಎಂದು ಬೇಡಿಕೆ ಮಂಡಿಸಿದರು. ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೃಷ್ಣಕಾಂತ ವಿಶ್ವಕರ್ಮ, ಪ್ರಮುಖರಾದ ಸಂತೋಷ್ ಲದ್ದೆ, ನಿತೀಶ್ ಕಾರಬಾರಿ, ಶರಣಬಸಪ್ಪ ವಾಲೆ, ಅವಿನಾಶ್, ಗೋವಿಂದ ನಾಯಕ್, ಫಾತಿಮಾ ಫಾರೂಕ್, ಕೀರ್ತಿ ಹಾಪಲಿ, ಅಶ್ವಿನಿ, ಪೂರ್ಣಿಮಾ ಸ್ವಾಮಿ, ಪ್ರವೀಣ್ ತೋರಣೆ, ಹುಸ್ನಜಬೀನ್ ಇದ್ದರು.

# ರಾಯಚೂರಲ್ಲಿ ಗಣ್ಯ ಮಹನಿಯರಿಗೆ ಕನ್ನಡ ರಾಜ್ಯೋತ್ಸವದ ವಿಶೇಷ ಸನ್ಮಾನ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ವಿವಿಧಕ್ಷೇತ್ರದಲ್ಲಿ ಕನ್ನಡ ನಾಡು ನುಡಿಗೆ ಸೇವೆ ಸಲ್ಲಿಸಿದ ರಾಯಚೂರು ಜಿಲ್ಲೆಯ ಗಣ್ಯ ಮಹನಿಯರಿಗೆ ನಗರದ ಮಹಾತ್ಮಗಾಂಧಿಜಿಲ್ಲಾಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ನವೆಂಬರ್ 1ರಂದು ನಡೆದ ಸಮಾರಂಭದಲ್ಲಿ ಕನ್ನಡ ರಾಜ್ಯೋತ್ಸವದ ವಿಶೇಷ ಸನ್ಮಾನ ನಡೆಯಿತು.

ಸಾಹಿತ್ಯ ಕ್ಷೇತ್ರದಲ್ಲಿ ಹಿರಿಯ ಸಾಹಿತಿ ಬಾಬು ಭಂಡಾರಿಗಲ್, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಹಿರಿಯ ಪತ್ರಕರ್ತ ಶಿವಮೂರ್ತಿ ಹಿರೇಮಠ, ವೈದ್ಯಕೀಯಕ್ಷೇತ್ರದಲ್ಲಿ ರಾಜೀವಗಾಂಧಿ ಸೂಪರ್ ಸ್ಪೆಷಾಲಿಟಿ ಓಪೆಕ್ ಆಸ್ಪತ್ರೆಯ ವಿಶೇಷಾಧಿಕಾರಿ ಡಾ.ರಮೇಶ ಸಿ ಸಾಗರ, ಸಮಾಜ ಸೇವೆ ಕ್ಷೇತ್ರದಲ್ಲಿ ಚಂದ್ರಶೇಖರ ಪಾಟೀಲ್ ಮಿರ್ಜಾಪೂರ, ಕಲಾ ಕ್ಷೇತ್ರದಲ್ಲಿ ಸಿಂಧನೂರು ತಾಲೂಕಿನ ಸುಕಾಲಪೇಟೆ ನಾರಾಯಣಪ್ಪ ಮಾಡಶಿರವಾರ, ಕೃಷಿಕ್ಷೇತ್ರದಲ್ಲಿ ರಾಯಚೂರು ತಾಲೂಕಿನ ಪಲ್ಕಂದೊಡ್ಡಿ ಗ್ರಾಮದ ಹನುಮರೆಡ್ಡಿ ತ೦ದೆ ಬಸವರಾಜಪ್ಪ ಹಾಗೂಸೇವಾ ಕ್ಷೇತ್ರದಲ್ಲಿ ಸುರಕ್ಷಾಟ್ರಸ್ಟ್ ರಾಯಚೂರು ಹಾಗೂ ಕಲಾ ಸಂಕುಲ ಸಂಸ್ಥೆ ರಾಯಚೂರುಅವರಿಗೆರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವವೈದ್ಯಕೀಯಶಿಕ್ಷಣಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಕರ್ನಾಟಕ ಪರಿಶಿಷ್ಟಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರುಗ್ರಾಮಾಂತರಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ರಾಯಚೂರುಮಹಾನಗರಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ್‌ಸಿಂಗ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ ಹಾಗೂ ಇನ್ನಿತರ ಗಣ್ಯರು, ಸನ್ಮಾನಿಸಿ ಗೌರವಿಸಿದರು.

# ವಿಮಾನ ನಿಲ್ದಾಣ ಕಾಮಗಾರಿಯ ವೀಕ್ಷಣೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ರಾಜ್ಯವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ನವೆಂಬರ್ 3 ರಂದು ರಾಯಚೂರು ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ರಾಯಚೂರು ನಗರ ಶಾಸಕರಾದ ಡಾ. ಶಿವರಾಜ್ ಪಾಟೀಲ್, ರಾಯಚೂರು ಗ್ರಾಮಾಂತರ ಶಾಸಕರಾದ ಬಸನಗೌಡ ದದ್ದಲ್, ಹಾಗೂ ರಾಯಚೂರು ಲೋಕಸಭಾ ಸದಸ್ಯ ಬಿ. ಕುಮಾರ ನಾಯಕ್ ಉಪಸ್ಥಿತರಿದ್ದರು. ಅಧಿಕಾರಿಗಳಿಂದ ಕಾಮಗಾರಿಯ ಪ್ರಗತಿ ವರದಿ ಹಾಗೂ ವಿನ್ಯಾಸ ನಕ್ಷೆ ಕುರಿತು ಮಾಹಿತಿ ಪಡೆಯಲಾಯಿತು.

ವಿಮಾನ ನಿಲ್ದಾಣ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳು ಮತ್ತು ತಾಂತ್ರಿಕ ಸಿಬ್ಬಂದಿ ಕಾರ್ಯದಲ್ಲಿ ತೊಡಗಿಕೊಂಡಿರುವುದನ್ನು ಸಚಿವರು ಪರಿಶೀಲಿಸಿದರು. ಕಾಮಗಾರಿಯ ಗುಣಮಟ್ಟ, ವೇಗ ಹಾಗೂ ಭದ್ರತಾ ಕ್ರಮಗಳ ಕುರಿತು ಸಚಿವರು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ನಿತೀಶ್ ಕೆ. (ಭಾ.ಆ.ಸೇ.), ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟಮಾದಯ್ಯ ಎಂ. (ಭಾ.ಪೋ.ಸೇ.), ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ (ಭಾ.ಆ.ಸೇ.), ಹಾಗೂ ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಪಾತ್ರ (ಭಾ.ಆ.ಸೇ.) ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸಚಿವರು ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು ಮತ್ತು ರಾಯಚೂರು ವಿಮಾನ ನಿಲ್ದಾಣವು ಜಿಲ್ಲೆಗೆ ಕೈಗಾರಿಕಾ, ಶಿಕ್ಷಣ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಹೊಸ ಬೆಳವಣಿಗೆಯನ್ನು ತರುವ ನಿರೀಕ್ಷೆಯಿದೆ ಎಂದು ಹೇಳಿದರು.

# ಅಮೃತ್ ಭಾರತ ಯೋಜನೆ ಅಡಿಯಲ್ಲಿ

## ರಾಯಚೂರು ರೈಲ್ವೆ ನಿಲ್ದಾಣಕ್ಕೆ ಅಧಿಕಾರಿಗಳ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ಅಮೃತ್ ಭಾರತ ಯೋಜನೆಯಡಿ ರಾಯಚೂರು ಮತ್ತು ಯಾದಗಿರಿ ರೈಲ್ವೆ ನಿಲ್ದಾಣಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಜನಪ್ರತಿನಿಧಿಗಳಿಂದ ಸಲಹೆ ಮತ್ತು ಸೂಚನೆಗಳನ್ನು ಪಡೆಯುವ ಉದ್ದೇಶದಿಂದ ಗುಂಟಕಲ್ ವಿಭಾಗದ ಹಿರಿಯ ಅಧಿಕಾರಿಗಳ ತಂಡ ಇಂದು ರಾಯಚೂರು ರೈಲ್ವೆ ನಿಲ್ದಾಣಕ್ಕೆ ಭೇಟಿ ನೀಡಿದ

ಗುಂಟಕಲ್ ವಿಭಾಗದ ಮ್ಯಾನೇಜರ್ ಜಿತೇಂದ್ರ ಕುಮಾರ್, ಖಡಿ.ಆಇಓ (ನಾರ್ತ್) ಜಗದೀಶ್, ಇಊಖಒ ಸೇರಿದಂತೆ ಅಧಿಕಾರಿಗಳು ನಿಲ್ದಾಣದ ಸೌಲಭ್ಯಗಳನ್ನು ಪರಿಶೀಲಿಸಿ, ಸ್ಥಳೀಯ ಪ್ರಯಾಣಿಕರು ಹಾಗೂ ರೈಲ್ವೆ ನಿಲ್ದಾಣ ಸಲಹಾ ಸಮಿತಿ ಸದಸ್ಯರೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಸ್ಥಳೀಯರು ಮತ್ತು ಜನಪ್ರತಿನಿಧಿಗಳು ನಿಲ್ದಾಣದಲ್ಲಿ ಎಸ್ಕಲೇಟರ್, ಲಿಫ್ಟ್ ಮತ್ತು ಎಲೆಕ್ಟ್ರಿಕ್ ವಾಹನ ವ್ಯವಸ್ಥೆಗಳನ್ನು ಶೀಘ್ರ ಜಾರಿಗೆ ತರಲು ಅಧಿಕಾರಿಗಳಿಗೆ ಮನವಿ ಮಾಡಿದರು. ಅಧಿಕಾರಿಗಳು ಈ ಬೇಡಿಕೆಗಳಿಗೆ ಧನಾತ್ಮಕವಾಗಿ ಸ್ಪಂದಿಸಿ, ಲಿಫ್ಟ್ ಇನ್ನೂ 8 ರಿಂದ 10 ದಿನಗಳಲ್ಲಿ ಕಾರ್ಯಾರಂಭವಾಗಲಿದೆ ಎಂದು ತಿಳಿಸಿದರು.

ಹಾಗೆಯೇ ಕಾಚಿಗುಡ ಎಕ್ಸ್‌ಪ್ರೆಸ್ ರೈಲನ್ನು ಸಂಜೆ ಬದಲಾಗಿ ಬೆಳಿಗ್ಗೆ ಆರಂಭಿಸಲು ಹಾಗೂ ಕೊರೋನಾ ಸಮಯದಲ್ಲಿ ನಿಲ್ಲಿಸಲಾದ ಗುಲ್ಬರ್ಗಾ□ ಗುಂಟಕಲ್ ಪ್ಯಾಸೆಂಜರ್ ರೈಲನ್ನು ಪುನರಾರಂಭಿಸಲು ಆಗ್ರಹಿಸಲಾಯಿತು. ಅಧಿಕಾರಿಗಳು ಈ ಬೇಡಿಕೆಗಳನ್ನೂ ಪರಿಗಣಿಸುವ ಭರವಸೆ ನೀಡಿದರು.

ಭೇಟಿಯಲ್ಲಿ ರೈಲ್ವೆ ಸಲಹಾ ಸಮಿತಿ ಸದಸ್ಯರಾದ ಎಂ. ಮಾರಪ್ಪ, ಎ. ಚಂದ್ರಶೇಖರ್, ರಮೇಶ್ ಬಾಗ್ರಾಜ್, ಸೀತಾ ನಾಯಕ್, ಚಂದ್ರಶೇಖರ ಜಾನೇಕಲ್, ಅಧಿಕಾರಿಗಳಾದ ಸ್ಟೇಷನ್ ಮ್ಯಾನೇಜರ್ ಅಶೋಕ್ ಕುಮಾರ್ ಮೀನಾ, ಸಿಸಿಐ ಹೇಮರಾಜ್ ಗೌಡ, ಎಸ್. ರಾಜು (೦ಆಇಓ), ಡಾ. ಅಮರ್ ಹಾಗೂ ಇತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ರೈಲ್ವೆ ನಿಲ್ದಾಣದಲ್ಲಿ ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕನ್ನಡ ತಾಯಿ ವಂದನೆ ಸಲ್ಲಿಸಲಾಯಿತು.

# ಆರ್.ಟಿ.ಓ. ವೃತ್ತ, ಮಡಿವಾಳ ಮಾಚಿದೇವ ವೃತ್ತದಲ್ಲಿ ರಾಜ್ಯೋತ್ಸವದ ಇತಿಹಾಸ ಸೃಷ್ಠಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ನಗರದ ಆರ್. ಟಿ. ಓ., ಮಡಿವಾಳ ಮಾಚಿದೇವ ವೃತ್ತದಲ್ಲಿ ರೇಸ್ ಶಿಕ್ಷಣ ಸಂಸ್ಥೆ ವತಿಯಿಂದ ಕನ್ನಡ ರಾಜ್ಯೋತ್ಸವದ ಸ್ವರಾರ್ಪಣ ಕಾರ್ಯಕ್ರಮವನ್ನು ಅತ್ಯಂತ ಅದ್ದೂರಿಯಾಗಿಭಿ ಆಚರಿಸಲಾಯಿತು.

ರೇಸ್ ಶಿಕ್ಷಣ ಸಂಸ್ಥೆಯ ಕಾರ್ಯ ನಿರ್ದೇಶಕರಾದ ಶಾರದಾ ದೇವಿ, ಕಾರ್ಯದರ್ಶಿಗಳಾದ ಎನ್. ಚಂದ್ರಮೋಹನ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಗಿತ್ತು.

ಶಿಕ್ಷಣ ಸಂಸ್ಥೆಯ ಸರ್ವ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಕಲಾವಿದರು ಹಾಗೂ ಸರ್ವ ಕನ್ನಡದ ಕಲಾಭಿಮಾನಿಗಳು ಸೇರಿ ಸುಮಾರು ಸಹಸ್ರಸಂಖ್ಯೆಯಲ್ಲಿ ಕನ್ನಡ ಗೀತೆಗಳನ್ನ ಒಂದೇ ಕಂಠದಲ್ಲಿ ಪ್ರಸ್ತುತ ಪಡಿಸಿ ಇಡೀ ರಾಯಚೂರಿನ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ನಗರದ ಹೊರ ಹೊಲಯದ ವೃತ್ತದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿ ನಗರದ ಸರ್ವ ಸಾರ್ವಜನಿಕರಕ ಮೆಚ್ಚುಗೆ ಪಾತ್ರವಾಗಿದೆ ರೇಸ್ ಶಿಕ್ಷಣ ಸಂಸ್ಥೆ.

ಕಲಾವಿದರಾದ ಚಿದಾನಂದ ನೂಲಿಯವರು ವಿದ್ಯಾರ್ಥಿಗಳಿಗೆ ಸುಮಾರು ಎಂಟು ದಿನಗಳ ಗಾಯನ ಮತ್ತು ನೃತ್ಯದ ತರಬೇತಿಯಿಂದಾಗಿ ಈ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು, ಹಾಗೇ ರೇಸ್ ಶಿಕ್ಷಣ ಸಂಸ್ಥೆಯ ಕಾರ್ಯ ನಿರ್ದೇಶಕರಾದ ಶಾರದಾ ದೇವಿ, ಪ್ರಾಂಶುಪಾಲರಾದ ಭಾವನಾ ದೈಲಾನಿ, ಉಪ ಪ್ರಾಂಶುಪಾಲರಾದ ಜಾಹಿದಾ ಬೇಗಂ, ಅವಿರತ ಪರಿಶ್ರಮದ ಫಲವಾಗಿ ಇಂದು ರಾಯಚೂರು ನಗರದ ಕನ್ನಡಾಭಿಮಾನದ ಕನ್ನಡಿಗರ ಮನದಲ್ಲಿ ಈ ಕಾರ್ಯಕ್ರಮ ಸ್ಮರಣೆಯವಾಗಿ ಉಳಿಯುವಂತೆ ಮಾಡಿದ್ದು ಶ್ಲಾಘನೀಯವಾಗಿದೆ.

ಕಾರ್ಯಕ್ರಮದ ಮುಂದಾಳತ್ವ ವಹಿಸಿಕೊಂಡು ಕನ್ನಡದ ತೆರನ್ನು ಎಳೆದ ಸಂಗೀತ ಶಿಕ್ಷಕರಿಗೂ ಮತ್ತು ಎಲ್ಲಾ ಶಿಕ್ಷಕ ಬಳಗಕ್ಕೂ ಮತ್ತು ಮುದ್ದು ವಿದ್ಯಾರ್ಥಿಗಳಿಗೂ ಕನ್ನಡಮಾತೆಗೆ ನಮಿಸಿದ ಸರ್ವರಿಗೂ ಜನತೆ ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಶಾರದಾ ದೇವಿಯವರು ನಾನು ಕನ್ನಡದ ನೆಲದಲ್ಲಿ ಜನಿಸಿದವಳಲ್ಲದಿದ್ದರೂ ನನಗೆ ಮಾತನಾಡಲು ಕಲಿಸಿದ್ದು ಕನ್ನಡ, ಅನ್ನ, ನೀರು, ಗಾಳಿ, ನೀಡುತ್ತಿರುವುದು ಕನ್ನಡವಾಗಿದೆ




ನನಗೆ ಜನ್ಮ ನೀಡಿದ್ದು ಆಂದ್ರವಾಗಿದೆ ಅದಕ್ಕೆ ನಾನು ಚಿರರೃಣಿ, ಆದರೆ ನನಗೆ ಬದುಕು ನೀಡಿದ ಕನ್ನಡವನ್ನು ಅತ್ಯಂತ ಪ್ರೀತಿ ಅಭಿಮಾನ ಎಂದೆಂದೂ ಕನ್ನಡವೇ ನಮ್ಮ ಉಸಿರು ಎಂದು ಹೇಳುತ್ತ ಸರ್ವರೂ ಸಹಿತ ಬೇರೆ ಭಾಷೆಗಳನ್ನು ಕಲಿಯಿರಿ ಯಾಕೆಂದರೆ ವ್ಯವಹಾರಕ್ಕೆ ನೂರೆಂಟು ಭಾಷೆ ಅಗತ್ಯ ಆದರೆ ಬದುಕಲು ನಾಡಿನ ಪ್ರೀತಿ ಪ್ರೇಮ, ದೇಶಾಭಿಮಾನ ನಾಡಾಭಿಮಾನ ಬೆಳೆಸಲು ಕನ್ನಡವೇ ನಿತ್ಯ ಕನ್ನಡವೇ ಸತ್ಯವೆಂದು ಹೇಳಿದರು, ಇಂದು ನಮ್ಮ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳನ್ನು ಕಳೆದ ಸುಮಾರು ದಿನಗಳಿಂದ ತರಬೇತಿ ನೀಡಿ ಇಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಚರಿಸಲು ಮುಖ್ಯ ಪಾತ್ರವಹಿಸಿದ್ದ ಕಲಾವಿದರಾದ ಚಿದಾನಂದ ನೂಲಿಯವರಿಗೆ ಮತ್ತು ಇಂದು ತಮ್ಮ ವಾಧ್ಯಗಳೊಂದಿಗೆ ನಮ್ಮನ್ನೆಲ್ಲ ಸ್ವರಲೋಕಕ್ಕೆ ಕೊಂಡೊಯ್ದ ಸರ್ವ ಕಲಾವಿದರಿಗೂ ನನ್ನ ಹೃದಯ ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಕಲವಿದರಾದ ಮಹಾಲಕ್ಷ್ಮಿ ಗೀತಾಂಜಲಿ, ನರೇಂದ್ರ ಕುಮಾರ, ಮಜೀದ್ ಸುಧಾಕರ ಅಸ್ಕಿಹಾಳ, ಸಂಪತ್ ಕುಮಾರ, ಜೂನಿಯರ್ ವಿಷ್ಣುವರ್ಧನ್ ವಿಷ್ಣು ನಾರಾಯಣ ದೇಸಾಯಿ ಸಾರಿಗೆ ಇಲಾಖೆ, ಜೂನಿಯರ್ ರಾಜಕುಮಾರ ಗುರುಲಿಂಗಪ್ಪ ದೇವರಮನಿ ಹಾಗೂ ರೇಸ್ ಶಿಕ್ಷಣ ಸಂಸ್ಥೆಯ ಸರ್ವ ಉಪನ್ಯಾಸಕರು, ಸಿಬ್ಬಂಧಿಗಳು, ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಾರ್ವಜನಿಕರು ಉಪಸ್ಥಿತರಿದ್ದರು.

# ತಾಲೂಕು ರಚನೆ ಪುನರ್‌ಪರಿಶೀಲನೆಗೆ ದೇವದುರ್ಗ ತಾಲೂಕು ಹೋರಾಟ ಸಮಿತಿಯಿಂದ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು: ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ನವೆಂಬರ್ 3 ರಂದು ರಾಯಚೂರು ವಿಮಾನ ನಿಲ್ದಾಣ



ನಿರ್ಮಾಣ ಕಾಮಗಾರಿಯನ್ನು ವೀಕ್ಷಿಸಲು ಆಗಮಿಸಿದ ಸಂದರ್ಭದಲ್ಲಿ, ದೇವದುರ್ಗ ತಾಲೂಕಿನ ಗ್ರಾಮಗಳ ಉಳಿವಿಗಾಗಿ ಹೋರಾಟ ಸಮಿತಿಯ ಪ್ರತಿನಿಧಿಗಳು ಸಚಿವರಿಗೆ ಮನವಿ ಪತ್ರ ಸಲ್ಲಿಸಿದರು.

ಸಮಿತಿಯ ಅಧ್ಯಕ್ಷ ಗೋವಿಂದರಾಜ ನಾಯಕ (ಕೋತ್ತದ್ದೊಡ್ಡಿ), ಪ್ರಧಾನ ಕಾರ್ಯದರ್ಶಿ ಶರಣಗೌಡ ಸುಂಕೇಶ್ವರಹಾಳ ಹಾಗೂ ಉಪಾಧ್ಯಕ್ಷ ಸಿದ್ದನಗೌಡ ಮೂಡಲಗುಂಡ ಅವರ ನೇತೃತ್ವದಲ್ಲಿ ನೀಡಲಾದ ಮನವಿ ಪತ್ರದಲ್ಲಿ, ನೂತನವಾಗಿ ರಚಿಸಲಾದ ಅರಕೇರಾ ತಾಲೂಕು ಯಲ್ಲಿ ಅಧಿಕಾರಿಗಳು ಮತ್ತು ಅಂದಿನ ಜನಪ್ರತಿನಿಧಿಗಳು ಸುಳ್ಳು ಮಾಹಿತಿ ನೀಡಿ ಸರ್ಕಾರವನ್ನು ತಪ್ಪು ದಾರಿಗೆ ಒಯ್ಯುವ ಮೂಲಕ ಅವೈಜ್ಞಾನಿಕ ರೀತಿಯಲ್ಲಿ ತಾಲೂಕು ಘೋಷಣೆ ಮಾಡಿರುವುದಾಗಿ ಆರೋಪಿಸಲಾಗಿದೆ.

ಮನವಿಯಲ್ಲಿ ತಿಳಿಸಿರುವ ಪ್ರಕಾರ, ದೇವದುರ್ಗ ತಾಲೂಕಿನ ಮಲದಕಲ್, ರಾಮದುರ್ಗ, ಗಾಣಧಾಳು, ಸೋಮನಮರಡಿ, ಹೋಸರು ಸಿದ್ದಾಪುರ, ಪಲಕನಮರಡಿ ಸೇರಿದಂತೆ ಎಂಟು ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಗ್ರಾಮಗಳನ್ನು ಹೊಸ ಅರಕೇರಾ ತಾಲೂಕಿಗೆ ಸೇರಿಸಿರುವುದು ಸ್ಥಳೀಯರಿಗೆ ತೊಂದರೆಯಾಗಿದೆ. ಈ ಗ್ರಾಮಗಳಿಂದ ಅರಕೇರಾ–ಕ್ಕೆ ತೆರಳಬೇಕಾದರೆ ಸುಮಾರು 45□50 ಕಿಲೋಮೀಟರ್ ದೂರ ಪ್ರಯಾಣಿಸಬೇಕಾಗಿದ್ದು, ದೇವದುರ್ಗ ಕೇವಲ 20□25 ಕಿಲೋಮೀಟರ್ ಅಂತರದಲ್ಲಿದೆ. ಸಾರಿಗೆ ವ್ಯವಸ್ಥೆಯ ಕೊರತೆಯಿಂದ ರೈತರು, ವಿದ್ಯಾರ್ಥಿಗಳು, ಮಹಿಳೆಯರು ಮತ್ತು ವೃದ್ಧರು ಸರ್ಕಾರಿ ಕಚೇರಿಗಳ ಕೆಲಸಕ್ಕಾಗಿ ಕಷ್ಟ ಅನುಭವಿಸುತ್ತಿದ್ದಾರೆ.

ಸಮಿತಿಯು 2019ರಿಂದ 2021ರ ಅವಧಿಯಲ್ಲಿ ನಡೆದ ತಾಲೂಕು ರಚನೆ ಪ್ರಕ್ರಿಯೆಯಲ್ಲಿ ಸಾರ್ವಜನಿಕರಿಂದ ಬಂದ 300ಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಪರಿಗಣಿಸದೆ, ಸುಳ್ಳು ಭೌಗೋಳಿಕ ಅಂತರ, ನಕಲಿ ಸಹಿಗಳು ಹಾಗೂ ತಪ್ಪು ಜನಸಂಖ್ಯಾ ಮಾಹಿತಿ ಆಧರಿಸಿ ತಹಸೀಲ್ದಾರರು ಮತ್ತು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ತಪ್ಪು ವರದಿ ನೀಡಿದರೆಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

"ನೂತನ ಅರಕೇರಾ ತಾಲೂಕು ರಚನೆ ಸಂಪೂರ್ಣ ಅವೈಜ್ಞಾನಿಕವಾಗಿದೆ. ಸಾರ್ವಜನಿಕ ಅನುಕೂಲ, ಸಾರಿಗೆ ಸಂಪರ್ಕ ಮತ್ತು ಭೌಗೋಳಿಕ ವಾಸ್ತವಿಕತೆಗಳನ್ನು ಪರಿಗಣಿಸದೆ ನಡೆದಿರುವ ಈ ರಚನೆಯನ್ನು ತಕ್ಷಣ ಪುನರ್‌ಪರಿಶೀಲಿಸಿ, ಮೇಲ್ಕಂಡ ಗ್ರಾಮಗಳನ್ನು ದೇವದುರ್ಗ ತಾಲೂಕಿನಲ್ಲೇ ಉಳಿಸುವ ಕ್ರಮ ಕೈಗೊಳ್ಳಬೇಕು" ಎಂದು ಸಮಿತಿ ಮನವಿ ಪತ್ರದಲ್ಲಿ ಒತ್ತಾಯಿಸಿದೆ.

ಮನವಿ ಪತ್ರವನ್ನು ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಅವರಿಗೆ ಸ್ವಯಂ ಹಸ್ತಾಂತರಿಸಲಾಯಿತು. ವಿಷಯದ ಬಗ್ಗೆ ಸ್ಥಳೀಯ ಮಟ್ಟದಲ್ಲಿ ತನಿಖೆ ನಡೆಸಿ ನ್ಯಾಯೋಚಿತ ನಿರ್ಧಾರ ಕೈಗೊಳ್ಳುವಂತೆ ಸಮಿತಿಯು ಸರ್ಕಾರವನ್ನು ವಿನಂತಿಸಿದೆ.

# ಸಮೃದ್ಧ ಕರ್ನಾಟಕ ಕಟ್ಟಲು ರಾಜ್ಯ ಸರ್ಕಾರ ಬದ್ಧ: ಡಾ.ಶರಣಪ್ರಕಾಶ ಪಾಟೀಲ

ರಾಯಚೂರು: ಸಾಮರಸ್ಯವೇ ನಮ್ಮ ಕನ್ನಡ ನಾಡಿನ ಸಂಸ್ಕೃತಿಯ ಜೀವಾಳವಾಗಿದೆ. ಅದರಂತೆ ಸಮೃದ್ಧ ಕರ್ನಾಟಕವನ್ನು ಕಟ್ಟುವುದರಲ್ಲಿ ನಮ್ಮ ಸರ್ಕಾರವು ಬದ್ಧವಾಗಿದೆ ಎಂದು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಹೇಳಿದರು.

ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದಿಂದ ನವೆಂಬರ್ 1ರಂದು ನಡೆದ ಕನ್ನಡ ರಾಜ್ಯೋತ್ಸವದ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ನಾಡು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದೆ. ಅದರಂತೆ ನಾಡಿನ ಉಜ್ವಲ ಮತ್ತು ಭವ್ಯ ಸಾಂಸ್ಕೃತಿಕ ಪರಂಪರೆ

ಕನ್ನಡನಾಡುನುಡಿಯ ಸಂರಕ್ಷಣೆಯ ಮಹತ್ತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕರ್ನಾಟಕವು ಸರ್ವಧರ್ಮ ರಕ್ಷಣೆ, ಸತ್ಯಾರಾಧನೆ, ಧರ್ಮನೀತಿ, ಸರ್ವಧರ್ಮ ಸಹಿಷ್ಣುತೆ, ಧಾರ್ಮಿಕ 'ಸಮನ್ವಯ, ಸಹಬಾಳ್ವೆ, ಸೌಹಾರ್ದತೆ ಮತ್ತು ಭಾವೈಕ್ಯತೆಯ ದಿವ್ಯಸ್ವರ್ಗವಾಗಿದೆ. ವಿಶ್ವ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದ ಕೊಡುಗೆ ಅಪಾರವಾಗಿದೆ. ಕನ್ನಡಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಸಂದಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದರು.

ನಮ್ಮ ರಾಜ್ಯವು ಬ್ರಿಟೀಷರ ಅಧಿಕಾರಾವಧಿಯಲ್ಲಿ ಹರಿದು ಹಂಚಿಹೋಗಿತ್ತು. ಬಳಿಕ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟಗಳು ನಡೆದವು. ಕನ್ನಡ ಏಕೀಕರಣಕ್ಕಾಗಿ ಅನೇಕ ಮಹನಿಯರು ಶ್ರಮಿಸಿದರು. ಬಳಿಕ 1956ರ ನವೆಂಬರ್ 1ರಂದು ಕನ್ನಡ ಭಾಷೆಯನ್ನಾಡುವ ವಿಶಾಲ ಮೈಸೂರು ರಾಜ್ಯ ಉದಯವಾಯಿತು. 1973ರ ನವೆಂಬರ್ 1 ರಂದು ಅಂದಿನ ಮುಖ್ಯಮಂತ್ರಿಗಳಾದ ಡಿ. ದೇವರಾಜ ಅರಸು ಅವರು ಮೈಸೂರು ರಾಜ್ಯವನ್ನು "ಕರ್ನಾಟಕ" ರಾಜ್ಯ ಎಂದು ನಾಮಕರಣ ಮಾಡಿದರು ಎಂದರು.

ನಮ್ಮ ಸರ್ಕಾರವು ರಾಜ್ಯದ ಅಭಿವೃದ್ಧಿಗೆ ಬದ್ಧವಾಗಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪ್ರತಿ ವರ್ಷ ಸಾವಿರಾರು ಕೋಟಿ ರೂ.ಗಳನ್ನು ಮೀಸಲಿರಿಸಿ ರಾಯಚೂರು ಸೇರಿದಂತೆ ಈ ಭಾಗದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇವೆ. ರಾಯಚೂರು ಜಿಲ್ಲೆಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಸಾಗಿವೆ. ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮತ್ತು ಹೆದ್ದಾರಿ ನಿರ್ಮಾಣ ಕಾರ್ಯಗಳು ಚುರುಕಾಗಿ ನಡೆದಿದೆ ಎಂದರು.

ರಾಯಚೂರಲ್ಲಿ ಏಮ್ಸ್ ಸ್ಥಾಪನೆಯಾಗಬೇಕು ಎಂಬುದು ನಮ್ಮ ಭಾಗದ ಜನರ ಬಹುದೊಡ್ಡ ನಿರೀಕ್ಷೆಯಾಗಿದೆ. ಇದು ಕೇಂದ್ರ ಸರ್ಕಾರದ ನಿರ್ಣಯವಾಗಿದೆ. ಏಮ್ಸ್ ಸ್ಥಾಪನೆಗಾಗಿ ರಾಜ್ಯ ಸರ್ಕಾರದಿಂದ ಸಾಕಷ್ಟು ಒತ್ತಡ ಹಾಕುತಿದ್ದೇವೆ.

ಅನೇಕ ಬಾರಿ ಪತ್ರಗಳನ್ನು ಬರೆದಿದ್ದೇವೆ. ಅನೇಕ ನಿಯೋಗಗಳನ್ನ ತೆಗೆದುಕೊಂಡು ಹೋಗಿದ್ದೇವೆ. ಕೇಂದ್ರ ಸರ್ಕಾರವು ಇದಕ್ಕೆ ಸ್ಪಂದಿಸುತ್ತದೆ ಎಂಬ ಆಶಾಭಾವನೆಯೊಂದಿಗೆ ತಾವು ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಇಡೀ ಕರ್ನಾಟಕ ಜನರ ಪರವಾಗಿ ಒತ್ತಾಯ ಮಾಡುವುದಾಗಿ ಸಚಿವರು ತಿಳಿಸಿದರು.

ನಾವು ರೈತರ ಬೇಡಿಕೆಗೆ ಸ್ಪಂದನೆ ನೀಡುತ್ತಿದ್ದೇವೆ. ಜಿಲ್ಲೆಯ ಹತ್ತಿ ಬೆಳೆಗಾರರಿಗೆ ಸ್ಪಂದನೆ ನೀಡಿದ್ದೇವೆ. ರಾಯಚೂರು ಜಿಲ್ಲೆಯಲ್ಲಿ ಹತ್ತಿ ಬೆಳೆಯ ಸಮೀಕ್ಷೆ ಚಾಲ್ತಿಯಲ್ಲಿದೆ. ಹಾನಿ



ಅನುಭವಿಸಿದ ಹತ್ತಿ ಬೆಳೆಗಾರರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಹತ್ತಿ ಖರೀದಿ ಪ್ರಕ್ರಿಯೆ ಜಿಲ್ಲೆಯಲ್ಲಿ ಆರಂಭವಾಗಿದೆ. ಎಫ್.ಎ.ಕ್ಯೂ ಗುಣಮಟ್ಟದ ಹತ್ತಿಯ ಬೆಂಬಲ ಬೆಲೆಯು ಮಧ್ಯಮ ಎಳೆಗೆ ಪ್ರತಿ ಕ್ವಿಂಟಲ್‌ಗೆ 7,710 ರೂ ಮತ್ತು ಉದ್ದನೆಯ ಎಳೆಗೆ ಪ್ರತಿ ಕ್ವಿಂಟಲ್ ಗೆ 8,110 ರೂ ನಿಗದಿಪಡಿಸಲಾಗಿದೆ. ಈಗಾಗಲೇ ನೋಂದಣಿ ಪ್ರಾರಂಭವಾಗಿದ್ದು, ಹತ್ತಿ ಬೆಳೆಯುವ ರೈತರು ಈ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಪ್ರಯೋಜನೆ ಪಡೆಯಬೇಕು ಎಂದು ಸಚಿವರು ಮನವಿ ಮಾಡಿದರು.

ನಮ್ಮ ರಾಜ್ಯ ಸರ್ಕಾರವು ಮಾತಿನಂತೆ ಐದು ಗ್ಯಾರಂಟಿಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ಸು ಆಗಿದ್ದು, ಈ ಬಗ್ಗೆ ನಮಗೆ ವಿಶೇಷವಾದ ಹೆಮ್ಮೆಯಿದೆ ಎಂದರು. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಅತ್ಯುತ್ತಮವಾದ ಆಡಳಿತ ನೀಡಿ ಜನತೆಗೆ ಸ್ಪಂದನೆ ನೀಡುತ್ತಿದ್ದಾರೆ. ಜನರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದ್ದಾರೆ ಎಂದರು.

ನಮ್ಮ ರಾಜ್ಯಕ್ಕೆ 'ಕರ್ನಾಟಕ' ಎಂದು ಮರು ನಾಮಕರಣವಾಗಿ 2023ಕ್ಕೆ 50 ವರ್ಷ ಪೂರ್ಣಗೊಂಡಾಗ ರಾಜ್ಯ ಸರ್ಕಾರವು "ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ" ಎಂಬ ಹೆಸರಿನಲ್ಲಿ ಇಡೀ ವರ್ಷ ಕರ್ನಾಟಕದ ಇತಿಹಾಸ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ನಾಡು–ನುಡಿಗೆ ಸಂಬಂಧಿಸಿದಂತೆ ಮತ್ತು ಯುವಜನತೆಯಲ್ಲಿ ಕನ್ನಡ, ಕನ್ನಡಿಗ–ಕರ್ನಾಟಕದ ಅರಿವು ಮೂಡಿಸುವ ಯೋಜನೆ ಹಮ್ಮಿಕೊಂಡು ಯಶಗೊಳಿಸಿದ ಸಾಧನೆ ನಮ್ಮದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ಪರಿಶಿಷ್ಟಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ್‌ಸಿಂಗ್, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ.ಎಂ., ರಾಯಚೂರು ಮಹಾನಗರ ಪಾಲಿಕೆಯ

ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತರಾದ ಗಜಾನನ ಬಾಳೆ, ರಾಯಚೂರು ತಹಸೀಲ್ದಾರ ಸುರೇಶ್ ವರ್ಮ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಕನ್ನಡಪರ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಇದ್ದರು.

# ಸುದೀರ್ಘ ಸೇವೆ ಸಲ್ಲಿಸಿ ಸೇವಾ ನಿವೃತ್ತಿ ಹೊಂದಿದ ಶಿಕ್ಷಕಿ ಸಂಧ್ಯಾ ಕುಲ್ಕರ್ಣಿ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಶಿಕ್ಷಕ ವೃತ್ತಿ ಪವಿತ್ರವಾದದ್ದು, ಶಿಕ್ಷಕಿ ಸಂಧ್ಯಾ ಅವರು ತಮ್ಮ ಸುದೀರ್ಘ ಸೇವೆಯಲ್ಲಿ ಯಾವುದೇ ಕಪ್ಪು ಚುಕ್ಕೆಯಿಲ್ಲದೆ, ತಮ್ಮ ಮುಖ್ಯಗುರುಗಳು, ಸಹಪಾಠಿಗಳು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳ ಜೊತೆ ಒಳ್ಳೆಯ ಒಡನಾಟ ಹೊಂದಿ ಶಿಕ್ಷಣ ಇಲಾಖೆಗೆ ಕೀರ್ತಿ ತರುವಂತಹ ಶಿಕ್ಷಕಿಯಾಗಿದ್ದಾರೆ ಎಂದು ಆಂಗ್ಲ ಭಾಷಾ ಶಿಕ್ಷಕ ರೇವಣಸಿದ್ದೇಶ್ವರ ಆಲ್ದಾಳ ತಿಳಿಸಿದರು.

ನಗರದ ಸರಕಾರಿ ಮಾದರಿ ಪ್ರಾಥಮಿಕ ಶಾಲೆ ಹಳಿಸಗರದಲ್ಲಿ 36 ವರ್ಷ ಸುಧೀರ್ಘ ಸೇವೆ ಸಲ್ಲಿಸಿದ ವಯೋನಿವೃತ್ತಿ ಹೊಂದಿದ ಶಿಕ್ಷಕಿ ಸಂಧ್ಯಾ ಕುಲ್ಕರ್ಣಿ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅವರ ವಯೋನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಶುಭಹಾರೈಸಿದರು.

ಶಿಕ್ಷಕಿ ವಿದ್ಯಾವತಿ ಮಾತನಾಡಿ, ಸಂಧ್ಯಾ ಶಿಕ್ಷಕಿ ಅವರು ಸದಾ ಮಕ್ಕಳ ಜೊತೆ ಮಕ್ಕಳಾಗಿ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕಿಯಾಗಿದ್ದರು, ಅವರ ಸೇವೆ ಮಾದರಿ ಎಂದರು.

ನಿವೃತ್ತಿ ಹೊಂದಿದ ಸಂಧ್ಯಾ ಕುಲ್ಕರ್ಣಿ ಮಾತನಾಡಿ, ನನ್ನ ತಾಯಿಯಿಂದ ಶಿಕ್ಷಣವನ್ನು ಕಲಿತು ಮುಂದೆ ಶಿಕ್ಷಕಿಯಾಗಿ ನಾನು ಉತ್ತಮ ರೀತಿಯಲ್ಲಿ ಬೋದನೆಗೆ ಮಕ್ಕಳ ಕಲಿಕೆಗೆ ಹೆಚ್ಚು ಒತ್ತು ಕೊಟ್ಟ ನೆನಪು. ನನ್ನ ಜೀವನದಲ್ಲಿ ಈ ಶಿಕ್ಷಕಿ ವೃತ್ತಿಯನ್ನು ಎಂದು ಮರೆಯಲಾಗುವದಿಲ್ಲ ತಮ್ಮ ಅನುಭವ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ಶಾಲೆಯ ಎಲ್ಲಾ ಶಿಕ್ಷಕ ಬಳಗ ಸಂಧ್ಯಾ ಹಾಗೂ ಅವರ ಪತಿ ಗುರುರಾಜ ಕುಲ್ಕರ್ಣಿ ದಂಪತಿಗಳಿಗೆ ಸನ್ಮಾನಿಸಿ ಗೌರವಿಸಿದರು. ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರಿಗೆ ನೆನಪಿನ ಕಾಣಿಕೆ ನೀಡಿದರು. ಸಮಾರಂಭದಲ್ಲಿ ಮುಖ್ಯಗುರು ರಾಜಣ್ಣ, ಎಸ್.ಡಿ.ಎಮ್.ಸಿ.ಅಧ್ಯಕ್ಷ ಯಲ್ಲಾಲಿಂಗ ಯಕ್ಷಿಂತಿ, ಗುರುರಾಜ ಕುಲಕರ್ಣಿ, ಸಂವೇದ ಕುಲಕರ್ಣಿ, ಶಿಕ್ಷಕರಾದ ಶಾಂತಾಬಾಯಿ, ಅಮೃತಾ, ರೇವಣಸಿದ್ದೇಶ್ವರ, ಪಾರ್ವತಿ, ಅನ್ನಪೂರ್ಣ ವೇದಿಕೆವಹಿಸಿದ್ದರು. ಕಿರುಪರಿಚಯವನ್ನು ಶಿಕ್ಷಕಿ ಶ್ರೀದೇವಿ ಪ್ರಸ್ತುತಪಡಿಸಿದರು. ರೇಣುಕಾ ಸ್ವಾಗತಿಸಿದರು, ಚಂದ್ರಕಲಾ ನಿರೂಪಿಸಿದರು, ದೇವಮ್ಮ ವಂದಿಸಿದರು.

# ಬಳ್ಳಾರಿಯಲ್ಲಿ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ

# ಕನ್ನಡ ಭಾಷೆ ಉಳಿಸಿ, ಬೆಳೆಸುವ ಕಾರ್ಯ ಎಲ್ಲರದ್ದು: ಸಚಿವ ರಹೀಂ ಖಾನ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಪ್ರತಿಯೊಂದು ಹೆಜ್ಜೆಯಲ್ಲಿ ಕನ್ನಡದ ಅಸ್ತಿತ್ವ ಪ್ರತಿಫಲಿಸಲು ಮುಂದಿನ ದಿನಗಳಲ್ಲಿ ಕನ್ನಡ ಭಾಷೆ ಉಳಿಸಿ ಬೆಳೆಸುವ ಕಾರ್ಯವಾಗಬೇಕಿದೆ. ಇದು ಕೇವಲ ಸರ್ಕಾರದ್ದಲ್ಲ, ಬದಲಾಗಿ ಎಲ್ಲಾ ಸಾರ್ವಜನಿಕರು, ಸಂಘ-ಸಂಸ್ಥೆಗಳು ಭಾಗವಹಿಸುವಿಕೆಯ ಅಗತ್ಯವಿದೆ ಎಂದು ಪೌರಾಡಳಿತ ಹಾಗೂ ಹಜ್ ಸಚಿವ ರಹೀಂ ಖಾನ್ ಅವರು ಹೇಳಿದರು.

ಶನಿವಾರ ಜಿಲ್ಲಾಡಳಿತ ವತಿಯಿಂದ ನಗರದ ಸರ್ಕಾರಿ (ಮಾಜಿ ಪುರಸಭೆ) ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ 70ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಧ್ವಜಾರೋಹಣಾ ನೆರವೇರಿಸಿ, ಶ್ರೀ ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಬಳಿಕ ರಾಜ್ಯೋತ್ಸವದ ಸಂದೇಶ ನೀಡಿ ಅವರು ಮಾತನಾಡಿದರು.

ಕೇವಲ ಇಂಗ್ಲೀಷ್ ಓದಿದರೆ ಕೆಲಸ ಸಿಗುವುದಿಲ್ಲ. ಚೀನಾ, ಜಪಾನ್ ನಂತಹ ದೇಶಗಳು ಅಭಿವೃದ್ಧಿ ಹೊಂದಿರುವುದು ತಮ್ಮ-ತಮ್ಮ ಮಾತೃ ಭಾಷೆಯಲ್ಲಿಯೇ. ಹಾಗಾಗಿ ನಮ್ಮ ಕನ್ನಡ ಭಾಷೆ, ನಮ್ಮತನ ಬೆಳೆಸೋಣ ಎಂದು ಕಿವಿಮಾತು ಹೇಳಿದರು. ಕನ್ನಡ ನಮ್ಮ ಉಸಿರು, ಕನ್ನಡಾಂಬೆ ತಾಯಿ ಸ್ಥಾನ ತುಂಬಿದವಳು. ಕನ್ನಡ ಭಾಷೆಗೆ ತನ್ನದೇ ಆದ ಅಸ್ಮಿತೆ ಒಳಗೊಂಡಿದ್ದು, 2,500 ವರ್ಷಗಳ ಇತಿಹಾಸ ಹೊಂದಿದೆ. ವಿಶ್ವಗುರು ಬಸವಣ್ಣ ಸೇರಿದಂತೆ ಅನೇಕ ವಚನಕಾರರು, ಸಂತರು ತಮ್ಮ ವಚನಗಳನ್ನು ಕನ್ನಡದಲ್ಲಿಯೇ ರಚಿಸಿದ್ದಾರೆ. ಪರ ರಾಜ್ಯಗಳಿಗೆ ಹೋಲಿಸಿದರೆ ಕನ್ನಡ ಭಾಷೆಯು ಯಾವುದೇ ಜಾತಿ, ಧರ್ಮ, ಭೇದ-ಭಾವವಿಲ್ಲದೇ ಯಾರಿಗೂ ಅಡಚಣೆಯಾಗದೇ ಸುಲಲಿತವಾಗಿ ಬಾಳ್ವೆ ನಡೆಸಲು ಅನುವು ಮಾಡಿದೆ ಎಂದರು.

ಸ್ವಾತಂತ್ರ್ಯ ಪೂರ್ವದಿಂದಲೂ ಚಾಲ್ತಿಯಲ್ಲಿದ್ದ ಕರ್ನಾಟಕ ಏಕೀಕರಣ ಚಳುವಳಿಯ ಫಲವಾಗಿ, ರಾಜ್ಯಗಳ ಮರುಸಂಘಟನೆ ಕಾಯ್ದೆಯಡಿ 1956ರ ನವೆಂಬರ್ 1ರಂದು ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂತು. ಬಳಿಕ ಮುಂಬೈ, ಮದ್ರಾಸ್, ಹೈದರಾಬಾದ್ ಪ್ರಾಂತ್ಯಗಳಲ್ಲಿ ಹರಡಿದ್ದ ಕನ್ನಡ ಮಾತನಾಡುವ ಪ್ರದೇಶಗಳನ್ನು ಒಂದುಗೂಡಿಸಲಾಯಿತು. ಬಳಿಕ 1973ರ ನವೆಂಬರ್ 1ರಂದು ಅಂದಿನ ಸಿಎಂ ದೇವರಾಜ ಅರಸು ಅವರ ಅವಧಿಯಲ್ಲಿ ಮೈಸೂರು ರಾಜ್ಯವನ್ನು ಅಧಿಕೃತವಾಗಿ 'ಕರ್ನಾಟಕ' ಎಂದು ಮರುನಾಮಕರಣ ಮಾಡಲಾಯಿತು ಎಂದು ತಿಳಿಸಿದರು.

ನವೆಂಬರ್ 1ರಂದು ಆಚರಿಸಲಾಗುವ ಕನ್ನಡ ರಾಜ್ಯೋತ್ಸವು ಕರ್ನಾಟಕದ ಸಂಸ್ಥಾಪನಾ ದಿನವಾಗಿದೆ. 1956 ರ ನವೆಂಬರ್ 1 ರಂದು ಮೈಸೂರು ರಾಜ್ಯವನ್ನು (ಈಗಿನ ಕರ್ನಾಟಕ) ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳನ್ನು ಒಗ್ಗೂಡಿಸಿ ರಚಿಸಲಾಯಿತು ಎಂದು ತಿಳಿಸಿದ ಸಚಿವರು, ಕರ್ನಾಟಕದ ಏಕೀಕರಣದ ಸ್ಮರಣೆ, ಕನ್ನಡ ಭಾಷೆ, ಸಂಸ್ಕೃತಿ ಹಾಗೂ ನಾಡಿನ ಸಾಧಕರನ್ನು, ಹೋರಾಟಗಾರರನ್ನು ಗೌರವಿಸುವ ಕೆಲಸವಾಗಬೇಕು ಎಂದು ಹೇಳಿದರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅನೇಕ ಮಹನೀಯರ ಕೊಡುಗೆ ಅಪಾರವಾಗಿದೆ. ಅಂದಿನ ಸಮಯದಲ್ಲಿ ಬಳ್ಳಾರಿಯನ್ನು ಕನ್ನಡ ನಾಡಿನಲ್ಲಿ ಉಳಿಸಿಕೊಳ್ಳಲು ಹೋರಾಡಿದ ಮಹನೀಯರು, ಸಾವಿರಾರು ಕನ್ನಡ ಪ್ರೇಮಿಗಳು, ಕನ್ನಡ ಪರ ಹೋರಾಟಗಾರರ ಪೈಕಿ ರಂಜಾನ್ ಸಾಬ್ ಅವರ ಸಾಧನೆ ಅನನ್ಯ ಎಂದು ಪ್ರತಿಪಾದಿಸಿದರು.

ಬಳ್ಳಾರಿ ಜಿಲ್ಲೆಯು ವೈವಿಧ್ಯತೆಯಿಂದ ಕೂಡಿದೆ. ಕನ್ನಡ, ತೆಲುಗು, ಉರ್ದು ಭಾಷೆ ಒಳಗೊಂಡಿದ್ದು, ಎಲ್ಲಾ ಸಂಸ್ಕೃತಿಗಳ ಸಮ್ಮಿಲನ ಈ ಜಿಲ್ಲೆಯು ಒಳಗೊಂಡಿದೆ ಎಂದು ಬಣ್ಣಿಸಿದರು.

**ತೆರಿಗೆ ಪಾವತಿಯಲ್ಲಿ 2ನೇ ಸ್ಥಾನ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಕನ್ನಡ ಭಾಷೆ ಬಳಕೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಅದರಂತೆ ನಮ್ಮ ರಾಜ್ಯವು ತೆರಿಗೆ ಪಾವತಿಯಲ್ಲಿ ದೇಶದಲ್ಲಿಯೇ 2ನೇ ಸ್ಥಾನದಲ್ಲಿದೆ. ಪ್ರತಿವರ್ಷ ಸುಮಾರು 4 ಲಕ್ಷ ಕೋಟಿ ರೂ. ತೆರಿಗೆ ನಮ್ಮ ರಾಜ್ಯದಿಂದಲೇ ಸಂದಾಯವಾಗುತ್ತಿದೆ ಎಂದು ಹೇಳಿದರು. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರವು ಅನೇಕ ಜನಪರ ಯೋಜನೆಗಳನ್ನೇ ಜಾರಿಗೆ ತಂದಿದ್ದಾರೆ. .ರಾಜ್ಯದಲ್ಲಿ ಸುಮಾರು ವರ್ಷಗಳಿಂದ ಯಾವುದೇ ದಾಖಲೆಗಳಿಲ್ಲದೇ ಇರುವ ಮನೆಗಳಲ್ಲಿ ವಾಸಿಸುತ್ತಿರುವ ಜನ ಸಾಮಾನ್ಯರ ಸ್ಥಿತಿ ಮನಗಂಡು ಸಿದ್ದರಾಮಯ್ಯ ಅವರು ಎ-ಖಾತಾ, ಬಿ-ಖಾತಾ ವಿತರಣೆ ಕಾರ್ಯಕ್ರಮ ರೂಪಿಸಿದ್ದರು. ಈಗಾಗಲೇ ರಾಜ್ಯದಲ್ಲಿ ಶೇ.70 ರಷ್ಟು ಖಾತಾ ವಿತರಿಸಲಾಗಿದೆ ಎಂದರು.

ಸ್ತಬ್ಧಚಿತ್ರಗಳ ಅದ್ದೂರಿ ಮೆರವಣಿಗೆ

70ನೇ ಕರ್ನಾಟಕ ರಾಜ್ಯೋತ್ಸವ ಹಾಗೂ ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಜಿಲ್ಲಾಡಳಿತ ವತಿಯಿಂದ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಸ್ತಬ್ಧಚಿತ್ರಗಳ ಅದ್ದೂರಿ ಮೆರವಣಿಗೆ ನಡೆಯಿತು. ಮೆರವಣಿಗೆಗೆ ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ಚಾಲನೆ ನೀಡಿದರು.

ಡೆಂಗ್ಯೂ ಹಾಗೂ ಇತರೆ ರೋಗಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸ್ತಬ್ಧಚಿತ್ರ ಸೇರಿದಂತೆ ಶಿಕ್ಷಣ ಇಲಾಖೆ, ಕೃಷಿ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ಸ್ತಬ್ಧಚಿತ್ರಗಳು ಗಮನ ಸೆಳೆದವು. ವಿವಿಧ ಕನ್ನಡ ಪರ ಸಂಘಟನೆಗಳಿಂದ ಕನ್ನಡ ತಾಯಿ ಭುವನೇಶ್ವರಿ ದೇವಿ ಅವರ ಭಾವಚಿತ್ರ ಹಾಗೂ ಕರ್ನಾಟಕ ಏಕೀಕರಣದ ರೂವಾರಿ ಬಳ್ಳಾರಿಯ ಹೋರಾಟಗಾರ ಪಿಂಜಾರ ರಂಜಾನ್ ಸಾಬ್ ಅವರ ಭಾವಚಿತ್ರ ವಾಹನ ಕಾರ್ಯಕ್ರಮದ ವಿಶೇಷವಾಗಿತ್ತು.

**ಸಾಧಕರ ಸನ್ಮಾನ**

ಕನ್ನಡ ನಾಡು-ನುಡಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಜಿಲ್ಲಾ ಸನ್ಮಾನಿಸಿ ಗೌರವಿಸಲಾಯಿತು.

ಬುರ್ರಕಥಾ- ಜಂಬಕ್ಕ ಎಂಡಿ ಕ್ಯಾಂಪ್(ಕಂಪ್ಲಿ), ಬಯಲಾಟ- ಚೆನ್ನದಾಸರ ಮಾರೆಪ್ಪ(ಮೆಟ್ರಿ), ಹಗಲುವೇಷ-ಕೆ.ಶಂಕ್ರಪ್ಪ(ಶ್ರೀಧರಗಡ್ಡೆ), ಕನ್ನಡ ಸೇವೆ- ಹೇಮಂತ್ ರಾಜ್ ಸಂಗನಕಲ್ಲು, ಶಿಕ್ಷಣಕ್ಷೇತ್ರ-ಸಿ.ಎಂ.ಶಿಗ್ಗಾವಿ ಸಂಡೂರು ಮತ್ತು ಪುರುಷೋತ್ತಮ ಬಿ.ಬಳ್ಳಾರಿ, ವೈದ್ಯಕೀಯ ಕ್ಷೇತ್ರ- ಡಾ.ಮಧುಸೂಧನ್ ಕಾರಿಗನೂರು (ಸಿರುಗುಪ್ಪ), ಸಾಹಿತ್ಯಕ್ಷೇತ್ರ- ಬಂಗಿ ದೊಡ್ಡ ಮಂಜುನಾಥ (ಕಂಪ್ಲಿ), ಚಿತ್ರಕಲೆ ಕ್ಷೇತ್ರ- ಮಹ್ಮದ್ ರಫಿ ಬಳ್ಳಾರಿ, ಸಾಹಿತ್ಯ/ಸಂಘಟನೆ ಕ್ಷೇತ್ರ- ದಮ್ಮೂರು ಮಲ್ಲಿಕಾರ್ಜುನ(ಸಿರುಗುಪ್ಪ) ಪತ್ರಿಕೋದ್ಯಮ- ಕೆ.ಎನ್.ಗಂಗಾಧರ ಗೌಡ. ಈ ಸಂದರ್ಭದಲ್ಲಿ ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕರಾದ ವರ್ತಿಕಾ ಕಟಿಯಾರ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಬಳ್ಳಾರಿ ವಲಯ ಉಪಅರಣ್ಯ ಸಂರಕ್ಷಣಾಧಿಕಾರಿ ಡಾ.ಕೆ.ಎನ್.ಬಸವರಾಜ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್. ಝುಬೇರ್, ಡಿಎಂಎಫ್ ವಿಶೇಷಾಧಿಕಾರಿ ಲೋಕೇಶ್, ಸಹಾಯಕ ಆಯುಕ್ತ ಪಿ.ಪ್ರಮೋದ್, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳು ಅಧಿಕಾರಿಗಳು, ಮಹಾನಗರ ಪಾಲಿಕೆ ಸದಸ್ಯರು, ವಿವಿಧ ಕನ್ನಡಪರ ಸಂಘಟನೆಗಳು, ಹೋರಾಟಗಾರರು, ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಭ್ರಷ್ಟಾಚಾರ ನಿರ್ಮೂಲನೆಗೆ ಸಮೂಹ ಪಾಲ್ಗೊಳ್ಳುವಿಕೆ ಅಗತ್ಯ-ರಾಜೇಶ್ ಸಂಗಣ್ಣ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ರಾಷ್ಟ್ರದಲ್ಲಿ ವಿಚಕ್ಷಣೆಯನ್ನು ಬಲಪಡಿಸಲು ಹಾಗೂ ಹಾಗೂ ಭ್ರಷ್ಟಾಚಾರ ನಿರ್ಮೂಲನೆಗೆ ಸಮೂಹದ ಪಾಲ್ಗೊಳ್ಳುವಿಕೆ ಅಗತ್ಯವಾಗಿದೆ ಎಂದು ಹೇಳಿದರು.

ತಾಲೂಕಿನ ಗುಳದಳ್ಳಿ ಗ್ರಾಮದಲ್ಲಿರುವ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಮುನಿರಾಬಾದ್ ಉಪ ಕೇಂದ್ರ ದ ವತಿಯಿಂದ ವಿಜಕ್ಷಣ ಜಾಗೃತಿ ಸಪ್ತಹ 2025 ಅನ್ನು ಆಚರಿಸಲಾಯಿತು. ಈ ವೇಳೆ ಪವರ್ ಗ್ರೀಡ್ ಮುಖ್ಯ ವ್ಯವಸ್ಥಾಪಕ ರಾಜೇಶ್ ಸಂಗಣ್ಣ ಮಾತನಾಡುತ್ತಾ ಈ ಆಚರಣೆ-ಯ ಉದ್ದೇಶ ವೃತ್ತಿಜೀವನ ಮತ್ತು ವಯಕ್ತಿಕ ಜೀವನದಲ್ಲಿ ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಜವಾಬ್ದಾರಿತನದ ಮಹತ್ವದ ಜಾಗೃತಿ ಮೂಡಿಸುವುದಾಗಿದ್ದು. ಎಲ್ಲರೂ ಉನ್ನತ ನೈತಿಕ ಮೌಲ್ಯಗಳನ್ನು ಪಾಲಿಸಿ ದೇಶದ ಪಾರದರ್ಶಕ ಮತ್ತು ಪ್ರಾಮಾಣಿಕತೆಯ ದೃಷ್ಟಿಕೋನಕ್ಕೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ಆಚರಣೆಯ ಭಾಗವಾಗಿ ತಾಲೂಕಿನ ಗಿಳಿಗೆರೆ ಗ್ರಾಮದ ಪ್ರಮುಖ ರಸ್ತೆ ಹಾಗೂ ರೈಲ್ವೆ ಸ್ಟೇಷನ್ ಗಳಲ್ಲಿ ಕಾಲ್ನಡಿಗೆ ಜಾತ ಆಯೋಜಿಸಿ ಸಿಬ್ಬಂದಿ ಮತ್ತು ನೌಕರರು ಪ್ರಾಮಾಣಿಕತೆ, ನಿಷ್ಠೆ ಮತ್ತು ಪಾದ ದರ್ಶಕತೆ ಕುರಿತು ಸಂದೇಶಗಳಿರುವ ಫಲಕಗಳನ್ನು ಹಿಡಿದು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಆಯೋಜಿಸಲಾಯಿತು. ಪವರ್ ಗ್ರಿಡ್ ಸಿಬ್ಬಂದಿಗಳ ಕಾರ್ಯ-ಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆಯೊಂದಿಗೆ ನೈತಿಕ ನಡವಳಿಕೆಯತ್ತ ಸಾಮೂಹಿಕ ಹೊಣೆಗಾರಿಕೆಯ ಭಾವನೆ ಉಂಟಾಯಿತು.

ಕಾರ್ಯಕ್ರಮದಲ್ಲಿ ಸೀನಿಯರ್ ಡೆಪ್ಯೂಟಿ ಜನರಲ್ ಮ್ಯಾನೇಜರ್ ಗುತ್ತಿ ಶ್ರೀನಿವಾಸ ರಾವ್, ಅಲೋಕ್ ಕುಮಾರ್ ಮಾಲಿ, ಪ್ರದೀಪ್ ಎಂ ಎಚ್, ಸಿ ಗಿರೀಶ್, ತನುಜ ಹಾಗೂ ಅಧಿಕಾರಿಗಳು, ನೌಕರರು, ವಾಹನ ಚಾಲಕರು ಮತ್ತು ಗುತ್ತಿಗೆ ಕಾರ್ಮಿಕರು ಪಾಲ್ಗೊಂಡಿದ್ದರು.

# ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ನ: ಸಿರುಗುಪ್ಪ ನಗರಸಭೆ ಕಾರ್ಯಾಲಯದಿಂದ ಪ್ರಸ್ತಕ ಸಾಲಿಗೆ ನಗರಸಭೆಯ ನಿಧಿಯಡಿ ಶೇ.24.10 ರ (ಎಸ್‌ಸಿಎಸ್‌ಪಿ/ಟಿಎಸ್‌ಪಿ), ಶೇ.7.25 ಮತ್ತು ಶೇ.5 ರ ಅನುದಾನದಲ್ಲಿ ವಿವಿಧ ಸೌಲಭ್ಯಗಳನ್ನು ಅನುಷ್ಠಾನಗಳಿಸಲು ಉದ್ದೇಶಿಸಲಾಗಿದ್ದು, ಸಿರುಗುಪ್ಪ ವ್ಯಾಪ್ತಿಯ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

**ಸೌಲಭ್ಯಗಳು**


ಸಿರುಗುಪ್ಪ ಪಟ್ಟಣದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಪ್ಯಾರಾ ಮೆಡಿಕಲ್, ಡಿಪ್ಲೋಮಾ, ಡಿ.ಇಡಿ, ಸಿಪಿಇಡಿ, ಬಿಎ, ಬಿಎಸ್‌ಸಿ, ಬಿಕಾಂ, ಬಿಬಿಎ ಮತ್ತು ಬಿಸಿಎ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುವುದು. ಸಿರುಗುಪ್ಪ ನಗರದ ಹಿಂದುಳಿದ ವರ್ಗಗಳ ಜನಾಂಗದವರಿಗೆ ಶೇ.7.25 ರಡಿ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ, ವಿಶೇಷ ಚೇತನರಿಗೆ ಶೇ.5 ರಡಿ ಪಕ್ಕಾ ಮನೆ ನಿರ್ಮಾಣಕ್ಕಾಗಿ ಸಹಾಯಧನ ನೀಡಲಾಗುವುದು.

**ಬೇಕಾದ ದಾಖಲೆ**

ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, 2 ಫೋಟೋ, ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದೇ ಸೌಲಭ್ಯ ಪಡೆದಿಲ್ಲ ಎಂದು ದೃಢೀಕರಣ ಪ್ರತಿ, ವ್ಯಾಸಂಗ ಪ್ರಮಾಣ ಪತ್ರ, ಕಚ್ಚಾ ಪಕ್ಕಾ ಮನೆ ನಿರ್ಮಾಣಕ್ಕಾಗಿ ಅರ್ಜಿದಾರರ ಹೆಸರಿನಲ್ಲಿರುವ ಆಸ್ತಿಯ ದಾಖಲೆ ಮತ್ತು ಅಂಗವಿಕಲರಿದ್ದಲ್ಲಿ ಅಂಗವಿಕಲತೆಯ ಬಗ್ಗೆ ವೈದ್ಯಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರದ ಪ್ರತಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಿರುಗುಪ್ಪ ನಗರಸಭೆ ಕಾರ್ಯಾಲಕ್ಕೆ ಸಂಪರ್ಕಿಸಬಹುದು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೋರಾಟಗಾರರು ಮೌನವಾದರೆ ಭ್ರಷ್ಟಚಾರಿಗಳ ಸಂಖ್ಯೆ ಏರಿಕೆ: ಶರಣಬಸಪ್ಪ ದಾನಕ್ಕೈ



ಮಲ್ಲಮ್ಮ ನುಡಿವಾರ್ತೆ

ಕೊಪ್ಪಳ: ಯಲಬುರ್ಗಾದ ಮಲಕ ಸಮುದ್ರ ರಸ್ತೆಗೆ ಇರುವ ಶ್ರೀ ಸಿದ್ದರಾಮಯ್ಯ ನಗರದ ಸರ್ವೆ ನಂಬರ 222 ಮತ್ತು ಸರ್ವೆ ನಂಬರ್ 224 ರಲ್ಲಿ ಹಾಲುಮತ ಸಮಾಜದ ಹೆಸರಿನಲ್ಲಿ ಪ್ಲಾಟುಗಳು ಮಾಯವಾಗಿವೆ ಭ್ರಷ್ಟಚಾರದಲ್ಲಿ ಭಾಗಿಯಾದ ತಪಿತಸ್ಥರ ಮೇಲೆ ಬೆಂಗಳೂರಿನ ಉಪ ಲೋಕಯುಕ್ತರು ದಾಳಿನಡೆಸಿ ತನಿಖೆಮಾಡಿ ಹಾಲುಮತ ಸಮಾಜದ ಸಂಘ, ಸಂಸ್ಥೆಗಳಿಗೆ ಹಾಗು ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಕರ್ನಾಟಕ ರಾಜ್ಯ ಹಸಿರು ಸೇನೆ ಹಾಗು ರಾಜ್ಯ ರೈತ ಸಂಘ ( ವಾಸುದೇವ ಮೇಟಿ ಬಣದ) ಯಲಬುರ್ಗಾ ತಾಲೂಕಾ ಅದ್ಯಕ್ಷ ಶರಣಬಸಪ್ಪ ದಾನದಕ್ಕೈ ಅವರು ಅ.30 ರಂದು ಉಪ ಲೋಕಯುಕ್ತರಿಗೆ ದೂರನ್ನು ಸಲ್ಲಿಸಿದ್ದಾರೆ. ದೂರಿನಲ್ಲಿ ಹಾಲುಮತ ಸಮಾಜದ ಅಭಿವೃದ್ಧಿಗಾಗಿ ಮತ್ತು ಸಮಾಜದ ಸಂಘ ಸಂಸ್ಥೆಗಳಿಗೆ ಪ್ಲಾಟುಗಳನ್ನು ವಿತರಿಸಿ ಉಳಿದ ಸದಸ್ಯರಿಗೆ ಹಣ ಕೊಟ್ಟಿರುವ ಸದಸ್ಯರಿಗೆ 30 40 ಸೈಜ್ ಪ್ಲಾಟುಗಳನ್ನು ಹಂಚಿಕೆ ಮಾಡಿಕೊಡಬೇಕು ಎಂದು ನಿರ್ಧಾರ ಮಾಡಲಾಗಿತ್ತು, ತಿಳಿದು ಬದುಕ ಬೇಕಾದವರು ತುಳಿದು ಬದುಕುತ್ತಿದ್ದಾರೆ, ಬೇಲಿಯೆ ಎದ್ದು ಹೊಲವನ್ನು ಮೆದಂತೆ ಆಗಿದೆ, ,ಸಮಾಜಕ್ಕಾಗಿ ಉಳಿಸಿದ ಪ್ಲಾಟುಗಳನ್ನು ಬೇರೆಯವರಿಗೆ ಮಾರಿ ಹಂಚಿಕೆ ಮಾಡಲಾರದೆ ಮೊಸಮಾಡಿದ್ದಾರೆ, ತಪಿತಸ್ಥರ ಮೇಲೆ ಕ್ರಮ ತಗೆದುಕೊಂಡು ತನಿಖೆ ಮಾಡಿ ನಮ್ಮ ಸಮಾಜಕ್ಕೆ ಹಾಗು ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಉಪಲೋಕಯುಕ್ತರಲ್ಲಿ ಶರಣಬಸಪ್ಪ ಕಲ್ಲಪ್ಪ ದಾನದಕ್ಕೈ ಅವರು ದೂರು ಸಲ್ಲಿಸಿ ಮನವಿ ಸಲ್ಲಿಸಿದ್ದಾರೆ. ಹಿನ್ನಲೆ ಎನು? ಹಾಲುಮತ ಸಮಾಜದ ಅಭಿವೃದ್ಧಿಗಾಗಿ ಸರ್ವೆ ನಂಬರ 224 ರ ಪೂಜಾರಪ್ಪ ಬಂಡಿಹಾಳ ಇವರ ಜಮೀನು ಒಂದು ಎಕರೆ ಹನ್ನೊಂದುಗುಂಟೆ ಜಮೀನು ಹಾಗು ಸರ್ವೆ ನಂಬರ 222 ರ ರೇವಣೆಪ್ಪ ಹಿರೇಕುರಬರ ಇವರ ಒಂದು ಎಕರೆ ಜಮೀನು ಖರೀದಿ ಮಾಡಿ ,ಎನ್.ಎ.ಮಾಡಿಸಿ ಅದರಲ್ಲಿ ಸಮಾಜಕ್ಕೆ ಪ್ರಥಮ ಪ್ರಾಮುಖ್ಯತೆ ಕೊಟ್ಟು ಇತರ ಪ್ಲಾಟುಗಳನ್ನು ಹಣ ಕೊಟ್ಟಿರುವ ಸದಸ್ಯರಿಗೆ ಡ್ರಾ ಮಾಡಿ ವಿತರಿಸಬೇಕು ಎಂದು ತಿರ್ಮಾನಿಸಿ ಹಿರಿಯರು ಮತ್ತು ಸದಸ್ಯರು ಕೂಡಿ-ಕೊಂಡು ಅವರ ಹೆಸರಿಗೆ ಎನ್.ಎ ಮಾಡಿದ್ದಾರೆ ಇಲ್ಲಿಯವರೆಗೆ ಲೇಖ್ಖ ಪತ್ರಗಳನ್ನು ನಿಡಿಲ್ಲ, ಇದರ ಬಗ್ಗೆ ವಾರ ಪತ್ರಿಕೆ, ಪಾಕ್ಷಿಕ ಪತ್ರಿಕೆ, ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾದರು ಸುಮ್ಮನಿದ್ದಾರೆ, ಸರ್ವೆ ನಂಬರ 222 ರ ಜಮೀನು ಮಾಲಿಕರು ಇವರಿಗೆ ಸಂಚಾಗರ ಒಂದು ಲಕ್ಷ ರೂ ಕೊಟ್ಟವರು ಯಾರು? ಇದನ್ನು ತಿಳಿಯಲಾರದೆ ಪ್ರಥಮ ಹಂತದಲ್ಲಿ ನಯ ಪೈಸೆ ಕೊಡಲಾರದವರು ಪ್ಲಾಟುಗಳನ್ನು ನುಂಗಿ ನೀರು ಕುಡಿದ್ದಾರೆ, ತಾಳಿದವನು ಬಾಳಿಯೆನು ಎನ್ನುವಂತೆ ತಾಳ್ಮೆಯಿಂದ ಸಹಿಸಿಕೊಂಡು ಬಂದಿರುವೆ, ಗುಬ್ಬಿ ಮೇಲೆ ಬ್ರಹ್ಮಸ್ತ್ರ ಬಿಡುತ್ತಾರೆ, ಇವರದು ತಪ್ಪಿಲ್ಲವೆಂದರೆ ಇದುವರೆಗೂ ಬಹಿರಂಗವಾಗಿ ಸಭೆ ಲೇಖ್ಖ ಪತ್ರಗಳನ್ನು ಏಕೆ ನೀಡಲಿಲ್ಲ? ಇಂತಹ ಭ್ರಷ್ಟಚಾರದಲ್ಲಿ ನಿರತರಾದ ವ್ಯಕ್ತಿ ಹಾಗು ಇವರ ಕುಟುಂಬದವರ ಮನೆಯನ್ನು ಲೋಕಯುಕ್ತರು ಸಮಯ ನೋಡಿ ದಾಳಿ ಮಾಡಿದಾಗ ಇವರ ಭ್ರಷ್ಟಚಾರ ಹೊರಬರಲು ಸಾದ್ಯವಾಗುತ್ತದೆ ಎಂದು ರೈತ ಮುಖಂಡ ಹೊರಾಟಗಾರ ಶರಣಬಸಪ್ಪ ದಾನಕ್ಕೈ ಅವರು ಮಾದ್ಯಮದವರಿಗೆ ಮಾಹಿತಿಯನ್ನು ನೀಡಿದ್ದಾರೆ, ಸಮಾಜ ದೇಶ ನನಗೆ ಎನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜ ದೇಶಕ್ಕಾಗಿ ನಾನು ಎನು ಕೊಟ್ಟೆ ,ನನ್ನ ಕೊಡುಗೆ ಎನು ಎಂಬುದನ್ನು ತಿಳಿಯಾಲಾರದವರು ಇವರು ಸಮಾಜ ಉದ್ದಾರಕರೆ? ಯುವಕರೆ ಜಾಗೃತರಾಗಿರಿ, ಬಾಯಿ ಇದ್ದರು ಮೂಖರಂತೆ, ಕಣ್ಣು ಇದ್ದರು ಕುರುಡರಂತೆ, ಕಿವಿಯಿದ್ದರು ಕಿವಡರಂತೆ ಅಗಿದೆ ನಮ್ಮ ಸಮಾಜದ ಪರಿಸ್ಥಿತಿ ,ಇನ್ನೂ ಮುಂದೆ ಭ್ರಷ್ಟಚಾರಿಗಳನ್ನು ಇವರನ್ನು ಯಾವದೇ ಸಭೆ ಸಮಾರಂಭಗಳಲ್ಲಿ ಕರೆಯಬೇಡಿ ,ಮುಂದಿನ ದಿನಮಾನದಲ್ಲಿ ಇವರಿಗೆ ತಕ್ಕ ಪಾಠವನ್ನು ಕಲಿಸಬೇಕು ಅಂ-ದಾಗ ಇವರು ಜಾಗೃತಿ ಹೊಂದಲು ಸಾದ್ಯ, ನಾವೆಲ್ಲರೂ ಹೋರಾಟದ ಹಾದಿಯಲ್ಲಿ ಸಾಗಿದಾಗ ಭಷ್ಟಚಾರ ನಿರ್ಮೂಲನೆ ಮಾಡಲು ಸಾದ್ಯವಲ್ಲವೆ?

# ಕನ್ನಡ ರಾಜ್ಯೋತ್ಸವ: ಮಕ್ಕಳಿಗೆ ಕನ್ನಡ ಪುಸ್ತಕ ವಿತರಣೆ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ನಗರದ ಶ್ರೀಶೈಲ ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಿಳಾ ಧ್ವನಿ ಮತ್ತು ಕವಿತಾ ಮೀಡಿಯಾ ಸೋರ್ಸ್ ಪ್ರೈ.ಲಿ ವತಿಯಿಂದ ಕನ್ನಡ ರಾಜ್ಯೋತ್ಸವ ನಿಮಿತ್ತವಾಗಿ ವಿದ್ಯಾರ್ಥಿಗಳ ಓದಿನ ಅನುಕೂಲಕ್ಕಾಗಿ ಕನ್ನಡ ಪುಸ್ತಕ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಭುವನೇಶ್ವರಿ ತಾಯಿಯ ಭಾವಚಿತ್ರಕ್ಕೆ ಪುಷ್ಪ ಗೌರವ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಸಾಹಿತಿ ಬಿ.ಎನ್.ಹೊರಪೇಟಿ ಮಾತನಾಡಿ ಸಂಪತ್ತಭರಿತವಾದ ಈ ನಾಡು ಕಲೆ, ಸಾಹಿತ್ಯ ಸಿರಿತನದೊಂದಿಗೆ ತನ್ನದೆಯಾದ ಹಿರಿಮೆ ಗರಿಮೆಯನ್ನು ಹೊಂದಿದೆ ಆದರೆ ಪ್ರಸ್ತುತ ದಿನಗಳಲ್ಲಿ ಮೊಬೈಲ್ ಹಾವಳಿಯಿಂದಾಗಿ ಪುಸ್ತಕ ಪ್ರೀತಿ ,ಭಾಷಾಭಿಮಾನ ಕಡಿಮೆ ಆಗುತ್ತಿರುವುದು ನೋವಿನ ಸಂಗತಿ ಮಕ್ಕಳು ಮೊಬೈಲ್ ಗೀಳಿನಿಂದ ಹೊರಬಂದು ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಜೀವನದುದ್ದಕ್ಕೂ ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಳ್ಳಿ, ಹಿರಿಯರ ಹೆಸರಿನಲ್ಲಿ ಸತ್ಕಾರ್ಯ ಮಾಡಿ.ಕನ್ನಡ ನೆಲ,ಜಲ,ಭಾಷೆ,ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸೋಣ ಎಂದರು.

ಮಹಿಳಾ ಧ್ವನಿ ಸಂಸ್ಥೆಯ ವತಿಯಿಂದ ಮಕ್ಕಳಿಗೆ ಕನ್ನಡ ಪುಸ್ತಕವನ್ನು ವಿತರಿಸಲಾಯಿತು. ಮಕ್ಕಳ ಓದಿನ ಜೊತೆಗೆ ಸಾಹಿತ್ಯ ಆಸಕ್ತಿ ಹೆಚ್ಚಿಸಲು 'ಮಹಿಳಾ ಧ್ವನಿ ಕನ್ನಡ ಪುಸ್ತಕಾಲಯ'ವನ್ನು ಉದ್ಘಾಟಿಸಿ ಸುಮಾರು 50 ಕ್ಕೂ ಹೆಚ್ಚು ಪುಸ್ತಕಗಳನ್ನು ಶಾಲೆಗೆ ನೀಡಲಾಯಿತು. ಇದೇ ವೇಳೆ ಮಾತನಾಡಿದ ಮಹಿಳಾ ಧ್ವನಿ ಸಂಸ್ಥೆಯ ಸಂಸ್ಥಾಪಕಿ ಪ್ರಿಯದರ್ಶಿನಿ ಮಾತನಾಡಿ

ಮಕ್ಕಳಿಗೆ ಓದಿನ ಜೊತೆಗೆ ವಿನಯವಂತಿಕೆಯನ್ನು ಕಲಿಸುವ ಅಗತ್ಯವಿದೆ. ನಮ್ಮ ನಾಡಿನ ಕಲೆ, ಸಾಹಿತ್ಯ ಸಾಧಕರ ಹಿರಿಮೆಯನ್ನು ತಿಳಿಸಬೇಕಿದೆ. ಕನ್ನಡ ಭಾಷಾಭಿಮಾನದಿಂದ ಸಾಹಿತ್ಯ ಸಂಸ್ಕೃತಿಯನ್ನು ಅರಿಯುವ ಪ್ರಯತ್ನ ಮಾಡಿ. ಮಕ್ಕಳು ಗುರುಗಳಿಗೆ ಹಿರಿಯರಿಗೆ ಗೌರವಿಸುವುದನ್ನು ಕಲಿಯಿರಿ. ನಿಮ್ಮ ಓದಿನ ಅನುಕೂಲಕ್ಕಾಗಿ ಉಚಿತವಾಗಿ ದಿನಪತ್ರಿಕೆ ಹಾಗೂ ಪುಸ್ತಕಗಳನ್ನು ನೀಡುವ ಕಾರ್ಯವನ್ನು ನಮ್ಮ ಸಂಸ್ಥೆ ಮಾಡುತ್ತಿದೆ , ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಮಹಿಳಾ ಧ್ವನಿ ಸಂಸ್ಥೆಯು ಸದಾ ಸಿದ್ಧವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರಾದ ಬಾಲನಾಗಮ್ಮ ಗೊಂಡಬಾಳ ಮಾತನಾಡಿ ನಮ್ಮ ಶಾಲೆಯು ಅತೀ ಹಿಂದುಳಿದ ಹಾಗೂ ಕಾರ್ಮಿಕರೇ ಹೆಚ್ಚಾಗಿರುವ ಪ್ರದೇಶವಾಗಿರುವುದರಿಂದ ಮಕ್ಕಳಲ್ಲಿ ಶಿಕ್ಷಣ ಜಾಗೃತಿ ಮೂಡಿಸಲು ಮತ್ತು ಓದಿನ ಆಸಕ್ತಿ ಹೆಚ್ಚಿಸುವಲ್ಲಿ ಶಾಲಾ ಅಭಿವೃದ್ಧಿ ಕಾರ್ಯದಲ್ಲಿ ಮಹಿಳಾ ಧ್ವನಿ ಸಂಸ್ಥೆಯು ಸದಾ ಜೊತೆ-ಯಾಗಿದೆ ಎಂದರು. ಇದೇ ವೇಳೆ ಕಲ್ಪನಾ ದೇಸಾಯಿ, ಸುಧಾ ಕುಲಕರ್ಣಿ, ಸುರೇಖಾ ಹಿರೇಮಠ್, ಮುಸ್ತಿಸಾಬ್ ವಾಲಿಕಾರ್, ಗಿರಿಜಾ ಚಬ್ಬಿ, ಸುನಂದ ಬೋಳನವರ್, ಸುಧಾ ಆರೇರ್, ಅಕ್ಕಮಹಾದೇವಿ ಅಂಗಡಿ ಶಿಕ್ಷಕರು ಮತ್ತು ಮಕ್ಕಳು ಉಪಸ್ಥಿತಿ ಇದ್ದರು.

> ಮಹಿಳಾ ಧ್ವನಿ ಕನ್ನಡ ಪುಸ್ತಕಾಲಯದಿಂದ ನಮಗೆ ತುಂಬಾ ಮಾಹಿತಿ ದೊರೆಯಲಿದೆ,ಈಗಾಗಲೇ ಈ ಸಂಸ್ಥೆಯು ನಮ್ಮ ಶಾಲೆಗೆ ಪ್ರತಿದಿನವೂ ದಿನಪತ್ರಿಕೆಗಳನ್ನು ಒದಗಿಸುತ್ತಿದ್ದು ಹೊರಗಿನ ವಿಚಾರಗಳನ್ನು ತಿಳಿಯಲು ತುಂಬಾ ಅನುಕೂಲವಾಗಿದೆ.ಈ ಗ್ರಂಥಾಲಯದಲ್ಲಿ ಕನ್ನಡ ವ್ಯಾಕರಣ,ಸಾಹಿತ್ಯ, ನಾಟಕ,ಕಾದಂಬರಿ,ಸಂವಿಧಾನ ಹಾಗೂ ವಿಭಿನ್ನ ವಿಷಯ ತಿಳಿಯಲು ಅನುಕೂಲವಾಗಲಿದೆ.

# ಬಿಪ್ಸ್ ಶಾಲೆಯಲ್ಲಿ ನಾಡಿನ ಪರಂಪರೆಯ ದರ್ಶನ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ: ನಗರದ ಪ್ರತಿಷ್ಠಿತ ಬಸವೇಶ್ವರ ಅಂತರಾಷ್ಟ್ರೀಯ ಪಬ್ಲಿಕ್ ಶಾಲೆಯಲ್ಲಿ 70ನೇ ಕನ್ನಡ ರಾಜ್ಯೋತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಸಮಾರಂಭದಲ್ಲಿ ನಾಡಿನ ಪರಂಪರೆಯ ಹಿರೆಮೆಯನ್ನು ಬಿಂಬಿಸುವ ವೇಷಭೂಷಣ ಎಲ್ಲರ ಗಮನ ಸೇಳೆಯಿತು, ಸಮೂಹ ಗೀತೆ ಹಾಗೂ ಸಮೂಹ ನೃತ್ಯಗಳ ಮೂಲಕ ಕನ್ನಡ ನಾಡಿನ ಪರಂಪರೆಯ ಕಲಾ ದರ್ಶನ ಮಾಡಿಸಲಾಯಿತು.

ಕಾರ್ಯಕ್ರಮಕ್ಕೆ ಭುವನೇಶ್ವರಿ ತಾಯಿ ಭಾವಚಿತ್ರಕ್ಕೆ ಪೂಜಿ ಸಲ್ಲಿಸುವ ಮೂಲಕ ಚಾಲನೆ ನೀಡಲಾಯಿತು. ಕನ್ನಡ ಶಿಕ್ಷಕರಾದ ಅಂದಾನಯ್ಯ ಮಾಲಗಿತ್ತಿಮಠ ಅವರು ಕರ್ನಾಟಕ ಏಕಿಕರಣ ಕುರಿತು ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯರಾದ ಸಿ ಬಿ ಸುರೇಶ್ ಹೆಗಡೆಯವರು ಮಾತನಾಡಿ ಕನ್ನಡ ನಾಡು ನುಡಿ ಜಲ ಉಳಿಸಿ ಬೆಳೆಸುವ ಕಾರ್ಯದಲ್ಲಿ ಕನ್ನಡಿಗರು ಶ್ರಮಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ನಾಡಿನ ಪರಂಪರೆಯ ಹಿರಿಮೆಯನ್ನು ಬಿಂಬಿಸುವ ವೇಷಭೂಷಣ ಸಮೂಹ ಗೀತೆ ಹಾಗೂ ಸಮೂಹ ನೃತ್ಯಗಳು. ಸಭಿಕರ ಮನ ರಂಜಿಸಿದವು, ಶ್ರೀಮತಿ ಬರಡಿ ಅವರು ಸ್ವಾಗತ ಕೋರಿದರೆ ಶ್ರೀ ವಿದ್ಯಾರಣ್ಯ ವಂದನಾರ್ಪಣೆ ಸಲ್ಲಿಸಿದರು.

